ಶ್ರೀ: ವಿಶ್ವಕವಿ ರವೀಂದ್ರನಾಥ
ಠಾಗೋರರ ಅಮರಕೃತಿ

ಗೀತಾಂಜಲಿ

ಲೇ: ರವೀಂದ್ರನಾಥ ಠಾಗೂರು
ಅನು: ಶ್ರೀನಂದಾ ಶೆಟ್ಟಿ

1959

ವಿಶ್ವಕವಿ ರವೀಂದ್ರನಾಥ ಠಾಗೋರರ

ಅಮರಕೃತಿ

ಗೀತಾಂಜಲಿ



ಅನುವಾದಕ:

ವೆಂಕಟ್ರಾಯ ಆನಂದ ಶೆಟ್ಟಿ.

ಮಾತೆಯ ಸಾಮೀಪ್ಯ

ಕೊಠಡಿಯ ಬಳಿಯಿಂದ ಅಜಾಗೃತರಂತೆ ನಾವು ನಡೆಯುತ್ತೇವೆ. ನಮಗೆ ಆಹಾರದ ಅವಶ್ಯಕತೆ ಬಿದ್ದಾಗ ಅವಳ ಉಗ್ರಾಣವು ತೆರೆದಿರುತ್ತದೆ. ನಾವು ನಿದ್ರಿಸಲೇ ಬೇಕಾದ ಸಮಯದಲ್ಲಿ ನಮ್ಮ ಹಾಸಿಗೆಯು ಸಿದ್ಧವಾಗಿರುತ್ತದೆ. (ಆದರೆ) ಆ ಸ್ಪರ್ಶ ಮತ್ತು ಧ್ವನಿಗಳ ಅಭಾವ ಮಾತ್ರ ಅಲ್ಲಿರುತ್ತದೆ. ನಾವು ಅವಳ ಬಳಿಯಲ್ಲೆ ಅಲೆದಾಡುತ್ತಿರುತ್ತೇವೆ, ಆದರೆ ಕೈಯನ್ನು ಹಿಡಿದು ಅವಳ ವೈಯಕ್ತಿಕ ಸಾಮೀಪ್ಯವನ್ನು ನಾವೆಂದೂ ಸೇರುವುದಿಲ್ಲ."

—ರವೀಂದ್ರನಾಥ ಠಾಗೋರ್

ವಿಶ್ವಕವಿ ರವೀಂದ್ರನಾಥ ಠಾಗೋರರ
ಅಮರಕೃತಿ

ಗೀತಾಂಜಲಿ

ಅನುವಾದಕ:
ವೆಂಕಟ್ರಾಯ ಆನಂದ ಶೆಣೈ
ಬಿ. ಎಸ್. ಸಿ. (ಒನರ್ಸ್), ಬಿ. ಎಸ್. ಸಿ. (ಟೆಕ್.)
ಮುಂಬಯಿ.

ನಾಡ ಹಿರಿಯ ಸಾಹಿತಿ
ಶಿವರಾಮ ಕಾರಂತರ
ಮುನ್ನುಡಿಯೊಡನೆ

1959

ಪ್ರಕಾಶಕ:
ವಿ. ಎ. ಶೆಣೈ, ಬಿ.ಎಸ್.ಸಿ. (ಒನರ್ಸ್) ಬಿ.ಎಸ್.ಸಿ. (ಟೆಕ್.)
ಬಿ/10 ಕರ್ನಾಟಕ ಬಿಲ್ಡಿಂಗ್
ಮೊಗಲ್ ಲೇನ್, ಮುಂಬಯಿ 16.

Price Rs. 2-00 ಬೆಲೆ ಎರಡು ರೂಪಾಯಿ

ಪ್ರಕಾಶಕ:

ವಿ. ಎ. ಶೆಣ್ಯೆ, ಬಿ. ಎಸ್. ಸಿ (ಒನರ್ಸ್) ಬಿ.ಎಸ್.ಸಿ.(ಟೆಕ್)

ಬಿ /10 ಕರ್ನಾಟಕ ಬಿಲ್ಡಿಂಗ್

ಮೊಗಲ್ ಲೇನ್, ಮುಂಬಯಿ 16

ಪ್ರಥಮಾವೃತ್ತಿ:-

ಜನವರಿ 1959

ಮುದ್ರಕರು:-

ಶ್ರೀ ರಾಮ ಪ್ರಿಂಟಿಂಗ್ ಪ್ರೆಸ್,

ಕಾರ್ಕಳ, (ದ. ಕ)

ಮುನ್ನುಡಿ

ರವೀಂದ್ರನಾಥಠಾಕೂರರವರ ಅನುಭಾವಿಕವನ ಸಂಗ್ರಹವಾದ '**ಗೀತಾಂಜಲಿ**'ಯನ್ನು ಕನ್ನಡಕ್ಕೆ ಅನುವಾದಿಸಿಕೊಡುವ ಪ್ರಯತ್ನವನ್ನು ಶ್ರೀ ವಿ. ಎ. ಶೆಣೈಯವರು ಇಲ್ಲಿ ಮಾಡಿದ್ದಾರೆ. ಪುರಾತನ ಕಾಲದಿಂದಲೂ ಅನುಭಾವಿಕತೆ (Mysticism)ಎಂಬುದು ಒಂದು ಭಗವದ್ಭಕ್ತರ ಜೀವನದ ಅನುಭವದ ಬಗೆಯಾಗಿ ಬಂದಿದೆ. ಭಕ್ತನು ಪರಮಾತ್ಮನಲ್ಲಿ ತಾದಾತ್ಮ್ಯ ತಂದುಕೊಂಡು, ಜಗತ್ತಿನ ಎಲ್ಲೆಲ್ಲೂ ಅವನೇ ಎಂಬ ಭಾವರಸಗಳನ್ನು ಸುಂದರ ಕವನಗಳ ಮೂಲಕ ಹರಿಯಗೊಟ್ಟಿದ್ದಾರೆ. ಇದು ಸಾಹಿತ್ಯ ಮತ್ತು ತತ್ವಜ್ಞಾನಗಳೆರಡೂ ಸಮಾವೇಷಗೊಂಡ ಒಂದು ಕಲಾರೂಪು. ಇಂಥ ಸಾಹಿತ್ಯದಲ್ಲಿ ಮಾತಿನ ಮೋಹಕತೆಯನ್ನೂ, ಅನುಭಾವಿಯ ಶಕ್ತಿ, ಅನುರಕ್ತಿಗಳನ್ನೂ ಬಹು ಸುಂದರವಾಗಿ, ಆಳವಾಗಿ ನಾವು ಕಾಣಬಹುದಾದರೂ, ಆ ಅನುಭಾವಿಗಳು ಬಳಸಿದ– ಮಾತುಗಳ ಎಡೆಯಲ್ಲಿ ಅವ್ಯಕ್ತವಾಗಿ ಉಳಿಯುವ ಧ್ವನಿಯನ್ನು ನಾನು ತಿಳಿದೆ– ಎಂದರೆ ದಿಟ್ಟತನದ ಮಾತಾದೀತು. ರಸಾಸ್ವಾದನೆಗೆ ಸಹೃದಯತೆ ಬೇಕೆಂಬುದು ನಿಜವಾದರೆ, ಅನುಭಾವಿಕ ಜೀವನ ನಮ್ಮ ನಡವಳಿಕೆಯಲ್ಲಿ ಇಲ್ಲದೆ ಹೋದಾಗ ಅನುಭಾವಿ ಕವನಗಳ ಸೌಂದರ್ಯ ಸ್ವಾದನೆ ನಮ್ಮಿಂದಾಗದು. ಆಗ ಹಣ್ಣಿನ ಬರಿಯ ತೊಗಟೆಯ ಬಣ್ಣ ಮೆಚ್ಚೀತು; ತಿರುಳಿನ ಸವಿಯು ದೂರವೇ ಉಳಿದೀತು.

ಭಾರತೀಯ ಕವಿ ಶ್ರೇಷ್ಠರಾದ ರವೀಂದ್ರರ **ಗೀತಾಂಜಲಿಯು** ಈ ವರ್ಗದ ಸಾಹಿತ್ಯ. ಖಲೀಲ್ ಗಿಬ್ರಾನ್, ಕೆಲವು ಸೂಫಿ ಕವಿಗಳು, ಥಾಮಸ್ ಎಕೆಂಪಿಸ್, ಮಧುರ ಭಾವವನ್ನು ಅನುಭವಿಸಿದ ಹಲವು ಭಾರತೀಯ ಸಾಧುಸಂತರು– ತಂತಮ್ಮ ತಾಯ್ನುಡಿಗಳಲ್ಲಿ ಈ ಬಗೆಯ ಸಾಹಿತ್ಯಕ್ಕೆ ಚೇತನ ಕೊಟ್ಟಿದ್ದಾರೆ. ಇವುಗಳಲ್ಲಿ ಬರುವ ಮಾತುಗಳ, ಉಪಮೆಗಳ, ಶಬ್ದದ ಛಾಯೆಯನ್ನು ತಿಳಿದುಕೊಂಡು, ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಪರಿವರ್ತಿಸುವ ಕೆಲಸ ತುಂಬ ಕಷ್ಟದ್ದು. ಹಾಗೆ ಅನುವಾದಿಸುವವರೇ ಇಲ್ಲದೆ ಹೋದರೆ ಅನ್ಯ ಭಾಷೆಯನ್ನು ಮಾತ

ನೋಡುವವರಿಗೆ ಒಬ್ಬ ಕವಿಯ, ಇಲ್ಲವೆ ಅನುಭಾವಿಯ ಸತ್ಯ, ಸೌಂದರ್ಯ ದರ್ಶನ ದೊರೆಯದಾದೀತು. ಮೂಲ ಸಾಹಿತ್ಯವನ್ನು ತಿಳಿಯಲಾರದವರಿಗೆ ಅನುವಾದವೇ ಇಂಬು. ಅಂಥವರ ಸಲುವಾಗಿಯೇ ಶ್ರೀ ಶೆಣೈಯವರು ಪ್ರಯತ್ನಪೂರ್ವಕವಾಗಿ ಈ ಗೀತಾಂಜಲಿಯನ್ನು ಕನ್ನಡಿಸಿದ್ದಾರೆ. ಅದನ್ನು ಮೆಚ್ಚಿ ಸವಿಯುವಂಥ ಸಹೃದಯತೆ ನಮ್ಮ ಜನರಲ್ಲಿ ಮೂಡೀತೆಂದು ಆಶಿಸುತ್ತೇನೆ.

17 – 11 – 1958.
ಪುತ್ತೂರು, ದ. ಕ.

ಇತಿ
ಶಿವರಾಮ ಕಾರಂತ.

ರವೀಂದ್ರ ದರ್ಶನ

೧೮೬೧ನೇ ಇಸವಿ ಮೇ ತಿಂಗಳ ೭ನೆಯ ದಿನ ಕಲ್ಕತ್ತದಲ್ಲಿ ಜನಿಸಿ ೮೦ ವರ್ಷಗಳ ಸುದೀರ್ಘವಾದ ಜೀವನವನ್ನು ನಡೆಸಿ, ರವೀಂದ್ರನಾಥ ಠಾಗೋರರು ಕವಿವರ್ಯ, ನಾಟಕಕಾರ, ಹಾಡುಗಾರ, ಕತೆಗಾರ, ಸಮಾಜ ಸುಧಾರಕ, ಪತ್ರಿಕೋದ್ಯಮಿ, ಉಪಾಧ್ಯಾಯ ಮೊದಲಾದ ಬಿರುದುಗಳನ್ನು ಸಂಪಾದಿಸಿಕೊಂಡರು. ಯಾರ ಕೀರ್ತಿಯು ದಿಗಂತ ವಿಶ್ರಾಂತವಾಗಿದೆಯೊ, ಯಾರ ಲೇಖನೋದ್ಯಮವು ಅರ್ಧ ಶತಮಾನಕ್ಕಿಂತಲೂ ಅಧಿಕ ಅವಧಿಯ ವರೆಗೆ ಪಸರಿಸಿತ್ತೊ ಮತ್ತು ಯಾರ ಕೃತಿಗಳು ದೊಡ್ಡದಾದ ಹತ್ತು ಸಂಪುಟಗಳನ್ನು ತುಂಬುವವೊ, ಅಂಥವರನ್ನು ಇಷ್ಟೆ ಬಿರುದುಗಳಿಂದ ವರ್ಣಿಸಿದರೆ ಸಾಲದು. ಅವರ ವ್ಯಕ್ತಿಪರಿಚಯಕ್ಕಾಗಿ, ಕಲ್ಕತ್ತ ಮುನ್ಸಿಪಲ್ ಗಜೆಟಿನ ಠಾಗೋರ್ ಸ್ಮಾರಕ ವಿಶೇಷಾಂಕ (13-9-1941)ದಿಂದ ಒಂದು ಲೇಖನವನ್ನು ಇಲ್ಲಿ ಕೊಡುತ್ತೇವೆ.

“ಅನೇಕ ವರ್ಷಗಳ ಕೆಳಗಿನ ಮಾತು. ಕವಿವರ್ಯರ ಜೊರಾಸಾಂಕೊ ವಸತಿಯನ್ನು ಹಸನ್ಮುಖಿಯಾದ, ಅಸ್ಪಷ್ಟವಾಗಿ ಬೆಳೆದ ಮೀಸೆಯಿಂದ ಕಂಗೊಳಿಸುವ ಮೇಲ್ದುಟಿಯ, ಭಾವಾವೇಶದಿಂದ ಕಂಪಿಸುವ ಹುಡುಗನೊಬ್ಬನು ಪ್ರವೇಶಿಸಿದನು. ಉತ್ಸಾಹಿತನಾದ ಹಸ್ತಾಕ್ಷರಾನ್ವೇಷಿಯಾಗಿದ್ದನಾ ಹುಡುಗನು ನಿರ್ದಿಷ್ಟವಾದ ಆಸೆಯಿಂದ ಬಂದಿದ್ದನವನು. ಮತ್ತು ಅವನ ಪ್ರಾಯಕ್ಕೆ ತಕ್ಕುದಾಗಿ ಅವನ ಮೇಲೆ ಅಹಂಭಾವವು (Ego) ಚಿಮುಕಿಸಲ್ಪಟ್ಟಿತ್ತು. ಕವಿವರ್ಯರಿಗೆ ಇವನನ್ನು ಕಾಣುವ ಸಮಯವಿದ್ದಿರಲಿಲ್ಲ; ಆದರೆ, ಅವರು ಒಂದು ಕಾಗದದ ಮೇಲೆ ತಮ್ಮ ಹೆಸರನ್ನು ಬರೆದು ಅದನ್ನು ಈ ಹುಡುಗನಿಗೆ ಕಳುಹಿಸಿದರು. ಅದರಿಂದ ಆ ಬಾಲಕನಿಗೆ ಅರ್ಧಜಯವು ಲಭಿಸಿದಂತಾಯಿತು. ಆತನ ಹೆಮ್ಮೆಗೆ ಧಕ್ಕೆಯೊದಗಿತು. ಏಕೆಂದರೆ, ಕವಿವರ್ಯರೊಡನೆ ಆತ್ಮೀಯವಾದ ಸಂಭಾಷಣೆಯನ್ನು ನಡೆಸುವ ಸಲುವಾಗಿ ಮತ್ತು ಪ್ರಾಸಂಗಿಕವಾಗಿ ತನ್ನ ಅರಿವನ್ನು (ಅಜ್ಞಾನದ ಇನ್ನೊಂದು ಹೆಸರು) ಪ್ರದರ್ಶಿಸುವ ಸಲುವಾಗಿ ಬಂದಿದ್ದನವನು. ಆದರೂ,

ಅವನ ವಸ್ತ್ರದ ಹೊದಿಕೆಯ ಚಿಕ್ಕ ಪುಸ್ತಕದಲ್ಲವಾದರೂ, ಕವಿವರ್ಯರ ಹಸ್ತಾಕ್ಷರವು ಅವನಿಗೆ ದೊರಕಿದುದರಿಂದ ಅವನು ಸಂತೋಷಿತನಾದನು

"ಕೆಲವು ವರ್ಷಗಳ ಮೇಲೆ, ಆಗ ತಾರುಣ್ಯದ ಹಂತವನ್ನು ಸೇರಿದ ಈ ಬಾಲಕನಿಗೆ ಒಂದು ಪರಿಸ್ಥಿತಿಯು ಕವಿವರ್ಯರ ಮತ್ತು ಅವರ ಕುಟುಂಬದವರ ಸಾಮೀಪ್ಯವನ್ನು ತಂದೊಡ್ಡಿತು.

"ಬೇಸಿಗೆ ಕಾಲದ ದಿನವಾಗಿತ್ತದು. ಕಲ್ಕತ್ತಾ ನಗರದ ರಸ್ತೆಗಳು -ಆಗ ತಾರ್ ರಸ್ತೆಗಳು ಬಂದಿರಲಿಲ್ಲ- ಕಲ್ಲುಗಳು ಮೇಲಕ್ಕೆದ್ದು, ತಮ್ಮ ಮೇಲೆ ಬಿದ್ದ ತಾಪಯುಕ್ತವಾದ ಸೂರ್ಯ ಕಿರಣಗಳನ್ನು ನಿರ್ದಯೆಯಿಂದ ಪಾದಚಾರಿಗಳ, ಗಾಡಿ ಹೊಡೆಯುವವರ ಮತ್ತು ಕಬ್ಬಿಣದ ಚಕ್ರಗಳಿರುವ ಭಾರವಾದ ಗಾಡಿಗಳನ್ನೆಳೆವ ಅರ್ಧ ಮುಚ್ಚಿದ ಮುಖದ ಕುದುರೆಗಳ ಕಣ್ಗಳ ಕಡೆಗೆಕಳಿಸುತಿದ್ದವು. ಅಂಥ ಒಂದು ಗಾಡಿಯು ಮಧ್ಯಾಹ್ನದಾದಿಯಲ್ಲಿ ಆ ಯುವಕನ ಮನೆಯ ಮುಂದೆ ನಿಂತಿತು ಮತ್ತು ರವೀಂದ್ರನಾಥರು ಮೆಲ್ಲನೆ ಕೆಳಗಿಳಿದು ಮನೆಯನ್ನು ಹೊಕ್ಕರು. ಅವರು ಮನೆಯನ್ನು ಪ್ರವೇಶಿಸಿ ದೊಡನೆ, ಆ ಯುವಕನ ಕುಟುಂಬದವರು ಅವರನ್ನು ಸುತ್ತುಗಟ್ಟಿದರು ಮತ್ತು ಅವರಿಗೆ ಸಪ್ರೇಮ ಸ್ವಾಗತವನ್ನು ಬಯಸಿದರು. ಪ್ರತಿಯೊಂದು ಮುಖದಲ್ಲೂ ವರ್ಣಿಸಲಸಾಧ್ಯವಾದ ನಿರೀಕ್ಷೆಯ ಮಂದಹಾಸವು ಮೂಡಿತ್ತು. ಆದರೆ ಜನ್ಮತಃ ನಟನಾಗಿದ್ದ ರವೀಂದ್ರರ ಮುಖದಲ್ಲಿ ಭಯ ಭಕ್ತಿಯ ಭಾವವಿತ್ತು. ಕಂಪಿಸುವ ಮಂದಧ್ವನಿಯಿಂದ ಅವರು ಆ ತರುಣ ನೊಡನೆ, 'ನಾನು ನಿನ್ನೊಡನೆ ಈ ಹಣವನ್ನೆಂದು ಕಡವಾಗಿ ಪಡಕೊಂಡಿದ್ದೆ? ನಾನು ಹಾಗೆ ಮಾಡಿದ್ದಲ್ಲಿ ನಾನದನ್ನು ಮರುಪಾವತಿ ಮಾಡಲೇಬೇಕು ಎಂದರು. ಆಗ ವಿಚಿತ್ರಕರವಾದ ರೀತಿಯಲ್ಲಿ ಕೆಮ್ಮುತ್ತ ಆ ತರುಣನು ಬೇರೆ ಕಡೆಗೆ ನೋಡತೊಡಗಿದನು. ಅಲ್ಲಿ ಉಪಸ್ಥಿತರಿದ್ದ ಕೆಲವು ಬಾಲಕರು ಕೆಳ ದನಿಯಲ್ಲಿ ನಕ್ಕರು. ಆಗ ರವೀಂದ್ರರು ಮೆಲ್ಲನೆ ತಮ್ಮ ಸುಂದರವಾದ ಉದ್ದ ಅಂಗಿಯೊಳಗಣ ದೊಡ್ಡ ಚೀಲದೊಳಗಿಂದ, ಒಂದುಸಾವಿರ ರೂಪಾಯಿ ಗಳನ್ನು ಕೇಳಿದೊಡನೆ ಕೊಡುತ್ತೇನೆಂದು ಆಶ್ವಾಸನೆ ಕೊಟ್ಟ ಒಂದು ಪತ್ರ ವನ್ನು ಹೊರಕ್ಕೆ ತೆಗೆದರು. ಆ ತರುಣನು ಒಬ್ಬ ಚಿತ್ರಕಾರನಾಗಿದ್ದುದ ರಿಂದ ಅತಿ ಚಾತುರ್ಯದಿಂದ ಫೋರ್ಜರಿ (Forgery)ಯನ್ನು ಮಾಡ

ಲಾಗಿತ್ತು. ಆ ಪತ್ರವು ಕೆಲ ವರ್ಷಗಳ ಕೆಳಗೆ ಪಡಕೊಂಡ ಹಸ್ತಾಕ್ಷರದ ಹಾಳೆಯಾಗಿತ್ತು. ಬಂಗಾಲಿ ವರ್ಷದ ಕೊನೆಯ ತಿಂಗಳ ಯಾವುದೊ ಒಂದು ದಿನದ ತಾರೀಕು ಅದರಲ್ಲಿತ್ತು. ಅದರ ಕೆಳಗೆ ರವೀಂದ್ರನಾಥರು ಪೆನ್ಸಿಲಿನಿಂದ ಚೊಕ್ಕಬಾಗಿ 'ಎಪ್ರಿಲ್ ಫೂಲ್' ಎಂದು ಬರೆದಿದ್ದರು.

"ಹಾಸ್ಯದ ಬುಗ್ಗೆಯು ಒಡೆದುದೆ ತಡ, ಎಲ್ಲ ಕಡೆಗಳಲ್ಲೂ ನಗೆಯು ತುಂಬಿ ಹೋಯಿತು ಮತ್ತು ಅದು, 'ಒಳ್ಳೇಯದು. ನನಗೆ ಅದರಲ್ಲಿನ ವಿನೋದವು ತಿಳಿದಿತ್ತು. ಆದರೆ ಅದೊಂದು ಆಮಂತ್ರಣ ಪತ್ರಿಕೆಯೂ ಆಗಿತ್ತೆಂದು ನನಗೆ ತಿಳಿದಿತ್ತು ಮತ್ತು ಇಗೊಳ್ಳಿ, ನಾನಿಲ್ಲಿದ್ದೇನೆ! ಕ್ರಮಶಃ ನಿಮಗೆಲ್ಲರಿಗೂ (ಬಡ್ಡಿ ಸಹಿತ) ಮರುಪಾವತಿ ಮಾಡಲಿಕ್ಕಿದ್ದೇನೆ' ಎಂದು ರವೀಂದ್ರರು ಹೇಳಿದಾಗ ಕೊನೆಗೊಂಡಿತು. ಆ ಮೇಲೆ ಸಂಗೀತವು, ತಣ್ಣಗಿನ ಶರಬತ್ತಿನ ತಡೆಗಳೊಂದಿಗೆ ಹೊರಹೊಮ್ಮಿತು. ಅವರು ಹಾಡಿದ ಹಾಡುಗಳು ಅವರದೇ ಆಗಿದ್ದುವು ಮತ್ತು ಅವರು ವರವಾಗಿ ಪಡೆದ ವಿಶಿಷ್ಟ ವಾದ ಪ್ರತಿಭಾವಂತ ಸುಮಧುರ ಗಂಭೀರ ಶೈಲಿಯಲ್ಲಿ ಹಾಡಲ್ಪಟ್ಟುವು. ಹಳೆಯದಾದ ಹಾರ್ಮೋನಿಯಮ್ ಪೆಟ್ಟಿಗೆಯು—ಅದನ್ನು (ಸಂಗೀತದ) ವಾದ್ಯವೆಂದು ಏಕೆ ಕರೆದರೊ-ಮುಚ್ಚಿಕೊಂಡೇ ಮೂಲೆಯಲ್ಲಿ ಬಿದ್ದಿತ್ತು. ಏಕೆಂದರೆ ಅದರ ಸಮ್ಮಿಳಿತವಾಗದ ವಿಶಿಷ್ಟವಾದ ಸ್ವರಗಳನ್ನು ಕೇಳಿ ಕವಿ ವರ್ಯರಿಂದ ಸಹಿಸಲಾಗುತ್ತಿರಲಿಲ್ಲ. ಅವರ ಸ್ವಂತದ ಕಂಠವೆ ಸಂಗೀತ ವನ್ನು ಸೃಜಿಸಿತು, ಒಂದು ವಾತಾವರಣವನ್ನೇ ಸೃಜಿಸಿತು ಮತ್ತು ಎಂಥ ವಾತಾವರಣವಾಗಿತ್ತದು!

("ಅಷ್ಟರಲ್ಲಿ) ಸೂರ್ಯನು ಅಸ್ತಂಗತನಾದನು. ಮನೋಹ್ಲಾದಕರ ನಾದ ದಕ್ಷಿಣ ಮಾರುತನು ವಿಶಾಲವಾದ ರಸ್ತೆಗಳ ಮೇಲೆ ಬೀಸುತ್ತಿದ್ದು, ಶಾಂತಿ ಸೌಕರ್ಯಗಳನ್ನು ತರುತ್ತಿದ್ದನು. ಆದರೆ ಆ ಸಂಗೀತದ ವಾತಾ ವರಣದಲ್ಲಿ ಇದಕ್ಕಿಂತಲೂ ಹೆಚ್ಚಿನ ಸಂತೋಷವು ಮೂಡಿತ್ತು. ಕವಿ ವರ್ಯರು ಹಿಂತೆರಳಿ ಹೋದಾಗ, ಆ ತರುಣನ ಕುಟುಂಬದ ಸದಸ್ಯರು ಸ್ವಲ್ಪ ಕಾಲದ ವರೆಗೆ ಸೌಂದರ್ಯದಲ್ಲೂ, ಸಂಗೀತದ ಮಾಧುರ್ಯದಲ್ಲೂ ಮಗ್ನರಾಗಿ ಮೌನದಿಂದಿದ್ದರು" ನಾನು ರವೀಂದ್ರರ ಕುರಿತು ಏನನ್ನಾದರೂ ಹೇಳೆಂದು ಕೇಳಿದಾಗ ಈಗ ಪ್ರಾಯಪ್ರಬುದ್ಧನಾದ ಆ ತರುಣನು ಈ ಕತೆ ಯೊಂದಿಗೆ ಸಂಭಾಷಣೆಯನ್ನು ಪೊದಲು ಮಾಡಿದ್ದನು.

(ಮುಂದುವರಿಸುತ್ತ) ಅವನು, "ರವೀಂದ್ರನಾಥರು ಅಗಣಿತವಾದ ವಿಕಾರಗಳಿಂದ ಕೂಡಿದ ಅಗಾಧವಾದ ನಡತೆಯವರಾಗಿದ್ದಾರೆ ಮತ್ತು ಅವರನ್ನು ವರ್ಣಿಸುವುದೆಂದರೆ ಅಸಾಧ್ಯವೆ ಸರಿ. ನಿಮ್ಮಿಂದ ವರ್ಣಿಸಲಿಕ್ಕಾದರೆ, ಅದನ್ನು ಯತ್ನಿಸಿರಿ. ಅವರು ಕವಿಗಳೆಂದು ನೀವು ಪ್ರಾರಂಭಿಸುತ್ತೀರಿ; ಆ ಮೇಲೆ ಕೂಡಲೆ ಅವರು ಕತೆಗಾರರೂ, ಹಾಡುಗಳನ್ನು ರಚಿಸುವವರೂ, ಹಾಡುವವರೂ, ಅಸಾಮಾನ್ಯವಾದ ತಾಳ್ಮೆಯ ಮತ್ತು ವಿವೇಕದ ಅಧ್ಯಾಪಕರೂ. ಶೈಕ್ಷಣಿಕರೂ, ಮೂಲಭೂತವಾದ ಯೋಚನೆಗಳ ನಿರ್ಮಾತೃಗಳೂ, ಒಂದು ಭಾಷೆಯ ಮತ್ತು ಶೈಲಿಯ ಸೃಷ್ಟಿಕರ್ತರೂ, ಇನ್ನೇನನ್ನೊ ಆದವರೂ ಎಂದು ನೀವು ಹೇಳುವಿರಿ. ಆದರೆ ನಿಜವಾಗಿಯೂ, ಒಮ್ಮೆಗೆ ನೀವು ಅವರನ್ನು ಒಂದೇ ದೃಷ್ಟಿಯಿಂದ ಮಾತ್ರ ನೋಡಲು ಸಾಧ್ಯವಿದೆ· ಮತ್ತು ತತ್‌ಕ್ಷಣದಲ್ಲಿ ನೀವು ಗಮನಿಸಬೇಕಾದ ಅನೇಕ ದೃಷ್ಟಿಗಳಿವೆಯೆಂದೂ ನಿಮಗೆ ತಿಳಿದುಬರುತ್ತದೆ. ನೀವು ನಾಮಪದಗಳನ್ನೂ ವಿಶೇಷಣಗಳನ್ನೂ ಹುಡುಕುತ್ತೀರಿ, ಮತ್ತು ನೀವು ವಿಸ್ಮಯಗೊಳ್ಳುವ ವರೆಗೆ ಅಥವ ಸಂತೃಪ್ತರಾಗುವ ವರೆಗೆ ಒಂದೊಂದೆ ವಿಷಯವನ್ನು ಸ್ಪಷ್ಟೀಕರಿಸುತ್ತ ಹೋಗುತ್ತೀರಿ. ನಿಜಕ್ಕೂ ನಿಮ್ಮ ತಿಳಿವಿನ ಗಡಿಯಿಂದಾವರಿಸಲ್ಪಟ್ಟ ನಿಮ್ಮ ಜಾಗೃತಾತ್ಮನಿಗೆಟಕುವ ಅವರ ಸ್ವಲ್ಪವನ್ನು ಮಾತ್ರ ನಿಮಗೆ ನೋಡಲು ಸಾಧ್ಯವಿದೆ. ಮತ್ತು ಅನೇಕರು ಅಂಥ ಪರಿಸ್ಥಿತಿಯಲ್ಲಿ ಅವರ ವೈಶಾಲ್ಯವನ್ನು ನಿರ್ಧರಿಸಲು ಅವರನ್ನು ಟೀಕಿಸಲು ಅಥವ ಹೊಗಳಲು ಯತ್ನಿಸಿದ್ದಾರೆ. ಅಂಥ ಅನೇಕ ಪ್ರಸಂಗಗಳಲ್ಲಿ ಅವರು ಸೋತು ಹೋಗಿದ್ದಾರೆ ಮತ್ತು ಅವರಿಗೆ ಅದರಲ್ಲಿ ಅಪಜಯವಾಗಿದೆ ಎಂಬುದೂ ಸಹ ಅವರಿಗೆ ತಿಳಿಯದೆ ಹೋಗಿದೆ. ಬೇರೆ ಬೇರೆ ಪಂಥದವರು ಅವರನ್ನು ಒಂದೊಂದು ಪಕ್ಷದಲ್ಲಿರಿಸಲು ಯತ್ನಿಸಿದುದನ್ನು ನಾನು ಕಂಡಿದ್ದೇನೆ. ಅವರ ಅಪಜಯವು ಪ್ರಚಂಡವಾಗಿತ್ತು – ರವೀಂದ್ರರು ವ್ಯರ್ಥರೆಂದೂ. ವಿರೋಧಾಭಾಸವುಳ್ಳವರೆಂದೂ, ಕ್ಷುದ್ರರೆಂದೂ ವಿವರಿಸುವುದರಲ್ಲಿ ಅವರ ಕ್ರೋಧವು ಪ್ರಕಟವಾಯಿತು. ರವೀಂದ್ರರು ವಂಶಪಾರಂಪರ್ಯದಿಂದಲೂ ಆತ್ಮೋನ್ನತಿಯ ಬೆಳವಣಿಗೆಯಿಂದಲೂ ಅತಿ ನಾಜೂಕಾಗಿ ಸಂಯೋಜಿಸಲ್ಪಟ್ಟವರಾಗಿದ್ದುದರಿಂದ (ಅವರ ಗುಣಗಳು) ಪೃಥಃಕರಣಕ್ಕೊಳಗಾಗುವುದಿಲ್ಲ, ಆದರೂ ಪೃಥಃಕರಣಾ ವಿಧಾನದ ಸಹಾಯದಿಂದಲ್ಲದೆ ನಿಮ್ಮ ಮತ್ತು ನನ್ನ ಬುದ್ಧಿಗೆ ರವೀಂ

ದ್ರರನ್ನು ಅರಿಯಲು ಸಾಧ್ಯವೇ ಇಲ್ಲ. ಮತ್ತು ಯಾವಾಗಲೂ ನಿಜವಾದ ರವೀಂದ್ರರು ಬಹುಶಃ ಶಾಂತಿನಿಕೇತನದ ರಕ್ತವರ್ಣದ ಅರುಣೋದಯದಲ್ಲಿ ಅಥವ ಕಿತ್ತಳೆ ಬಣ್ಣದ ಸಂಧ್ಯಾಕಾಲದಲ್ಲಿ ಮಂದಸ್ಮಿತವದನರಾಗಿ ನಮ್ಮಿಂದ ತಪ್ಪಿಸಿಕೊಂಡೇ ಇದ್ದಿರಬೇಕು.

"ಸರಿ, ಹಾಗಾದರೆ ನಿಮಗೆ ನನ್ನ ರವೀಂದ್ರರ ಕುರಿತು ಸ್ವಲ್ಪದರಲ್ಲಿ ಹೇಳುತ್ತೇನೆ. ಈ ಚಿತ್ರಣದಲ್ಲಿ ಚಿತ್ರಿಸಿದ ಅಂಶಗಳು ನಿಜವಾದ ವ್ಯಕ್ತಿಯ ನೈಜತೆಯನ್ನು ಪ್ರಕಟಿಸುತ್ತವೊ (ಅಥವಾ ಇಲ್ಲವೊ) ಎಂಬುದನ್ನು ತಿಳಿಯಲು ನೀವು ಶ್ರಮ ಪಡಬೇಕಾಗಿಲ್ಲ. ಏಕೆಂದರೆ, ಈ ಚಿತ್ರಣವು ಸಂಪೂರ್ಣವಾಗಿ ನನ್ನದೆ ಆಗಿದೆ. ಇದೊಂದು ಭಾವಾವಲೋಕನ (Introspection) ಆಗಿದೆ.

"ಹಸ್ತಾಕ್ಷರ ಪತ್ರವನ್ನು ಪ್ರಮಾಣ ಪತ್ರವನ್ನಾಗಿ ಬದಲಾಯಿಸಿ ಆದರಿಂದ ನಡೆದ ಘಟನೆಯ ಸಮಯದಲ್ಲೊಂದು ದಿನ ರವೀಂದ್ರರು ಆಗಿನ ಅವರ ಸಂಪ್ರದಾಯಕ್ಕೆ ತಕ್ಕುದಾಗಿ ಶೋಭಾಯಮಾನರಾಗಿಯೂ ಗಂಭೀರರಾಗಿಯೂ ಇದ್ದು ನಮ್ಮ ಮನೆಗೆ ಬಂದರು. ಅದು ಅವರ ತೀವ್ರವಾದ ಮಾನಸಿಕ ಏಕಾಗ್ರತೆಯ ಕಾಲವಾಗಿತ್ತು. ಅದನ್ನೀಗ ನಾನು ವಿವರಿಸಲಿದ್ದೇನೆ. ಅವರ ಕೈಯೊಲ್ಲೊಂದು ಪುಸ್ತಕವಿತ್ತು. ಆ ಗಳಿಗೆಯಲ್ಲಿ ನಾನು ನನ್ನ ಕಾಲಿನ ಜೋಡನ್ನು ತಿಕ್ಕಿ ಶುಭ್ರವಾಗಿ ಮಾಡುವುದರಲ್ಲಿ ನಿರತನಾಗಿದ್ದೆ. ಸ್ವಚ್ಛತೆಯ ಸೌಂದರ್ಯಗ್ರಾಹಿಯಾಗಿ ನಾನೀ ಕೆಲಸವನ್ನು ಅನೇಕ ವರ್ಷಗಳಿಂದ ಮಾಡುತ್ತ ಬಂದಿದ್ದೆ. ನಾನಲ್ಲಿಂದೆದ್ದು ಜೋಡು ಕೈಯಲ್ಲಿದ್ದಂತೆಯೆ ಅವರಿಗೆ ಬಾಗಿದೆನು. ಅವರು ಮುಗುಳ್ನಕ್ಕು, 'ಈಗ ಆ ಜೋಡನ್ನು ಒತ್ತಟ್ಟಿಗಿಡು; ಕೈಯಲ್ಲಿ ಜೋಡನ್ನು ಹಿಡಿದು ಬಾಗುವುದಕ್ಕೆ ವಿನಯವೊಂದನ್ನಲ್ಲದೆ ಬೇರೆಯೆ ಅರ್ಥವನ್ನೂ ಕಲ್ಪಿಸಲಿಕ್ಕಾಗುತ್ತದೆ. ಅದರ ಬದಲು ಈ ಪುಸ್ತಕವನ್ನು ತೆಗೆದುಕೊಂಡು ಮಾನಸಿಕ ಕಶ್ಮಲವನ್ನು ಕಳೆ' ಎಂದರು. ಆ ಪುಸ್ತಕವು ಹರ್ಬರ್ಟ್ ಸ್ಪೆನ್ಸರನ 'ಪ್ರಥಮ ತತ್ವಗಳು' (First Principles) ಎಂಬುದಾಗಿತ್ತು. 'ಇದು ಜ್ಞಾನದ ಮಾರ್ಗವಾಗಿದೆಯೆಂದೆಣಿಸಿ ಇದನ್ನು ಓದು. ಒಂದು ಗುರಿಯನ್ನು ಸಾಧಿಸಲು ಬೇಕಾದ ಸಾಧನವನ್ನಾಗಿ ಇದನ್ನು ಕಾಣು; ಗುರಿಯೇ ಇದು ಎಂದು ಭಾವಿಸಬೇಡ' ಎಂದರವರು.

"ಇದಾದ ಸ್ವಲ್ಪ ಸಮಯದಲ್ಲಿ ನಾನು ಅವರೊಡನೆ ಗೊರಾಯಿ ನದಿಯ ಮಾರ್ಗವಾಗಿ ಹೋಗುತ್ತಿದ್ದೆ. ನಾವು ಶೆಲಿಡಾದಿಂದ ಬರುತ್ತಿದ್ದೆವು. ನಮಗೆ ತಿಳಿದಂತೆ ಕವಿವರ್ಯರು ಅಲ್ಲಿ ಅನೇಕ ವರ್ಷಗಳ ವರೆಗೆ ಸಂಪೂರ್ಣ ವಾದ ಏಕಾಂತದಲ್ಲಿ ವಾಸಿಸುತ್ತಿದ್ದರು. ನಾವು ರೈಲ್ವೆಬಂಡಿಯನ್ನು ಹತ್ತಲು ಕುಶಿಯಾ (ನಿಲ್ದಾಣ)ಕ್ಕೆ ಬರುತ್ತಿದ್ದೆವು. ನಮ್ಮ ಬಿಳಿ ಮತ್ತು ಹಸುರು ಬಣ್ಣ ಗಳಿಂದ ಶೃಂಗರಿಸಲ್ಪಟ್ಟ ದೋಣಿಯು ಗೊರಾಯಿ ನದಿಯ ಬೇಸಿಗೆ ಕಾಲದ ನೀಲ-ಹಸರು ಬಣ್ಣದ ನೀರಿನಲ್ಲಿ ಹಂಸಪಕ್ಷಿಯಂತೆ ಚಲಿಸುತ್ತಿತ್ತು ದ ಗಾಳಿಯು ಪ್ರಶಾಂತವಾಗಿತ್ತು ಮತ್ತು ಪ್ರಕಾಶವು ಶೋಭಾಯಮಾನವಾ ಗಿತ್ತು. ಕಣ್ಣಿಗಗೋಚರವಾದ ಅಲೆಗಳು, ಸೂರ್ಯಕಿರಣಗಳು ಒಂದು ನಿರ್ದಿಷ್ಟವಾದ ಕೋನದಲ್ಲಿ ಅವುಗಳ ಮೇಲೆ ಬೀಳಲು ಚಿಕ್ಕಚಿಕ್ಕದಾದ ವಜ್ರದ ಹರಳುಗಳಂತೆ ಪ್ರಜ್ವಲಿಸುತ್ತಿದ್ದುವು. ವಾತಾವರಣವು ಪ್ರಶಾಂತ ವಾಗಿದ್ದು ನಾವು ಹೆಚ್ಚುಕಡಮೆ ದೋಣಿಯನ್ನೂ ರೈಲ್ವೆ ಗಾಡಿಯನ್ನೂ, ನಾವು ಮುಟ್ಟುವ ಸ್ಥಳವಾದ ಕಲ್ಕತ್ತವನ್ನೂ ಸಹ ಮರೆತಿದ್ದೆವು ನಾವು ನಿಜವಾಗಿಯೂ ದೈಹಿಕ ಪ್ರಯಾಣಕ್ಕಿಂತ ಮಾನಸಿಕ ಪ್ರಯಾಣವನ್ನೇ ಆರಂ ಭಿಸಿದ್ದೆವು. ನಾನು ಸ್ಪೆನ್ಸರನ ಆ ಪುಸ್ತಕವನ್ನು ಓದಿದೆನೆಂದೂ, ಅದು ನನ್ನಲ್ಲಿ ಒಂದು ನಿರ್ವಾತ ಪ್ರದೇಶವನ್ನು ತುಂಬಿಸಿತೆಂದೂ ಅವರೊಡನೆ ಹೇಳಿದೆನು. ತತ್ವಗಳಿರಲಿ, ನನಗೆ ನೈಜಪ್ರಸಂಗ (Fact)ಗಳ ಕುರಿತು ಬಹಳೇ ಅಲ್ಪ ತಿಳಿದಿದೆಯೆಂದು ನಾನು ಕಂಡುಕೊಂಡೆನು. ನನ್ನ ಮನಸ್ಸು ಅಲ್ಲೋಲ ಕಲ್ಲೋಲ ಸ್ಥಿತಿಯಲ್ಲಿತ್ತು. ಆದರೂ ಶೈಶವೀ ಪ್ರಾಮಾಣಿಕತೆಯಿಂದ ವಿಶ್ವದ ಮೂಲಭೂತವಾದ ನೈಜತೆಗಳನ್ನು ಅರಿಯಬೇಕೆಂದೂ ನಾನು ಬಯಸಿದ್ದೆನು. ಉದಾಹರಣೆಗಾಗಿ, ನಾನು ನಿರ್ಜೀವ ಪ್ರಕೃತಿಯನ್ನು ಸಜೀವ ಪ್ರಕೃತಿ ಯೊಡನೆ ಹೇಗೆ ಜೋಡಿಸಬಹುದೆಂಬುದನ್ನು ಅವರು ನನಗೆ ವಿವರಿಸಬಲ್ಲರೆ?

"ಕವಿವರ್ಯರು ನಕ್ಕುಬಿಟ್ಟರು. ನಮ್ಮ ಪ್ರಾಚೀನ ಕಾಲದ ಋಷಿ ವರ್ಯರು ತಮ್ಮ ಆಶ್ರಮದ ವೃಕ್ಷಗಳ ನೆರಳಲ್ಲಿ ತಮ್ಮ ಶಿಷ್ಯವೃಂದಕ್ಕೆ ಜ್ಞಾನೋದಯವನ್ನನುಗ್ರಹಿಸುವಾಗ ಅವರ ಗಂಭೀರ ಮುಖದಲ್ಲಿ ಪ್ರಜ್ವ ಲಿಸುವ, ಅಶಾಶ್ವತವಾದಗಳಿಗೆ ಗಳಿಗೆಗಳಲ್ಲಿ ಮಾತ್ರ ತೋರಿಬರುವಂಥ ಮಂದಹಾಸವೇ (ಅವರ ಮುಖದಲ್ಲಿ) ಮೂಡಿತ್ತು.

"ಇದೆಲ್ಲವೂ ಈ ಶತಮಾನದ ಆದಿಯಲ್ಲಿ ಸಂಭವಿಸಿತು. ವಿಜ್ಞಾನಿಗಳು ಆಧುನಿಕ ಅಣುಭೌತಶಾಸ್ತ್ರ (Atomic Physics)ವನ್ನು ರಭಸದಿಂದ ಕಲಿಯಲಾರಂಭಿಸಿದ್ದಿರಲಿಲ್ಲ. ಆದರೂ, ನಾನು ಪದಾರ್ಥದ ಅತೀ ಸೂಕ್ಷ್ಮ ವಾದ ಕಣಗಳಲ್ಲಿ ಸಂಗ್ರಹಿಸಲ್ಪಟ್ಟ ಮತ್ತು ಅನೇಕ ಸಲ ಅವುಗಳಿಂದ ಬಿಡು ಗಡೆ ಮಾಡಲ್ಪಡುವ ಶಕ್ತಿಗಳ ಅಗಾಧತೆಯ ಮೇಲೆ ಒಂದು ಭಾಷಣವನ್ನೇ ಕೇಳಿದೆನು. ಅವುಗಳ (ಸೂಕ್ಷ್ಮಕಣಗಳ) ಬಹಳ ದೊಡ್ಡದಾದ ಗುಂಪುಗಳು ಸಾಮರಸ್ಯದಿಂದ ವರ್ತಿಸುತ್ತಿದ್ದುವಲ್ಲದೆ, ಸಿಕ್ಕಾಪಟ್ಟೆಯಾಗಿ ವರ್ತಿಸುತ್ತಿರ ಲಿಲ್ಲ. ಬರೇ ಶಕ್ತಿಮಾತ್ರವಲ್ಲದೆ, ಜಾಗ್ರತಾವಸ್ಥೆಯೂ (Conscious-ness) ಆಗಿದ್ದ ಅದು ಎಲ್ಲ ವಸ್ತುಗಳಲ್ಲಿ ನೆಲೆಸಿದ್ದಿರಲೂಬಹುದು. ಆ ಗುಣವೇ ಕಲ್ಪನೆಗೆಟಕುವ ಪ್ರತಿಯೊಂದರ ತಳಗಟ್ಟಾಗಿರಲೂಬಹುದು. ಆ ಗುಣಕ್ಕೂ ಹೊರಗಾಗಿ, ಅಲ್ಲಿ ಬಹುಶಃ ಸ್ವಭಾವಾತೀತವಾದ, ಸಂಘಟ ನೆಯ ಘಟಕ ಪೊಂದಿರಲೂಬಹುದು.

"ಲೆಮರೆಕ್ ಮತ್ತು ಡಾರ್ವಿನರು ಮುಂದೆ ಸಂಪೂರ್ಣಗೊಳಿಸಿದ, ವಿಕಾಸವಾದ (Theory of Evolution) ದ ಕುರಿತು ಮೊದಲೇ ಸೂಚಿಸಿದವರಲ್ಲಿ ಹರ್ಬರ್ಟ್‌ಸ್ಪೆನ್ಸರನು ಒಬ್ಬನಾದಲ್ಲಿ ರವೀಂದ್ರರು ಆಧುನಿಕ ಭೌತಶಾಸ್ತ್ರದ (Physics) ಭವಿಷ್ಯವನ್ನೇ ಹೇಳಿದವರಾಗಿದ್ದರು. ಅಲ್ಲ, ಅದಕ್ಕಿಂತಲೂ ಹೆಚ್ಚಿನವರಾಗಿದ್ದರವರು. ವಿಜ್ಞಾನದ ತಾತ್ವಿಕ ಹಿನ್ನೆಲೆ ಯನ್ನವರು ಕಂಡುಕೊಂಡು ಅದನ್ನು ಸಾರಿದ್ದರು. ಈ ಹಿನ್ನೆಲೆಯ ಬರಿ ಸ್ವಲ್ಪವಾದ ಅಸ್ಪಷ್ಟ ದೃಶ್ಯವು ಮಾತ್ರ ಈಗ ಕಾಣಲಾಗುತ್ತಿದೆ. ಅವರು ಇದಕ್ಕಿಂತಲೂ ಹೆಚ್ಚಿನವರಾಗಿದ್ದರು. ಅವರು ವಿವರಿಸಲಸಾಧ್ಯವಾದ ಅಜ್ಞಾತವಾಗಿದ್ದ ಪದಾರ್ಥದ ಚಿಹ್ನಾರ್ಥ ಮೌಲ್ಯ (Symbolical Value)ವೆಂದೂ ಕರೆಯಬಹುದಾದ ಕೊನೆಯ ಪಾರಮಾರ್ಥಿಕ ನೈಜತೆ ಯ ಪ್ರಾಮುಖ್ಯತೆಯನ್ನು ಘೋಷಿಸಿದ್ದವರಾಗಿದ್ದರು.

"ಗೊರಾಯಿ ನದಿಯಲ್ಲಿನ ಆ ಚಿಕ್ಕದಾದ ದೋಣಿಯಲ್ಲಿ ಕೊಟ್ಟ ಪ್ರವ ಚನವು ನನಗಾಗಿ ಸ್ವರ್ಣದ್ವಾರವನ್ನು ತೆರೆಯಿತು. ನನ್ನ ರವೀಂದ್ರನಾಥರು ಸತತವಾಗಿಯೂ ಶ್ರೇಷ್ಠರಾದ ಗುರುಗಳೆಂದು ನಿಮಗೆ ತಿಳಿಯದೆ?

"ಅವರ ಜೀವನದಲ್ಲಿನ ಅತ್ಯಂತ ಏಕಾಗ್ರತೆಯ ಕಾಲದ ಕುರಿತು ನಾನೀಗ ನಿಮಗೆ ಹೇಳುತ್ತಿರುವುದು. ನಾನು ನೋಡಿದುದು ಹಾಗಾಗಿತ್ತು. ಪ್ರಶಾಂತವಾದ ಧ್ಯಾನಕ್ಕೋಸ್ಕರ ಅವರು ಶಿಲಿಡಾಕ್ಕೆ ತೆರಳುತ್ತಿದ್ದರು. ಮಾನವತೆಗೊಂದು ಸಂದೇಶವನ್ನು ಕೊಡಲಿಕ್ಕಿರುವ ಮತ್ತು ಪತಿತರಾದವರಿಗೆ ಆಶ್ವಾಸನೆಯನ್ನು ತರುವ ಪ್ರತಿಯೊಬ್ಬ ಮೇಧಾವಿಯು ಬಹುಶ: ಈ ಅವಸ್ಥೆಯಲ್ಲಿರಬೇಕೆಂದು ತೋರುತ್ತದೆ ಗೌತಮ ಬುದ್ಧನೂ, ಯೇಸು ಕ್ರಿಸ್ತನೂ ಈ ಅವಸ್ಥೆಯಲ್ಲಿದ್ದರು ಮತ್ತು ಹೀಗೆಯೇ ಅಧುನಿಕ ವಿಜ್ಞಾನಿಯು ತನ್ನ ಪ್ರಯೋಗಶಾಲೆಯಲ್ಲಿ ಹುದುಗಿರುತ್ತಾನೆ. ಆ ಕಾಲವು ಶಿಸ್ತಿನದಾಗಿತ್ತು. ಯೊಜನೆಗಳನ್ನು ವ್ಯವಸ್ಥಿತಗೊಳಿಸುವದರಲ್ಲೂ ಮುಂದೆ ಕೈಕೊಳ್ಳುವ ಕಾರ್ಯಕ್ರಮನ್ನು ನಿರ್ಧರಿಸುವುದರಲ್ಲೂ ವ್ಯಯಿಸುವಂಥದ್ದಾಗಿದೆ. ರವೀಂದ್ರನಾಥರು ಒಂದು ಕೆಲಸವನ್ನು ಮಾಡಲು ನಿರ್ಧರಿಸಿದ್ದರು. ಇದರ ಪರಿಣಾಮವನ್ನು ನಾವೀಗಿನ ಶ್ರೇಷ್ಟ ಸಂಸ್ಥೆಯಾಗಿದ್ದ ವಿಶ್ವ ಭಾರತಿಯಲ್ಲಿ ನೋಡುತ್ತೇವೆ. ನಮಗೆ ತಿಳಿದಿರುವಂತೆ ಅದರ ಪ್ರಾರಂಭವು ಅಲ್ಪದರಲ್ಲಾಯಿತು. ಆದರೆ ಅದರ ಯೋಜನೆಗಳೂ ಆದರ್ಶಗಳೂ ಸದಾ ಅಲ್ಲಿದ್ದುವು. ಶಿಲಿಡಾದಲ್ಲಿ ಅವುಗಳ ಜನನವಾಗಿದ್ದಿತು.

"ಈ ಸಮಯದಲ್ಲಿ ಅವರೂ, ಸಾಹಿತಿಗಳೂ ತಮ್ಮ ಮಿತ್ರರೂ ಆಗಿದ್ದ ಶ್ರೀಶ್ಚಂದ್ರ ಮಜೂಮ್ದಾರರೊಡನೆ ಗಿರಿಧಿಯಲ್ಲಿ ವಾಸಿಸುತ್ತಿದ್ದರು. ಒಂದು ದಿನ ಸಾಯಂಕಾಲದ ಸಮಯವಾಗಿತ್ತು. ಸೂರ್ಯನು ದೂರದ ಬೆಟ್ಟಗಳಾಚೆ ಅಡಗಿದ್ದನಷ್ಟೆ. ಗಾಳಿಯಲ್ಲಿನ ಧೂಳಿನ ಕಣಗಳು ರಕ್ತವರ್ಣವನ್ನು ತಳೆದಿದ್ದುವು. ಅವರು ತಮ್ಮ ಕೋಣೆಯಿಂದ, ಅಲ್ಲೋಲಕಲ್ಲೋಲ ಮನಸ್ಕರಾಗಿದ್ದಂತೆಯೇ ಹೊರಗೆ ಬಂದರು. ರಕ್ತವರ್ಣದ ಪ್ರಭೆಯು ಅವರ ಹರಿಯುತ್ತಿದ್ದ ತಲೆಗೂದಲನ್ನು ಗಡ್ಡವನ್ನೂ ಆಕ್ರಮಿಸಿತು. ದೂರದೃಷ್ಟಿಯು ಅವರ ಕಣ್ಣುಗಳಲ್ಲಿತ್ತು. ನಾವಾಗ ಅಂಗಳದಲ್ಲಿದ್ದು ಸ್ವಲ್ಪ ಗಲಭೆಯಲ್ಲಿ ಮಗ್ನರಾಗಿದ್ದೆವು. ಅಲ್ಲಿ (ರವೀಂದ್ರರ ಪುತ್ರರಾದ) ರತೀಂದ್ರರೂ ತ್ರಿಪುರದ ಮಹರಾಜಕುಮಾರ ವೃಜೇಂದ್ರಕಿಶೋರ್'ದೇವ್ ಬರ್ಮನರೂ ಇದ್ದು, ಆ ದಿನದ ಬೆಳಿಗ್ಗೆ ನಾನು ಮಜೂಮ್ದಾರರ ಗಡ್ಡವನ್ನು ಫ್ರೆಂಚ್ ಪದ್ಧತಿಯಲ್ಲಿ ಕತ್ತರಿಸಿದ ಮೇಲೆ ಅವರು ಮೊದಲಿನದಕ್ಕಿಂತಲೂ ಹತ್ತು

ಪಾಲು ಅಂದವಾಗಿ ತೋರುತ್ತಾರೆಂದು ಅವರೊಪ್ಪುವಂತೆ ಮಾಡಲು ಯತ್ನಿಸುತ್ತಿದ್ದೆವು. ಕವಿವರ್ಯರು ಆಗಮಿಸಿದಾಗ ನಾವೆಲ್ಲರೂ ಮೌನವನ್ನು ತಳೆದೆವು. ಶಾಂತಿನಿಕೇತನದಲ್ಲಿನ ಶಾಲೆಯ ಕುರಿತು ತಾವು ನಿರ್ಧರಿಸಿದ್ದೇವೆಂದೂ, ಕೆಲವು ವಿಷಯಗಳನ್ನು ತಮ್ಮ ಕೆಲವು ಶೈಕ್ಷಣಿಕ ಮಿತ್ರರೊಡನೆ ಪ್ರಸ್ತಾಪಿಸಲು ತಾವು ಅದೇ ಕ್ಷಣಕ್ಕೆ ಕಲ್ಕತ್ತಕ್ಕೆ ಹೋಗಲಿದ್ದೇವೆಂದೂ ಘೋಷಿಸಿದರು. ತತ್ಕ್ಷಣದಲ್ಲಿ ಅವರು ಕಲ್ಕತ್ತಕ್ಕೆ ಹೋಗುವ ರೈಲ್ವೆ ಗಾಡಿಯನ್ನು ಹಿಡಿದು ಮಾಯವಾದರು. ಕೆಲದಿನಗಳಮೇಲೆ ಅವರು ಹಿಂತಿರಳಿದಾಗ ಅವರ ಪ್ರಸನ್ನವದನದಲ್ಲಿ ತೃಪ್ತಿಯ ಚಿಹ್ನೆಗಳನ್ನು ನಾವು ಓದಿದೆವು.

"ಕಲ್ಕತ್ತದಲ್ಲಿನ ಚರ್ಚೆಗಾಗಿ ಥಕ್ಕನೆ ಕೈಕೊಂಡ ಈ ನಿರ್ಗಮನವು ಪ್ರಗತಿಪರ ಕಾರ್ಯವಾಗಿತ್ತು. ಆ ಕಾಲದಲ್ಲಿ ಅವರು ಅನುಭವಿಸುತ್ತಿದ್ದ ಧ್ಯಾನಮಗ್ನತೆಯಿಂದಾಗಿ ಅದು ಪ್ರಚೋದಿಸಲ್ಪಟ್ಟಿತ್ತು. ಅದನ್ನು ತಾತ್ಕಾಲಿಕ ಆವೇಶ ಪ್ರೇರಿತಕಾರ್ಯವೆನ್ನಲಾಗದು. ಆದರೆ ಕವಿವರ್ಯರ ವಿಷಯದಲ್ಲಿ ಹಾಗೆಯೇ ಹೇಳಬೇಕೆಂದು ನನಗನಿಸುತ್ತದೆ. ಅವರು ಆ ಮೊದಲು ಕೈಕೊಂಡ ಯಾವ ಕಾರ್ಯವನ್ನೂ ಅರ್ಧದಲ್ಲೆ ಬಿಟ್ಟಿರಲಿಲ್ಲವುದರಿಂದ ಅವರು ಈ ಕಾರ್ಯವನ್ನೂ ಕೈಕೊಂಡರು. ಅವರು ದೃಢಮನಸ್ಕರಾಗಿದ್ದು ಒಂದು ಉದ್ದೇಶವನ್ನು ಸಾಧಿಸುವ ಸಲುವಾಗಿ ಅಗಣಿತವಾದ ಶ್ರಮವನ್ನು ವಹಿಸುತ್ತಿದ್ದರು. ಆದರೆ ಅವರ ಪ್ರಸಂಗದಲ್ಲಿ ಅವರು ಕೈಕೊಂಡ ಯತ್ನ ಅಥವ ಶ್ರಮಗಳ ಅರಿವು ಅವರಿಗಿರುತ್ತಿರಲಿಲ್ಲ. ಏಕೆಂದರೆ ಅವರು ನಮ್ಮಂತೆ ಫಲಕ್ಕಾಗಿ ಅತ್ಯಾಸೆಯಿಂದ ಹಂಬಲಿಸುತ್ತಿರಲಿಲ್ಲ. ಅವರ ಅತಿಮಾನುಷವಾದ ಬುದ್ಧಿವಂತಿಕೆಯು ಅವರಿಗೆ ವಿವೇಕವನ್ನು ಕೊಡುತ್ತಿತ್ತು. ಈ ವಿವೇಕವನ್ನು ಸರಿಯಾದ ಬೇರೆ ಶಬ್ದದ ಅಭಾವವಿದ್ದುದರಿಂದ ನಾನು 'ದಿವ್ಯದೃಷ್ಟಿ' **(clairvoyance)** ಎಂದು ಕರೆಯುತ್ತೇನೆ.

"ಮತ್ತು ಶಾಂತಿನಿಕೇತನದಲ್ಲಿ ಸ್ಥಾಪಿಸಲ್ಪಡುವ ಸಂಸ್ಥೆಯ ಕುರಿತು ನಿರ್ಣಯವನ್ನು ತೆಗೆದುಕೊಂಡಾಗ, ಕವಿವರ್ಯರ ಆಸಕ್ತಳಾದ ಒಬ್ಬ ಹೆಂಗಸು ಈ ವಿಷಯದ ಕುರಿತು–ಅದರಲ್ಲೂ ಆರ್ಥಿಕ ವಿಷಯದ ಕುರಿತು–ಬೇಗ್ನಾಗಿ ಯೋಚನೆಯನ್ನು ಅವರು ಮಾಡಿದ್ದಾರೆಯೆ ಎಂದು ಕೇಳಿದಳು.

ಅದಕ್ಕೆ ತಾನು ಕೈಕೊಳ್ಳುವ ಈ ಮಹತ್ಕಾರ್ಯವು ವಾಣಿಜ್ಯದಲ್ಲಿನ ವ್ಯವಹಾರ ದಂತಿಲ್ಲವೆಂದು ಉತ್ತರಿಸಿದರವರು. ಇಲ್ಲಿ ಜ್ಞಾನಪ್ರಸಾರವನ್ನೂ, ಮಕ್ಕಳಿಗೆ ಒಳ್ಳೆಯ ನಡತೆಯನ್ನು ಕಲಿಸುವುದನ್ನೂ ಲಾಭವೆಂದೆಣಿಸದಿದ್ದರೆ, ಇತರ ಲಾಭಗಳಿಸುವ ಪ್ರಶ್ನೆಯೇ ಇರಲಿಲ್ಲ. ಅಲ್ಲದೆ, ಅವರು ಮನಸ್ಸಿನಲ್ಲಿ ರೂಪಿಸಿದ ಕಾರ್ಯವನ್ನು ಗುಣಿಕೆಯಿಂದಲೆ ಅಷ್ಟರವರೆಗೆ ಅವರು ಸಾಧಿಸಿದ್ದಿರಲೇ ಇಲ್ಲ. ಆದರೂ ಈ ಗುಣಿಕೆಯ ಅಭಾವವು ಕವಿವರ್ಯರು ತಮ್ಮ ಸರ್ವಸ್ವವನ್ನು ತಮ್ಮ ಉದಾತ್ತ ಉದ್ದೇಶಕ್ಕಾಗಿಯೇ ಅರ್ಪಿಸುವಂತೆ ಮಾಡಿತೆಂದು ನನಗೆ ತಿಳಿದುಬಂದಿತು. ಆ ಸಾಧುವಾದ ಮತ್ತು ಉದಾರಿಯಾದ ಹೆಂಗಸು (ಅವರ ಧರ್ಮಪತ್ನಿ) ತನ್ನ ಸರ್ವಸ್ವವನ್ನೂ ಸಹ ತನ್ನ ಪತಿಯ ಉದ್ದೇಶ ಸಾಧನೆಗಾಗಿ ಅರ್ಪಿಸಿದಳು. ಬಂಗಾಳವು (ಏಕೆ, ಭಾರತವು—ಪ್ರ.) ಇದಕ್ಕೆ ತಕ್ಕ ಕೃತಜ್ಞತೆಯನ್ನು ಸಲ್ಲಿಸುವುದೇ? ಮತ್ತು ಇದನ್ನು ನೆನಪಿನಲ್ಲಿಟ್ಟು ಕೊಳ್ಳುವುದೇ?

"ಶಿಲಿಡಾದಲ್ಲಿನ ಅವರ ಧ್ಯಾನಮಗ್ನತೆಯ ದಿನಗಳು ಅವರ ಮೇಧಾವಿತನದ ಪ್ರೌಢ ಅನುಭಾವಿ ದಿನಗಳೂ ಆಗಿದ್ದುವೆಂದು ನನಗೆ ತೋರುತ್ತದೆ. ಹೆಚ್ಚುಕಡಿಮೆ ಸಂಪೂರ್ಣವಾಗಿ ಮೌನದಿಂದಿದ್ದು ಮುಂಜಾವಿನಿಂದ ಸಂಜೆಯ ವರೆಗೆ ಮತ್ತು ಅನೇಕ ಸಲ ರಾತ್ರಿಯಲ್ಲೂ ಇದಕ್ಕಾಗಿ ಅವರು ತಮ್ಮ ಸರ್ವಸ್ವವನ್ನೂ ಧಾರೆಯೆರೆಯುತ್ತಿದ್ದರು. ಕೆಲವು ಸಲ ಅವರು ವಿಶ್ರಮಿಸಿ, ತಮ್ಮ ಹಾಡುಗಳನ್ನೂ, ಗದ್ಯಭಾಗವನ್ನೂ ಹಾಡಿ, ಓದಿತೋರಿಸುತ್ತಿದ್ದರು. ಆ ಕಾಲದ ಆಶ್ಚರ್ಯಕರವಾದ ಹಾಡುಗಳನ್ನವರು ನಮಗಾಗಿ ಹಾಡುತ್ತಿದ್ದರು. ಆ ಹಾಡುಗಳ ಸಂಗೀತ ಪ್ರವಾಹದ ಏರಿಳಿತಗಳು ಮೆಚ್ಚುಗೆ ಮತ್ತು ಸಂತೋಷಗಳಿಂದ ನಮ್ಮನ್ನು ಮುಗ್ಧರನ್ನಾಗಿ ಮಾಡುತ್ತಿದ್ದುವು. ಮತ್ತು ಕೆಲವು ಸಲ ತಮ್ಮ ಬರಹಗಳಲ್ಲಿ, ಶ್ರೇಷ್ಠಕವಿಗಳ ಬರಹಗಾರರ, ವಿಜ್ಞಾನಿಗಳ ಮತ್ತು ತತ್ವಜ್ಞಾನಿಗಳ ಬರಹಗಳಲ್ಲಿ ಹುದುಗಿಕೊಂಡಿದ್ದ ನೈಜ ಪ್ರಸಂಗಗಳನ್ನೂ, ತತ್ವಗಳನ್ನೂ ಅವುಗಳ ಪ್ರಾಮುಖ್ಯತೆಯನ್ನೂ ವಿವರಿಸುತ್ತಿದ್ದರು. ಅದೇ ನಿಜವಾದ ಕಲಿಸುವಿಕೆಯಾಗಿತ್ತು. ಕಲಿಸುವಿಕೆಯ ವಸ್ತು ಮಾತ್ರವಲ್ಲದೆ, ಕಲಿಸುವ ರೀತಿಯೂ ಸಹ ಜ್ಞಾನಪ್ರಚೋದಕವೂ ಸ್ಫೂರ್ತಿದಾಯಕವೂ ಆಗಿದ್ದಿತು. ಅವರ ಉಪಮೆಗಳೂ, ಕಲ್ಪಿತ ಎಣಿಕೆಗಳೂ,

ಕ್ಲುಪ್ತಕಾಲೀನ ನೈಜ ಪ್ರಸಂಗಗಳೂ ಮತ್ತು ನಿಶ್ಚಿತವಾದ ತರ್ಕಬದ್ಧವಾದ ಅಭಿಪ್ರಾಯಗಳೂ ನಮ್ಮನ್ನು ದಿಙ್ಮೂಢರನ್ನಾಗಿಸುತ್ತಿದ್ದುವು.

"ಸರಿ, ನಾನು ರವೀಂದ್ರನಾಥರನ್ನು ಇತರ ವಿಷಯಗಳಲ್ಲೂ ಕಂಡಿದ್ದೇನೆ, ಆದರೆ ಪ್ರತಿಯೊಂದು ಸಲ ಅವರನ್ನು ಗುರುವಾಗಿಯೇ ಕಂಡಿದ್ದೇನೆ.

"ಅವರೊಡನೆ ಸ್ನೇಹವನ್ನು ಗಳಿಸಿದ ತರುಣನೊಬ್ಬನು ಅವರ ಪುಸ್ತಕಗಳನ್ನು ಕದ್ದನೊಮ್ಮೆ. ಅವನನ್ನು ಕ್ಷಮಿಸಲಾಯಿತು. ಒಬ್ಬ ಮನೆಯಾಳು ಅವರ ಅರಿವೆಗಳನ್ನು ಕದ್ದನು, ಆದರೂ ಅವನನ್ನು ಕೆಲಸದಿಂದ ತೆಗೆದು ಹಾಕಲಿಲ್ಲ. ಹಲವರು ಅವರೊಡನೆ ಹಣವನ್ನು ಕಡವಾಗಿ ಪಡಕೊಂಡರು, ಮತ್ತು ಸ್ವಲ್ಪ ಸಮಯದ ವರೆಗೆ ತಲೆಮರೆಸಿಕೊಂಡು ಆ ಮೇಲೆ ಪುನಃ ಕಡವಾಗಿ ಪಡಕೊಳ್ಳಲು ಬಂದರು. ಅವರ ಬಯಕೆಯನ್ನೀಡೇರಿಸಲಾಯಿತು. ಅನೇಕ ಜನರು ಅವರನ್ನು ಟೀಕಿಸುವ ಸೋಗಿನಲ್ಲಿ ಅವರನ್ನು ತೆಗಳಿದ್ದರು. ಅವರಿಗೆಂದೂ (ಕವಿವರ್ಯರ ಮನೆಯಲ್ಲಿ) ಸ್ವಾಗತವಿಲ್ಲದಿರುತ್ತಿರಲಿಲ್ಲ. ಮೂಢರು ಅನೇಕಸಲ ಅವರ ಕಾಲಬೆರಳನ್ನು ಮೆಟ್ಟಿ ಹೋಗುತ್ತಿದ್ದರು. ಆ ನೋವನ್ನು ಮುಗುಳ್ನಗೆಯಿಂದ ಸಹಿಸಲಾಗುತ್ತಿತ್ತು. ತಪ್ಪುಗಾರರನ್ನು ಅವರು ಖಂಡಿಸಿದುದನ್ನು ನಾನೆಂದೂ ನೋಡಲಿಲ್ಲ. (ಆ ತಪ್ಪುಗಾರನು) ಯಾರಾಗಿದ್ದರೂ, ಅದೊಂದು ದೊಡ್ಡದೆಂದೆಣಿಸಲ್ಪಡುತ್ತಿರಲಿಲ್ಲ. ಅವನು, ಸಾಧ್ಯವಿದ್ದಲ್ಲಿ, ಸರಿದಾರಿಗೆ ತರಲ್ಪಡುವ ವಸ್ತುವಾಗಿದ್ದನು. ಆದರೆ ಅವರು ಕೊಲೆ, ಪಾಪ, ಮೈಗಳ್ಳತನ ಅಥವಾ ಅಜಾಗರೂಕತೆಯೊಂದಿಗೆ ತಲೆಬಾಗಿ ಸಹಕರಿಸಿದ ಒಂದೇ ಒಂದು ದೃಷ್ಟಾಂತವನ್ನೂ ನಾನು ನೋಡಲಿಲ್ಲ. ಆ ಸಮಯದಲ್ಲಿ ಅವರ ಕೋಪವು ಭಯಂಕರವಾದ ಕ್ರೋಧವಾಗಿ ಪ್ರಕಟಿಸಲ್ಪಡುತ್ತಿತ್ತು. ದುರ್ನಡತೆಗಳನ್ನವರು ನಿರ್ದಯದಿಂದ ಖಂಡಿಸುತ್ತಿದ್ದರು. ಜಲಿಯನ್‌ವಾಲಾ ಬಾಗಿನಲ್ಲಿ ನಡೆದ ದುರ್ಘಟನೆಯಾದ ಮೇಲೆ ಅವರು ವಾಯ್ಸರೋಯರಿಗೆ, ತಮ್ಮ Knighthood ಪದವಿಯನ್ನು ತ್ಯಜಿಸಿದುದನ್ನು ಬರೆದು ಕಳಿಸುವಾಗ ಅವರ ಇದೇ ಗುಣವು ಪ್ರಕಟವಾಗಿತ್ತು. ಯಾವುದೇ (ವೈಯಕ್ತಿಕ) ಜನರ ಕುರಿತು ಆ ಪತ್ರದಲ್ಲಿ ಏನೂ ಇರಲಿಲ್ಲ. ಆದರೆ ಆ ಕ್ರಿಯೆಯನ್ನು ಕಟ್ಟುನಿಟ್ಟಾಗಿ ಖಂಡಿಸಿದ್ದರವರು. ಇಂಥ ಪ್ರಸಂಗಗಳಲ್ಲಿ ಒಂದು ಪಾಠವನ್ನು ಕಲಿತು ನಾನು ಮನೆಗೆ ತೆರಳುತ್ತಿದ್ದೆನು. ಆದರೆ

ಅಂಥ ದುಷ್ಕೃತ್ಯಗಳಿಂದಾಗಿ ವೇಧನೆಯನ್ನನುಭವಿಸಿದ ಕವಿವರ್ಯರ ವಿಷಯದ ಕುರಿತು ನನ್ನಲ್ಲಿ ಮೂಕ ಸಹಾನುಭೂತಿಯು ಮೂಡುತಿತ್ತು. ಆದರೂ ಹಲವು ಸಲ, ಬಹುಶಃ ಗುರುಗಳು ಅವರು ಜನರನ್ನು ಉತ್ತಮರನ್ನಾಗಿಸುವ ಉದ್ದೇಶದಿಂದಿರುವುದರಿಂದ ಅಂಥ ವೇದನೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿತ್ತೆಂದು ನಾನೆಂದುಕೊಳ್ಳುತಿದ್ದೆನು.

"ರವೀಂದ್ರನಾಥರನ್ನು ನಾನು ತಾಪತ್ರಯಗಳ ನೆರಳಲ್ಲಿ ಕಂಡಿದ್ದೇನೆ. ಆ ಪ್ರಸಂಗಗಳು –ಅವು ಬಹಳ ಹಿಂದೆ ನಡೆದಿದ್ದರೂ ಸಹ– ನನ್ನ ಹೃದಯದ ಮೇಲೆ ಮಾಡಿದ ಆಘಾತಗಳು ಇನ್ನೂ ಹೊಸತಾಗಿಯೇ ಇರುವುದರಿಂದ ಅವುಗಳ ನೆನವು ನನ್ನಲ್ಲಿ ವೇದನೆಯನ್ನುಂಟುಮಾಡುತ್ತಿದೆ. ಪ್ರತಿಯೊಬ್ಬನೂ ಸ್ವಾಭಾವಿಕನಾಗಿರುತ್ತಾನೆ ಮತ್ತು ತನ್ನ ಮರಣಕಾಲದಲ್ಲಿ ಅವನು ತನ್ನ ಕೀರ್ತಿಯ ತುತ್ತ ತುದಿಯಲ್ಲೊ, ಅತಿ ಆಳದಲ್ಲೊ ಇರುತ್ತಾನೆ. ರವೀಂದ್ರನಾಥರು ತಮ್ಮ ಕೆಲವು ಅತಿ ಸಮೀಪದ ನೆಚ್ಚಿನವರನ್ನು ಕಳೆದುಕೊಂಡಿದ್ದಾರೆ. ಅವರಲ್ಲಿ ದುಃಖವು ಪರ್ಯಾಪ್ತವಾಗಿತ್ತೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಅವರ ಬಾಹ್ಯ ಮುಖಚರ್ಯೆಯಲ್ಲಿ ಧೈರ್ಯದ ದೃಢತೆಯು ಮೂಡಿರುತಿತ್ತು. ಅವರ ಮನಸ್ಸು ಹೇಗೆ ಕೆಲಸ ಮಾಡಿತ್ತೆಂಬುದನ್ನು ಈಗ ಯಾರಿಂದಲೂ ಹೇಳಬರುವುದಿಲ್ಲ; ಬಹುಶಃ ಅವರಿಂದಲೂ ಸಹ ಆಗುತ್ತಿರಲಿಲ್ಲ. ಆದರೆ ದೇವರಲ್ಲಿನ ಅವರ ಸಜೀವ ಶ್ರದ್ಧೆಯಿಂದ ಜನಿಸಿದ ಅಂತರ್ಗಾಮಿ ಚಿಹ್ನೆಯು ತೋರಿಬರುತಿತ್ತು. ಮರಣದ ಸನ್ಮುಖದಲ್ಲಿ ಅವರ ಕಮ್ಮಿತನವು ಯಾವಾಗಲೂ ಶ್ರೇಷ್ಠದ್ದಾಗಿತ್ತು ಮತ್ತು ಅವರ ಕೀರ್ತಿಯ ತುತ್ತ ತುದಿಯು ನಿಮ್ಮ ಅಥವ ನನ್ನ ಅಳತೆಗೋಲಿನಿಂದ ಅಳೆಯಲಾಗದಷ್ಟು ಶ್ರೇಷ್ಠವಾಗಿತ್ತು. ಅವರ ಬಳಿಯಲ್ಲಿ ಮೌನದಿಂದ ಸಹಾನುಭೂತಿಯಿಂದಲೂ, ಗರ್ವಹೀನತೆಯಿಂದಲೂ ಕುಳಿತುಕೊಂಡು, ಅವರ ಹೃದಯದಲ್ಲಿ ಎಂಥ ಅತಿಮಾನುಷವಾದ ಶಕ್ತಿಯು ಕೆಲಸ ಮಾಡುತ್ತಿದೆಯೆಂಬುದನ್ನು ನಾನು ಅರಿತುಕೊಂಡೆನು. ರವೀಂದ್ರನಾಥರು ಎಷ್ಟು ಶ್ರೇಷ್ಠರಾಗಿದ್ದರೊ, ಅಷ್ಟೆ ಧೈರ್ಯಶಾಲಿಗಳೂ ಆಗಿದ್ದರು.

"ಕವಿವರ್ಯರ ಬರಹಗಳನ್ನು ಕೂಲಂಕುಶವಾಗಿ ಅಭ್ಯಸಿಸಿದ ನೀವು ಅವರ ಭಾಷಣಗಳನ್ನು ಕೇಳಿದ್ದೀರಿ ಮತ್ತು ಅವರ ನಡತೆಯನ್ನು ಸೂಕ್ಷ್ಮ

ದರ್ಶಕ ಯಂತ್ರದ ಮೂಲಕವೊ ಎಂಬಂತೆ ಗಮನಿಸಿದ್ದೀರಿ; ಆದರೂ ನೀವು ಬಹುಶಃ ಈ ಯುಗದ ವಿಶಿಷ್ಟ ರೀತಿಯ ಮಹಾಪುರುಷರ ನಡೆನುಡಿಗಳ ಬಹಳೇ ಅಲ್ಪ ಭಾಗವನ್ನು ಅರಿಯುತ್ತೀರಿ. ಅವರು ಆಧುನಿಕ ವಿಚಾರ ಮಯ ಮಾನವತೆಯ ಪ್ರಚೋದಕರಾಗಿದ್ದರೆಂದೂ, ಬೇರೆ ಬೇರೆ ಭಾರ ಗಳನ್ನು ತೂಗುತ್ತಿರುವ ತುಲಾಯಂತ್ರದ ತಟ್ಟೆಗಳನ್ನು ಒಂದೇ ಸಮನಾಗಿ ತೂಗುವಂತೆ ಮಾಡುವ ಭಾರವುಳ್ಳವರೆಂದೂ, ಪಾಶ್ಚಿಮಾತ್ಯ ಹಾಗೂ ಪೌರ್ವಾತ್ಯ ವಿಷಯಗಳನ್ನು ಸಮ್ಮಿಳಿತಗೊಳಿಸಿ ಜನರಿಗೆ ತೋರಗೊಡಿಸು ವವರೆಂದೂ ನೀವು ಅಭಿಪ್ರಾಯ ಪಡಬಹುದು. ಆಗ ಬಹುಶಃ ನಿಮ್ಮೆಣಿಕೆ ಸರಿಯಾಗಬಹುದು. ಆದರೆ ನನಗೆ ನೀವು ಇನ್ನೂ ಕೆಲವು ಮುಖ್ಯವಾದ ವಿಷಯಗಳನ್ನು ಬಿಟ್ಟಂತೆ ತೋರುತ್ತದೆ.

"ನಿಜಕ್ಕೂ ಒಬ್ಬ ಚಕ್ರವರ್ತಿಯಂತೆ, ಆಕ್ರಮಣಕಾರನಾದ ನಿರಂಕುಶ ಪ್ರಭುವಿನಂತಿರದೆ, ಜಗತ್ತಿಗೆ ಸಾರುವ ಸಲುವಾಗಿ ಒಂದು ನವಸಂದೇಶವನ್ನು ಧರಿಸಿರುವ, ಶ್ರೇಷ್ಠ ಅಧ್ಯಾಪಕರಾಗಿ ಒಂದು ನವ ಸಂಸ್ಕೃತಿಯ ಸಂಸ್ಥಾಪನಾ ಚಾರ್ಯರಾಗಿ, ಕೀರ್ತಿಯುತರಾಗಿ ಜಗತ್ತಿನಲ್ಲೆಲ್ಲ ಸಂಚರಿಸಿದ ರವೀಂದ್ರ ರನ್ನು ನೀವು ಕಂಡಿದ್ದಿರಬೇಕು. ಇದೇ ಚಕ್ರವರ್ತಿಯು ನಿಗರ್ವಿಗಳಾದ ರೈತರ ಸುಖ ದುಃಖಗಳ ಅರಿವಿನಲ್ಲಿ ತಮ್ಮ ಅನುಭವಗಳನ್ನು ಹೆಣೆದಾಗ ನೀವು ವಿಸ್ಮಯಪಟ್ಟು ಅವರನ್ನು ಈಕ್ಷಿಸಿದ್ದಿರಬೇಕು.

"ಸ್ವಯಂಕೃತವಾದ ಈ ಮಾನವನ ಜ್ಞಾನದ ಬಾಹುಳ್ಯದಿಂದ ನೀವು ದಿಙ್ಮೂಢರಾಗಿ ಹೋಗಿದ್ದೀರಿ. ಖಗೋಲ ಶಾಸ್ತ್ರದಿಂದ ಪ್ರಾಣಿ ಶಾಸ್ತ್ರದ ವರೆಗೆ, ಸಂಸ್ಕೃತದ ಸಾಹಿತಿಕ ರಚನೆಯ ಸೂಕ್ಷ್ಮತೆಯಿಂದ ಹೆಚ್ಚುಕಡಿಮೆ ಸಂಪೂರ್ಣವಾಗಿ ಕಲ್ಪನಾತೀತವಾದ ಉಪನಿಷತ್ತುಗಳ ಸಂದೇಶಗಳ ಪರಿ ಶುದ್ಧತಾ ಕಾರ್ಯಗಳ ವರೆಗೆ, ಯಾವ ಕಾಲದಲ್ಲೂ, ಯಾವ ದೇಶದಲ್ಲೂ ಅವರು ಆಯಾಯ ವಿಷಯಗಳಿಗೆ ಅತಿ ಸಮೀಪವಿದ್ದರೆಂದು ನೀವು ಕಂಡು ಕೊಳ್ಳುವಿರಿ. ಪದ್ಯದಲ್ಲೂ, ಗದ್ಯದಲ್ಲೂ, ಬಂಗಾಲಿಯಲ್ಲೂ, ಇಂಗ್ಲೀಷಿ ನಲ್ಲೂ, ಅವರ ಎಲ್ಲ ಬರಹಗಳಲ್ಲೂ ಈ ಬಾಹುಳ್ಯವನ್ನು, ಅಂಥಪ್ರೌಢಿಮೆಯು ನಿಮಗಿಷ್ಟರೆ, ನೀವು ಕಂಡುಕೊಳ್ಳುತ್ತೀರಿ. ಅವರ ಸಂಗೀತದಲ್ಲಿನ ಕಂಪನ ಗಳು ನಿಮ್ಮ ವೈಯುಕ್ತಿಕ ಆತ್ಮನ ಆಂತರಿಕ ಪ್ರದೇಶಗಳನ್ನು ಪ್ರವೇಶಿಸಿ

ಅದನ್ನು ಕಡಮನಂತೆ, ನಮಗೆ ತಿಳಿಯದಿರುವಂಥ ತಾರಾ ಸಮೂಹದ ವರೆಗೂ ಮುಟ್ಟುತ್ತವೆ. (ಆಗ) ಕಾಲ ಹಾಗೂ ಸ್ಥಳ (Space) ಗಳು ಮಾಯವಾದಂತೆ ತೋರುತ್ತವೆ. ಅವುಗಳು ತಮ್ಮ ತಮ್ಮ ಗುಣಗಳನ್ನು ಕಳೆದುಕೊಳ್ಳುತ್ತವೆ. ವರ್ಣನಾತೀತವಾದ ಮತ್ತು ಅಗಾಧವಾದ ಸಂತೋಷದಿಂದ ನೀವು ತುಂಬಿಹೋಗುತ್ತೀರಿ ಮಾತ್ರ. ತಿಳಿಯಲಸದಳವಾದ ಭವಿಷ್ಯತ್ತಿನಲ್ಲಿ ಪ್ರತಿಯೊಂದು ಮರೆತು ಹೋದರೂ ಸಹ ಕವಿವರ್ಯರ ಪದ್ಯಗಳು ಸಾವಿರಾರು ತಲಾಂತರಗಳಿಂದ ಬೇರ್ಪಡಿಸಲ್ಪಡುವ ನಮ್ಮ ಮೊಮ್ಮಕ್ಕಳ ಮೊಮ್ಮಕ್ಕಳಿಗೆ ಸ್ಫೂರ್ತಿಯನ್ನು ಕೊಡುತ್ತಲೂ, ಅವರನ್ನು ಸರಿದಾರಿಗೆ ತರಲು ಯತ್ನಿಸುತ್ತಲೂ, ಅವರನ್ನು ಸಮಾಧಾನಿಸುತ್ತಲೂ ಇರುವವು. ರವೀಂದ್ರನಾಥರು ಅಮರತ್ವವನ್ನು ಪಡೆದಿದ್ದಾರೆ.

"ಬಹುದೂರದ ಆಯ್ಸಲೆಂಡಿನ (Iceland) ಒಬ್ಬ ಪ್ರಯಾಣಿಕನ ಕುರಿತು ನಾನು ಓದಿದ್ದೇನೆ. ಇಡೀ ದಿನ ನಡೆದು ಆಯಾಸಗೊಂಡ ಅವನು ಬಹು ದೂರದ ಒಂದು ಹಳ್ಳಿಯಲ್ಲಿನ ಒಬ್ಬ ಪಾದ್ರಿಯ ಗುಡಿಸಲಿಗೆ ಬಂದನು. ಜಗತ್ತಿನ ಆ ಕೊನೆಯಲ್ಲಿ ಬರೆ ಕೆಲವು ಗುಡಿಸಲುಗಳಿದ್ದವು. ಅಲ್ಲಿ ಟಪ್ಪಾಲಿನ ವ್ಯವಸ್ಥೆಯಿದ್ದಿರಲಿಲ್ಲ. ಅವನಿಗೆ ಅಲ್ಲಿ ಸ್ವಾಗತವು ದೊರಕಿತು ಮತ್ತು ಅವನ ಉಪಹಾರಾನಂತರ ಆ ಪ್ರಯಾಣಿಕನು ಪಾದ್ರಿಯ ಪುಸ್ತಕ ಭಂಡಾರದಲ್ಲಿ ರವೀಂದ್ರನಾಥರ ಬರಹ ಮಾಲೆಯಿರುವುದನ್ನು ಕಂಡು ಆಶ್ಚರ್ಯಚಕಿತನಾದನು. ಕವಿವರ್ಯರ ಮಾತುಗಳು ಜನರು ಅಪರೂಪವಾಗಿರುವೆಡೆಯಲ್ಲಾ ಸಹ, ಭೌಗೋಲಿಕ ಗಡಿಗಳನ್ನೂ, ಜನಾಂಗಗಳ ಗಡಿಗಳನ್ನೂ ದಾಟಿವೆ ಎಂಬುದನ್ನು ಓದುವಾಗ ನನಗೂ ಆಶ್ಚರ್ಯವಾಯಿತು. ಅವುಗಳು ಮಾನವತೆಯ ಮೂಲಭೂತವಾದ ತಂತಿಗಳನ್ನು ಸ್ಪರ್ಶಿಸಿವೆ. ಆ ಪಾದ್ರಿಯು ನಾನೂ ರವೀಂದ್ರನಾಥರ ಕೃತಿಗಳನ್ನು ಏಕಕಾಲದಲ್ಲಿ ಓದುತ್ತಿದ್ದುದರಿಂದಲೂ, ಅವರ ಕುರಿತು ಯೋಚಿಸುತ್ತ ಇದ್ದುದರಿಂದಲೂ ಅದೊಂದು ಅಸಾಮಾನ್ಯವಾದ ಆವೇಶವಾಗಿ ಪರಿಣಮಿಸಿತು. ಈ ಮಾಧ್ಯಮದ ಮೂಲಕ, ಜಗಳವು ಎಲ್ಲೆಲ್ಲೂ ಪಸರಿಸಿದ್ದ ಕಡೆಯಲ್ಲೂ ಸಹ ಒಬ್ಬನು ಇನ್ನೊಬ್ಬನ ಮಿತ್ರನಾಗಲು ಸಾಧ್ಯವಿದೆ.

"ಅನೇಕ ವರ್ಷಗಳುರುಳಿದುವು. ಸುಮಾರು ಮೂರು ದಶಕಗಳಿಗಿಂತಲೂ ಹೆಚ್ಚಿನ ಅವಧಿಯ ನಂತರ ನಾನೆಣಿಸಿದಹೆಯೇ ಸಂದರ್ಶನಾರ್ಥಿಯಾಗಿ ಶಾಂತಿನಿಕೇತನವನ್ನು ಪ್ರವೇಶಿಸಿದೆನು. ನನ್ನಿಂದ ಮೆಚ್ಚಲ್ಪಟ್ಟ ಮತ್ತು ಮಾನಿಸಲ್ಪಟ್ಟ ಒಬ್ಬ ಮಿತ್ರರಿಂದ ನಾನು ವ್ಯಾವಹಾರಿಕವಾಗಿ ಅವರ ಒಡನಾಡಿಯಾಗಿ ಅಲ್ಲಿಗೆ ಹೋಗಲು ಒತ್ತಾಯಿಸಲ್ಪಟ್ಟಿದ್ದೆನು. ಈ ಮಿತ್ರರು ಕವಿವರ್ಯರ ಮತ್ತು ಅವರ ಕುಟುಂಬದವರ ಮಿತ್ರರೂ ಆಗಿದ್ದರು. ಕವಿವರ್ಯರು 'ಉದ್ಯಾನ' (ಅವರ ಮನೆಯ ಹೆಸರು)ದ ಜಗಲಿಯಲ್ಲಿ ಕುಳಿತಿದ್ದರು. ಅವರ ಕಾರ್ಯದರ್ಶಿಯು ನನ್ನ ಮಿತ್ರನ ಮತ್ತು ಯಾರೋ ಒಬ್ಬನ (ಇಲ್ಲಿ ಕವಿವರ್ಯರಿಗೆ ಅಪರಿಚಿತವಾದ ರೀತಿಯಲ್ಲಿ ನನ್ನ ಹೆಸರನ್ನು ಉಚ್ಚರಿಸಲಾಗಿತ್ತು) ಆಗಮನವನ್ನು ಸೂಚಿಸಿದನು. ನಾನು ಬೇಕೆಂದೇ ನನ್ನ ಮಿತ್ರರ ಹಿಂಬದಿಯಲ್ಲಿದ್ದು, ಕವಿವರ್ಯರ ದೃಷ್ಟಿಗೆ ಬೀಳದೆ ಇದ್ದೆ. ಅವರು ನನ್ನ ಮಿತ್ರರನ್ನು ಸ್ವಾಗತಿಸಿದಾಗ, ನಾನು ಮುಂದೆ ಬಂದು, ಬಗಿಕೊಂಡು, ಅವರ ಪಾದರಜವನ್ನು ಸ್ವೀಕರಿಸಿದೆನು. ಅವರು ನನ್ನನ್ನು ನೋಡಿದ ಕ್ಷಣವೇ, ಒಂದಿಷ್ಟೂ ಹಿಂದುಮುಂದು ನೋಡದೆ, ಸಂಪ್ರದಾಯವೆಲ್ಲವನ್ನೂ ತ್ಯಜಿಸಿ, 'ಓಹೊ, ನೀವೊ' ಎಂದು ಗಟ್ಟಿಯಾಗಿ ಕೂಗಿದರು. ಮತ್ತು ನನ್ನ ಪರಿಚಿತವಾದ ಹಿಂದಿನ ಹೆಸರಿನಿಂದಲೇ ಕರೆದರು. ಇದರ ನಂತರ ಸಂಭವಿಸಿದುದು ನನ್ನ ಮಟ್ಟಿಗೆ ಭಾವನಾಪತನ (Emotional Breakdown) ವಾಗಿತ್ತು. ಮತ್ತು ಅದನ್ನು ನೀವು ಕೇಳಲು ಬಯಸಬೇಡಿರಿ. ಬಹುಶಃ ಕವಿವರ್ಯರ ಭಾವನೆಗಳೂ ಕದಡದೆ ಇದ್ದಿರಲಿಕ್ಕಿಲ್ಲ. ಅಷ್ಟು ತೀಕ್ಷ್ಣವಾಗಿ ಅವರು ಭಾವಾತ್ಮಕರಾಗಿದ್ದರು.

"ಎರಡು ದಿನಗಳ ಮೇಲೆ ನಾವು ಒಟ್ಟಿಗೆ ಊಟಮಾಡುತ್ತಿದ್ದೆವು. ಶಾಂತಿ ನಿಕೇತನವಲ್ಲಿ ಅಪರೂಪವಾಗಿ ದೊರಕುತ್ತಿದ್ದ ಹಿಲ್ಸಾ ಜಾತಿಯ ಮೀನನ್ನು (ಇದೆಂದರೆ ನನಗೆ ಜೀವವಿತ್ತು) ಕವಿವರ್ಯರ ಸೊಸೆಯು ಹೇಗಾದರೂ ಮಾಡಿ ತರಿಸಿ ಅದರ ಪಲ್ಯವನ್ನು ಮಾಡಿದ್ದಳು. ಅವಳ ಅತ್ತೆಯವರು ತಿಲಿಡಾವದಲ್ಲಿ ನನಗೆ ತೃಪ್ತಿಯಾಗುವಷ್ಟರ ವರೆಗೆ ಮೀನು ತಿನ್ನಿಸಿದುದನ್ನು ಹೇಳಿದೊಡನೆ, ಅವಳು ಇನ್ನೂ ಹೆಚ್ಚು ಪಲ್ಯವನ್ನು ತಿನ್ನುವಂತೆ ನನ್ನನ್ನು ಒತ್ತಾಯ ಪಡಿಸಿದಳು. ಕವಿವರ್ಯರು ಮೇಜಿನ ಒಂದು ಬದಿ

ಯಲ್ಲಿ ಕುಳಿತಿದ್ದು, ಕಳೆದುಹೋದ ದಿನಗಳ ಪ್ರಸಂಗಗಳ ನನ್ನ ವಿವರಣೆಯನ್ನು ಕೇಳುತಿದ್ದರು. ಕೂಡಲೆ ಅವರು ಚಿರಪರಿಚಿತವಾದ ಮಂದಹಾಸದೊಡನೆ, 'ನಿಜ, ಭೌಮಾ (ತಮ್ಮ ಸೊಸೆಯನ್ನು ಸಂಬೋಧಿಸುತ್ತ,) ಹಿಲ್ಸಾ ಮೀನಿನಿಂದಲೂ, ಇತರ ಅನೇಕವುಗಳಿಂದಲೂ ಅವನನ್ನು (ನನ್ನನ್ನು) ಚೆನ್ನಾಗಿ ಉಪಚರಿಸಿದ್ದೇನೆಂದು ನಾನೀಗಲೇ ಹೇಳಬೇಕಾಗಿದೆ. ಅವುಗಳಲ್ಲಿ ಭೈರವಿ ರಾಗದ ಒಂದು ಕೀರ್ತನೆಯೂ ಇತ್ತು' ಎಂದರು. ಮತ್ತು ಒಂದಿಷ್ಟು ಸಮಯವನ್ನು ಹಾಳು ಮಾಡದೆ, 'ಓ ಯೆನ್ನ ಜೀವದ ಪ್ರಭುವೆ, ಭಕ್ತಿಂದಲೂ ಸಹ ಪಡೆಯಲಿಕ್ಕಾಗದ ಪ್ರಭುವೆ ......' ಎಂದು ಹಾಡಿದರು. ಅವರು ಕೆಲವೇ ಚರಣಗಳನ್ನು ಹಾಡಿದರು. ತಡೆಯಿಲ್ಲದೆ, ನಾಚದೆ ಕಣ್ಣೀರು ನನ್ನ ಕೆನ್ನೆಗಳ ಮೇಲೆ ಹರಿಯಲಾರಂಭಿಸಿತು. ಕವಿವರ್ಯರ ಕಣ್ಣುಗಳಲ್ಲೂ ಪ್ರಜ್ವಲಿಸುವ ನೀರ ಪಸೆಯನ್ನು ನನ್ನ ಒದ್ದೆಯಾದ ಕಣ್ಣುಗಳಿಂದ ನಾನು ನೋಡಿದೆನು. ಅವರು ಹಿಂದಿನ ದಿನಗಳನ್ನು ನೆನೆಯುತ್ತಿದ್ದರು. ಅನೇಕ ದಶಕಗಳ ಕೆಳಗೆ ನಾನು ದೂಡಲ್ಪಟ್ಟಿದ್ದೆನು. ಊಟವು ಅರ್ಧದಲ್ಲಿ ಕೊನೆಗೊಂಡಿತು. ಮೌನದಿಂದ ನಾವು ನಮ್ಮ ನಮ್ಮ ಕೊಠಡಿಗಳಿಗೆ ತೆರಳಿದೆವು.

"ರವೀಂದ್ರನಾಥರಲ್ಲಿನ ಪರಮ ಶ್ರೇಷ್ಠವಾದ ಮಾನವೀ ಅಂಶವು ನನಗೆ ಅವರ ಜೀವನದ ಜೀವಾಳವಾಗಿ ತೋರಿತು. ಈ ಅಂಶವು ಭಾವಾತ್ಮಕವಾಗಿ ಮೃದುವಾಗಿರಲಿಲ್ಲ. ಅದು ಎಲ್ಲ ಮಾನವೀ ಅಂಶಗಳನ್ನು ಅರಿಯುವ ಮತ್ತು ಅವುಗಳನ್ನು ಆಲಿಂಗಿಸುವ, ಸರಿಯಾದ ದೃಷ್ಟಿಕೋನದಿಂದ ಅವುಗಳನ್ನೀಕ್ಷಿಸುವ ಸಂಪೂರ್ಣ ಸಹಾನುಭೂತಿಯನ್ನು ತೋರಿಸುವ ಪ್ರಬಲ ಶಕ್ತಿಯಾಗಿತ್ತು. ಅವರ ಮೇಲಿನ ನನ್ನ ಮೆಚ್ಚುಗೆಯ ವಿಷಯದಲ್ಲಿ ನಾನು ನಿಮ್ಮಲ್ಲಿನ ಯಾರಿಗೂ ಕಡಿಮೆಯಿಲ್ಲ. ಆದರೆ, ಪ್ರೇಮಿಸಲ್ಪಡುವ ಈ ಮಾನವನ ಮೇಲೆ ನನ್ನ ಈ ಮೆಚ್ಚುಗೆಗಿಂತ ಸಾವಿರ ಪಾಲು ಹೆಚ್ಚು ಪ್ರೇಮವಿತ್ತು.

"ನಾನೀಗ ನನ್ನ ರವೀಂದ್ರನಾಥರ ಕುರಿತು ನಾನು ಸೃಜಿಸಿದ ರೀತಿಯಲ್ಲಿ ನಿಮಗೆ ಕೆಲವು ವಿಷಯಗಳನ್ನು ಹೇಳಿದ್ದೇನೆ. ನಾನು ಈ ಮೊದಲೇ ಹೇಳಿದಂತೆ ಈ ಚಿತ್ರಣವು ಒಂದು ಭಾವಾವಲೋಕನವಾಗಿದೆ. ಈ ಪರಿ

ಗಣನೆಯೂ ರವೀಂದ್ರನಾಥರ ಅಥವಾ ನಿಮ್ಮದಾಗಿರದೆ ಸ್ವತಃ ನನ್ನದೆ ಆಗಿದೆ. ನೈಜ ಸ್ಥಿತಿಯಲ್ಲಿ ಅವರು ಬೇರೆಯೇ ಆಗಿದ್ದಿರಬಹುದು. ನಿಮ್ಮ ಸ್ವಂತದ ರವೀಂದ್ರನಾಥರು ಬೇರಾರೊ ಆಗಿರಬಹುದು. ಆದರೆ ನಾನು ಕದಡಿ ಹೋಗೆನು. ನನ್ನ ಈ ಚಿತ್ರಣವು ಒಂದು ಭ್ರಮೆಯಾಗಿದ್ದರೆ, ಆ ಭ್ರಮೆಯಲ್ಲಿ ಒಂದು ತರದ ಸಂತೋಷವಿದೆಯೆಂದು ನಾನು ಹೇಳುತ್ತೇನೆ. ಆ ಕಲುಷಿತವಾದ ಆ ಸಂತೋಷವನ್ನು ಸನ್ನ ಸ್ವಾಧೀನದಲ್ಲಿರಿಸಿಯೇ ನಾನು ನನ್ನ ಕಣ್ಣುಗಳನ್ನು ಮುಚ್ಚಬಯಸುತ್ತೇನೆ."

(ಈ ಕತೆಯನ್ನು) ಬಿತ್ತರಿಸಿದವರು ಆಗ ಮೌನರಾದರು ಮತ್ತು ಅವರ ಮೌನವನ್ನು ಭೇದಿಸಲು ನನಗೆ ಮನಸ್ಸಿದ್ದಿಲ್ಲ. 'ಹೋಗಿ ಬರುತ್ತೇನೆಂದು ಹೇಳದೆನೆ ನಾನು ಅಲ್ಲಿಂದ ಹೊರಟೇ ಬಿಟ್ಟೆನು.

ಪ್ರಕಾಶಕನಾಗಿ.........

ಸ್ವೀಡನಿನ ರಾಜಧಾನಿ ಸ್ಟೊಕ್‌ಹೋಮಿನಲ್ಲಿ ೧೮೩೩ರಲ್ಲಿ ಜನಿಸಿ, 'ಡಾಯ್ನ ಮಾಯ್ಟ್' ಎಂಬ ಸಿಡಿಮದ್ದನ್ನು ಸಂಶೋಧಿಸಿ, ಜಗತ್ಪ್ರಸಿದ್ಧನಾಗಿದ್ದ ಆಲ್ಫ್ರೆಡ್ ಬರ್ನಾರ್ಡ ನೊಬೆಲ್ ಎಂಬ ರಸಾಯನ ಶಾಸ್ತ್ರಜ್ಞನು ೧೮೯೬ರಲ್ಲಿ ಕಾಲವಾದಾಗ ಇಪ್ಪತ್ತು ಲಕ್ಷ ಪೌಂಡು (ಸುಮಾರು ಎರಡೂವರೆ ಕೋಟಿ ರೂಪಾಯಿ)ಗಳಷ್ಟು ಐಶ್ವರ್ಯವನ್ನು ಗಳಿಸಿದ್ದನು. ಇದರ ಬಹು ಭಾಗವನ್ನು ಮಾನವತೆಯ ಲಾಭಕ್ಕಾಗಿ ಅತ್ಯಂತ ಪ್ರಾಮುಖ್ಯತೆಯುಳ್ಳ ಸಂಶೋಧನೆಗಳನ್ನು ನಡೆಸಿದವರಿಗೆ ವರ್ಷಂಪ್ರತಿ ಕೊಡಲು ಐದು ಪಾರಿತೋಷಕಗಳಾಗಿ ಉಪಯೋಗಿಸಬೇಕೆಂದು ಅವನು ತನ್ನ ಮೃತ್ಯುಪತ್ರದಲ್ಲಿ ಉಲ್ಲೇಖಿಸಿದ್ದನು. ಅದರಂತೆ ಭೌತಶಾಸ್ತ್ರ (Physics) ರಸಾಯನ ಶಾಸ್ತ್ರ (Chemistry) ವೈದ್ಯಕೀಯಶಾಸ್ತ್ರ, ಸಾಹಿತ್ಯ ಮತ್ತು ಜಗತ್ತಿನಲ್ಲಿ ಶಾಂತಿಯ ಪ್ರಸಾರಗಳೆಂದು ಐದು ಕ್ಷೇತ್ರಗಳಲ್ಲಿ ಈ ನೊಬೆಲ್ ಪಾರಿತೋಷಕಗಳನ್ನು ಕೊಡುತ್ತ ಬಂದಿದ್ದಾರೆ.

ಈ ವಿಶ್ವಮಾನ್ಯ ನೊಬೆಲ್ ಪಾರಿತೋಷಕಗಳನ್ನು ಪಡೆದ ಭಾರತೀಯರೆಂದರೆ ಇಬ್ಬರು ಮಾತ್ರ. ೧೯೧೩ರಲ್ಲಿ 'ಗೀತಾಂಜಲಿ' ಎಂಬ ಕೃತಿಯೊಂದು ಆ ವರ್ಷದ ಅತ್ಯಂತ ಶ್ರೇಷ್ಠವಾಗ ಆದರ್ಶವಾದೀ ಕೃತಿಯೆಂದು ಸ್ವೀಡಿಷ್ ಎಕೆಡೆಮಿಯವರಿಂದ ಪರಿಗಣಿಸಲ್ಪಟ್ಟು, ಅದರ ನಿರ್ಮಾತೃ ರವೀಂದ್ರನಾಥ ಠಾಗೋರರಿಗೆ ಆ ವರ್ಷದ ಸಾಹಿತ್ಯದಲ್ಲಿನ ನೊಬೆಲ್ ಪಾರಿತೋಷಕವನ್ನು ಕೊಡುವುದೆಂದು ಸಾರಲಾಯಿತು. (೧೯೩೦ರಲ್ಲಿನ ಭೌತಶಾಸ್ತ್ರದಲ್ಲಿನ ನೋಬೆಲ್ ಪಾರಿತೋಷಕವನ್ನು ಸರ್. ಸಿ.ವಿ ರಾಮನ್‌ರಿಗೆ ಕೊಡಲಾಯಿತು). ಆ ಮೇಲೆ ಈ 'ಗೀತಾಂಜಲಿ'ಯು ಜಗತ್ತಿನ ಪ್ರಮುಖವಾದ ಅನೇಕ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟು ಅನೇಕ ದೇಶಗಳಲ್ಲಿ ಜನಪ್ರೀತವಾಗಿದೆ.

ಕೆಲವು ವರ್ಷಗಳ ಕೆಳಗೆ 'ಗೀತಾಂಜಲಿ'ಯ ಇಂಗ್ಲಿಷ್ ಆವೃತ್ತಿಯೊಂದು ನನ್ನ ಕೈಸೇರಿತು. ಆಗ ಅದನ್ನೋದಿ ಅದರ ಸವಿಯನ್ನುಂಡಾಯಿತು. ಆ ಮೇಲೆ ಅನಿರೀಕ್ಷಿತವಾದ ಘಟನೆಯೊಂದು ಸಂಭವಿಸಿ

ಸುದೀರ್ಘವಾದ ಬಿಡುವಿನ ಅವಧಿಯಲ್ಲಿ ಅದನ್ನು ಅನುವಾದಿಸುವ ಅಪೂರ್ವ ಸುಯೋಗವೊದಗಿತು. ಅದರಂತೆ ಅನುವಾದಿಸಿಯೂ ಆಯಿತು. ಆದರೆ ಒಂದು ವರ್ಷದ ವರೆಗೆ ಅದನ್ನು ಪ್ರಕಟಿಸುವ ಯೋಗವು ಬಾರದೆ ಹೋಗಿ ಸ್ವಲ್ಪ ವಿಳಂಬವಾಯಿತು. ಕೊನೆಗೆ ಸುದೈವದಿಂದ ಕೆಲವು ಮಿತ್ರರ ಮತ್ತು ಬಂಧುಗಳ ಉದಾರ ಮನಸ್ಸಿನಿಂದ 'ಗೀತಾಂಜಲಿ'ಯನ್ನು ಪ್ರಕಟಿಸುವ ಭಾಗ್ಯವು ಬಂದೊದಗಿತು. ಹೀಗಾಗಿ ಈ ಅನುವಾದವನ್ನು ಕನ್ನಡ ವಾಚಕ ವೃಂದದ ಮುಂದಿಡಲು ಸಂತೋಷವಾಗುತ್ತದೆ. ಸಹೃದಯರಾದ ವಾಚಕರು ಇದನ್ನು ತಮ್ಮ ಉದಾರ ಮನಸ್ಸಿನಿಂದ ಸ್ವಾಗತಿಸಿ, ಇದರ ಸವಿಯನ್ನುಂಡಲ್ಲಿ ನನ್ನ ಈ ಚಿಕ್ಕ ಪ್ರಯತ್ನವು ಸಫಲವಾದೀತೆಂದು ನಾನು ಭಾವಿಸುತ್ತೇನೆ.

ಇಂಗ್ಲಿಷ್ ಭಾಷೆಯಿಂದ 'ಗೀತಾಂಜಲಿ'ಯನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲು ಅನುಮತಿಯನ್ನಿತ್ತ ಮೆ. ಮೆಕ್ಮಿಲನ್ ಎಂಡ್ ಕಂಪೆನಿ, ಸೈಂಟ್ ಮಾರ್ಟಿನ್ ಸ್ಟ್ರೀಟ್, ಲಂಡನ್‌ದವರಿಗೂ, ರವೀಂದ್ರನಾಥ ಠಾಗೋರ್ ಟ್ರಸ್ಟ್‌ದವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಈ ಮೂಲಕ ಸಮರ್ಪಿಸುತ್ತೇನೆ.

ಈ ಕನ್ನಡ 'ಗೀತಾಂಜಲಿ'ಗೆ ತಿಲಕವನ್ನಿಡುವಂತೆ, ಕ್ಲುಪ್ತ ಕಾಲಕ್ಕೆ ಸರಿಯಾಗಿ, ತಮಗೆ ಬಿಡುವಿನ ಅಭಾವವಿದ್ದರೂ ಸಹ ಅದನ್ನು ಲೆಕ್ಕಿಸದೆ, ನನ್ನ ಬೇಡಿಕೆಗೊಪ್ಪಿಗೆಯನ್ನಿತ್ತು, ಮುನ್ನುಡಿಯೊಂದನ್ನು ಬರೆದು ಕಳುಹಿಸಿದ ನಾಡ ಹಿರಿಯ ಸಾಹಿತಿ ಶಿವರಾಮ ಕಾರಂತರಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ.

ಈ ಹೊತ್ತಿಗೆಯ ಆವರಣದ ಚಿತ್ರವನ್ನು ಚೊಕ್ಕದಾಗಿ ಬಿಡಿಸಿ ಕೊಟ್ಟ ನನ್ನ ಗೆಳೆಯ ಮಂಜೇಶ್ವರ ತಾರಾನಾಥ ಕಾಮತ್‌ರವರಿಗೂ 'ರವೀಂದ್ರ ದರ್ಶನ'ದಲ್ಲಿ ಚಿತ್ರಿಸಿದ ಕಲ್ಕತ್ತ ಮುನ್ಸಿಪಲ್ ಗಜೆಟಿನ ಠಾಗೋರ್ ವಿಶೇಷಾಂಕದಿಂದ ಆಯ್ದ ಒಂದು ಲೇಖನವನ್ನೂ, ಅವರಣ ಪುಟಗಳಲ್ಲಿ ಕೊಟ್ಟ 'ಮಾತೆಯ ಸಾಮಿಪ್ಯ' ಇತ್ಯಾದಿಗಳನ್ನು ಅನುವಾದಿಸಿ, ಪ್ರಕಟಿಸಲು ಅನುಮತಿಯನ್ನಿತ್ತ ಕಲ್ಕತ್ತ ಮುನ್ಸಿಪಲ್ ಕೊರ್ಪೊರೇಶನಿಗೂ ನಾನು ಚಿರಋಣಿಯಾಗಿದ್ದೇನೆ. ಹಾಗೆಯೇ ಕ್ಲುಪ್ತಕಾಲಕ್ಕೆ ಸರಿಯಾಗಿ ಈ ಪುಸ್ತಕದ

ಮುದ್ರಣ ಕಾರ್ಯವನ್ನು ಕೈಕೊಂಡು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ರಾಮ ಪ್ರಿಂಟಿಂಗ್ ಪ್ರೆಸ್ಸಿನ ಮಾಲಕ ಶ್ರೀ ಆರ್. ಕೆ. ಜ್ಯೋಶಿಯವರಿಗೂ ನನ್ನ ಸಪ್ರೇಮ ಕೃತಜ್ಞತೆಯನ್ನು ಸಲ್ಲಿಸದಿರಲಾರೆನು

ಕೊನೆಯಲ್ಲಿ, ಈ ಪುಸ್ತಕವನ್ನು ಪ್ರಕಟಿಸುವುದರಲ್ಲಿ ನನಗೆ ಸಹಾಯ ಮಾಡಿದ ಶ್ರೀಯುತರಾದ ಬಳ್ಕುಂಜೆ ರತ್ನಾಕರ ಶೆಣ್ಯೈ, ವಿ. ಎಸ್. ಅಂಗಡಿ, ದಾಮೋದರ ದೇವಣ್ಣ ಶೆಣ್ಯೈಯವರಿಗೂ ನಾನು ಸದಾ ಆಭಾರಿ.

ಬಿ/10 ಕರ್ನಾಟಕ ಬಿಲ್ಡಿಂಗ್
ಮೊಗಲ್ ಲೇನ್,
ಮುಂಬಯಿ. 16.
ಜನವರಿ 4, 1959.

ವೆಂಕಟ್ರಾಯ ಆನಂದ ಶೆಣ್ಯೈ

ಅರ್ಪಣೆ

ದಿ| ರಂಜಾಳ ಆನಂದ ಶೆಣೈ

ಜನನ
6 – 1 – 1896

ನಿಧನ
4 – 1 – 1958

ಇವರಿಗೆ

ವಿಷಯಾನುಕ್ರಮಣಿಕೆ

ಗೀತಾಂಜಲಿ

ಕವೀಂದ್ರ ರವೀಂದ್ರ ವಿರಚಿತ

ಗೀತಾಂಜಲಿ

—*—

೧

ಅತ್ಯಂತ ಸಂತೋಷದಿಂದಂತ್ಯರಹಿತನನ್ನಾಗಿಸಿಹೆ ನೀನೆನ್ನನು. ಒಡಕು ಪಾತ್ರೆಯಿದನು ಬರಿದಾಗಿಸುವೆ ನೀನಾಗಾಗ. ಅದರಂತೆ ನವಜೀವನವ ತುಂಬಿಸುವೆ ನಿರಂತರವಿದರೊಳು.

ಬೆಟ್ಟವನ್ನೇರುತಿರೆ, ಬೆಟ್ಟದಿಂದಿಳಿಯುತಿರೆ ಮುರಲಿವಾದನವಿದನು ಹಿಡಿದು ಅಮರರಾಗಗಳನು ಬಾರಿಸುವೆ ನೀನು.

ನಿನ್ನಮರಕರ ಸ್ಪರ್ಶದಿಂದೆನ್ನ ಹೃದಯವಿದು ಸಂತಸದ ತೊರೆಯು ಮೇರೆಯನು ಮೀರುವುದು, ಕೊಡವುದದವರ್ಣನೀಯ ಉದ್ಗಾರಗಳಿಗೆ ಜನುಮವನು.

ಅತಿ ಚಿಕ್ಕವಿರುವೆನ್ನ ಕರಗಳಲಿ ಬರುತಿಹವು ನಿನ್ನಗಣಿತ ಪಾರಿತೋಷಕಗಳಿಲ್ಲಿ. ಕಾಲವಿದು ಸಾಗುತಿದೆ, ನಿನ್ನಾ ಪಾರಿತೋಷಕಗಳ ಧಾರೆಯೆರೆಯುತಿದೆ. ಆದರೂ ಕರಗಳಿವು ತುಂಬದಿವೆ.

೨

ಹಾಡಲೆನಗಾಜ್ಞೆಯನು ಕೊಡುತಿರೆ, ಅತಿ ಗರ್ವದಾಭಾರ ತುಂಬುವುದೆನ್ನ ಹೃದಯದೊಳು. ನಿನ್ನ ಮುಖಕಮಲದಾದರುಶನದಿ ಅಶ್ರುಮಯವಾಗುವುವೆನ್ನ ನಯನಗಳು

ಎನ್ನ ಜೀವನದೊಳಿಹ ಬಿರುಸು, ಕರ್ಕಶತೆಗಳಳಿದು ಮಧುರ ರಸೋದ್ಭವವಾಗುತಿರೆ, ವಿಶಾಲ ಸಾಗರವ ದಾಟಲಾರಂಭಿಸಿದ ಇನಿವಕ್ಕಿಯು ತೆರದಿ ಎನ್ನೊಳಳೆಯಲಾಗದಾದರವು ಮೊಳೆಯುತಿದೆ.

ಎನ್ನ ಗಾಯನದೊಳು ಸಂತಸವ ಪಡೆಯುತಿಹೆ ನೀನೆಂದು ತಿಳಿದಿಹುದೆನಗೆ. ಬರಿಯ ಗಾಯಕನಾಗಿ ತವಸಾನಿಧ್ಯದೊಳು ಬರಲಿರುವೆ ನಾನೆಂದು ಬಲ್ಲಿಹೆನು ನಾನು.

ತವಚರಣ ಸ್ಪರ್ಶದಾ ಲಾಭವಿಲ್ಲೆನಗೆ; ಆದರೆನ್ನ ಹಾಡುಗಳ ದೂರ ದೂರದಿ ಹರಡಿರುವ ರೆಕ್ಕೆಗಳಿಂದ ಮುಟ್ಟುವೆನು ನಿನ್ನನು.

ಹಾಡಿನಾ ಸಂತಸದಿ ಮತ್ತನಾಗುತ, ಎನ್ನನೆ ಮರೆತು, ಹೆ ಪ್ರಭು, ಮಿತ್ರನೆಂದು ಕರೆವೆ ನಾ ನಿನ್ನನು.

೩

ಹೆ ಪ್ರಭು, ನೀನೆಂತು ಹಾಡುತಿಹೆಯೆಂಬುದನು ತಿಳಿಯೆ ನಾ. ಮೌನ ಆಶ್ಚರ್ಯದಿ ಕೇಳುತಿಹೆ ಸದಾಕಾಲವದನು.

ನಿನ್ನ ಗಾಯನದ ಶೋಭೆಯಿಂದಲಿ ಪ್ರಕಾಶಿತವಾಗಿಹುದು ಜಗವಿದು. ನಿನ್ನ ಗಾಯನದ ಮುಖ್ಯ ಪ್ರಾಣವದು ಚಲಿಸುತಿಹುದಂತರಿಕ್ಷದೊಳು. ಎಡರುತೊಡರುಗಳನು ಲೆಕ್ಕಿಸದೆ ಹರಿಯುತಿಹುದು ನಿನ್ನ ಗಾಯನದ ಪರಿಶುದ್ಧ ನದಿಯು.

ನಿನ್ನ ಹಾಡಿನೊಳು ಕೂಡಲೆನ್ನ ಹೃದಯವಿದು ಬಯಸುತಿದೆ. ಆದರಿಂದ ಪ್ರಯೋಜನವಿಲ್ಲದಾಗಿಹುದು. ಮಾತನಾಡಲು ಯತ್ನಿಪೆನು ನಾನಾಗ. ಪದ್ಯರೂಪವನು ಪಡೆಯುವಾ ಮಾತುಗಳೆಂದು ಕಂಗೆಟ್ಟು ಅಳುತಿಹೆನು ನಾನು. ಹೆ ಪ್ರಭು, ನಿನ್ನ ಗಾಯನದ ವಿಶಾಲ ಬಲೆಯೊಳು ಸಿಕ್ಕಿಹುದೆನ್ನ ಹೃದಯವಿದು.

೪

ಎಲೆ ಯೆನ್ನ ಜೀವದಾ ಜೀವವೇ, ನಿನ್ನಮರವಾಗಿಹ ಕರಸ್ಪರ್ಶವಿಹುದೆನ್ನಂಗಾಂಗಗಳಲೆಂದು ಭಾವಿಸುತೆನ್ನ ದೇಹವಿದನು ಪರಿಶುದ್ಧವಿರಿಸೆ ಯತ್ನಿಪೆನು ನಿರಂತರ.

ಎನ್ನ ಮನದೊಳು ನಿನ್ನ ಸತ್ಯವದು ವಿಚಾರ ಶಕ್ತಿಯನು ಪ್ರಚೋದಿಸಿದುದೆಂದು ಭಾವಿಸುತ ಮನದಿಂದೆನ್ನ ಸರ್ವ ಸಟೆಗಳನು ವರ್ಜಿಸಲು ಯತ್ನಿಸೆನು ನಿರಂತರ.

ಎನ್ನ ಹೃದಯದಾಳವಾಗಿಹುದು ನಿನ್ನ ಪ್ರತಿಷ್ಠಾಸ್ಥಾನವೆಂದು ಭಾವಿಸುತಾ ಹೃದಯದಿಂದ ಸರ್ವ ಪಾಪಗಳನು ವರ್ಜಿಸಲು ಯತ್ನಿಪೆನು ನಿರಂತರ; ಅದರ ಸ್ಥಾನದೊಳು ಪ್ರೇಮಕುಸುಮವನು ಸ್ಥಾಪಿಸುವೆನಾನು.

ಎಲ್ಲದರ ಕರ್ತೃ ನೀನಾಗಿಹೆ ಯೆಂದು ಭಾವಿಸುತಲೆನ್ನ ಸಮಸ್ತ ಕಾರ್ಯದೊಳು ನಿನ್ನನು ಪ್ರಕಟಿಸಲು ಯತ್ನಿಪೆನು ನಿರಂತರ.

೫

ನಿನ್ನ ಸಹಪಂಕ್ತಿಯಾ ಲಾಭವನು ನಿಮಿಷ ಮಾತ್ರಕೆ ದಯೆಪಾಲಿಸೆನಗೆ. ಕೈಯೊಳಿಹ ಕಾರ್ಯವನು ಮುಗಿಸುವೆನು ನಾನಾಮೇಲೆ.

ನಿನ್ನ ಮುಖಕಮಲದಾ ದರುಶನವು ದೊರೆಯದಿರೆ ಸಿಗದೆನಗೆ ವಿಶ್ರಾಂತಿ ಸಹನೆಗಳು; ನೀರಿನೊಳಗಣ ಹೋಮದಾ ರೂಪವನು ತಾಳುವುವೆನ್ನ ಕಾರ್ಯಗಳು.

ಬೇಸಿಗೆಯಕಾಲ ಬಂದಿಹುದೆನ್ನ ಬಾಗಿಲೊಳು; ಪ್ರಾಣಿಗಳ ನಿಟ್ಟುಸಿರ, ಗುಜುಗುಜಿನ ಮೇಳದಿಂ ಬಂದಿಹುದು. ಪುಷ್ಪವನದೊಳು ದುರುದುಂಬಿಗಳು ಹಾರುತಿಹವು ಸಂತಸದ ಗಾನ ಮತ್ತತೆಯಿಂದ.

ವಿಪುಲವಾಗಿಹ ಮೌನದಾ ಬಿಡುವಿನೊಳು ನಿನ್ನ ಸಾನಿಧ್ಯದೊಳು ಶಾಂತತೆಯ ಆವೇಶದೆನ್ನ ಜೀವನವ ನಿನಗರ್ಪಿಸುತ ಹಾಡುವೆನು ನಾನು.

೬

ಈ ಚಿಕ್ಕ ಪುಷ್ಪವನು ಗಿಡದಿಂದ ಬೇರ್ಪಡಿಸಿ ಸ್ವೀಕರಿಸು; ಕಾಯದಿರಿನ್ನು. ಇಲ್ಲದಿದ್ದೊಡೆ ಪುಷ್ಪವಿದು ಬಾಡಿ ಧೂಳಿಯನು ಸೇರುವಾ ಭಯವಿಹುದೆನಗೆ.

ನಿನ್ನ ಕೊರಳಿನ ಮಾಲೆಯೊಳು ಪುಷ್ಪವಿದಕೆ ಸಿಗದಿರಬಹುದೊಂದು ಸ್ಥಾನ. ಆದರೆ, ನಿನ್ನ ಕರಸ್ಪರ್ಶದಾ ನೋವಿನಾನುಭವವ ದಯೆಪಾಲಿ

ಸೆನಗೆ; ತ್ವರಿತದಿಂ ಬೇರ್ಪಡಿಸೀ ಗಿಡದ ಪುಷ್ಪವನು. ಇಲ್ಲದಿದ್ದೊಡೆ, ಎನ ಗರಿವಿಲ್ಲದೆನೆ ದಿನವಿದು ಕಳೆದು, ನಿನ್ನಯ ಪೂಜೆಯ ಸಮಯ ಜಾರುವು ದೆಂಬ ಭಯವಿಹುದೆನಗೆ.

ವರ್ಣರಂಜಿತವಲ್ಲವೀ ಪುಷ್ಪ, ಗಂಧವಿರಬಹುದಿದರ ಬರಿಯಲ್ಪ, ಆದರೂ, ಅವಕಾಶವಿಹುದೀಗ. ಪುಷ್ಪವಿದನು ತೆಗೆದು ನಿನ್ನ ಸೇವೆಯೊಳು ಬಳಸು.

೭

ಎನ್ನ ಹಾಡಿದು ತ್ಯಜಿಸಿಹುದಾಭರಣಗಳನು. ಅಮೂಲ್ಯದಾ ತೊಡವೆ ಗಳ ಸಿಂಗಾರದಾಗರ್ವವಿಲ್ಲವವಳಿಗೆ. ಆಭರಣಗಳು ಆತಂಕಿಸುವುವೆಮ್ಮ ಮಿಲನದೊಳು. ಕಲಕಲರವದಿಯಾಭರಣಗಳು ಆಕ್ರಮಿಸುವುವೆಮ್ಮ ಮಾತನು; ನಿನ್ನನು ಸೇರಲು ಬಿಡವೆನಗೆ.

ನಿನ್ನ ಸಾನಿಧ್ಯದೊಳೆನ್ನ ಕವಿತನದ ಗರ್ವವಿದು ನಾಣ್ಚಿಸಿಂ ಮಡಿ ಯುವುದು. ಹೆ ಕವಿರಾಜ್, ಕುಳಿತಿಹೆನು ತವಚರಣದಾ ಬಳಿಯೊಳು. ಎನ್ನ ಜೀವನವ ಸುಲಭವಾಗಿಸು; ನೀನು ಬಾರಿಪ ಮುರಲಿಯಂದದಿ ಮಾಡೆನ್ನ ಬಾಳ್ವೆಯನು.

೮

ರಾಜವೈಭವದ ತೊಡವೆಗಳಿಂದ ಸಿಂಗರಿಪ ಬಾಲನಿಗೆ, ಆಭರಣದಿಂ ಬಂಧಿತವಾಗಿಹ ಕೊರಳ ಬಾಲನಿಗೆ ಆಟದಾ ಸುಖವೆಲ್ಲಿಹುದು? ಆತನಾ ತೊಡವೆಗಳು ಹೆಜ್ಜೆ ಹೆಜ್ಜೆಗೆ ತರುವವಾತಂಕಗಳನು.

ಜರ್ಝರಿತವಾಗುವಾ, ಧೂಳಿಮಯವಾಗುವಾ ಭಯದಿಂದ ಪೊರೆ ಯಲಾ ತೊಡವೆಯನು, ಜಗದಿಂದ ದೂರಾಗುವನಾ ಬಾಲಕನು. ಅಲುಗ ದಿಹನವನು ಭಯದಿಂದ.

ಆರೋಗ್ಯದಾಯಕ ರಜದಿಂದ ಬೇರ್ಪಡಿಸಿ, ಬಂಧನದ ವೈಭವವ ಕರುಣಿಸಿದೊಡೆ ತಾಯೆ, ಶ್ರೇಷ್ಟಲಾಭವಾಗದದು. ಸಾಮಾನ್ಯದಾ ಮಾನುಷಿಕ ಜೀವನವ ಹೊಗುವ ಅಧಿಕಾರವನು ಸೆಳೆಯುವಾ ವೈಭವದಿಂದೇನುಫಲ?

೯

ಎಲೆ ಮರುಳ, ಎಲ್ಲವನು ನೀನೆ ಹೊರುವ ಯತ್ನದೊಳಿಹೆಯಲ್ಲ? ಎಲೆ ದರಿದ್ರ ಮಾನವನೆ, ನಿನೊಡನೆಯೇ ಬೇಡುತಿಹೆಯಲ್ಲ?

ಎಲ್ಲರಾ ಭಾರವನು ಹೊರುವ ಬಲಯುತನ ಮೇಲಿರಿಸು ನಿನ್ನ ಮೂಟೆಯನು. ಪಶ್ಚಾತ್ತಾಪವನು ಪಡೆಯದಿರು ನಿನ್ನಾ ಕಾರ್ಯದ ನೆವನದಿಂ.

ನಿನ್ನಾಸೆಯಾ ಮಾರುತನ ಸ್ಪರ್ಶದಿಂದಾರುತಿಹುದು ಹಣತೆಯಾ ಜ್ವಲಿಪ ಜ್ಯೋತಿ. ಆಸೆಯಿಂದಪವಿತ್ರವಾದಾ ನಿನ್ನ ಕರಗಳಿಂ ಸ್ವೀಕರಿಸದಿರಾ ಪಾರಿತೋಷಕಗಳನು. ಪವಿತ್ರ ಪ್ರೇಮದಿಂದರ್ಪಿಸಿದವುಗಳನು ಮಾತ್ರ ಸ್ವೀಕರಿಸು.

೧೦

ಅತಿ ದರಿದ್ರರ, ಅತಿ ಪತಿತರ, ಕಳೆದು ಹೋದವರ ವಾಸಸ್ಥಾನದೊಳಿಹುದು ನಿನ್ನ ಮಣೆ; ನಿನ್ನ ಕಾಲ್ಗಳಿಹದವರ ಮೇಲೆ.

ನಿನ್ನೆದುರು ಶಿರವ ಬಾಗಿಸಲು ಯತ್ನಿಸಿದೊಡೆ ಅತಿ ದರಿದ್ರ, ಅತಿ ಪತಿತ, ಕಳೆದು ಹೋದವರ ಸನಿಯದೊಳಿರುವ ತವಪದಕಮಲದಾ ಸನಿಯನನು ಸೇರಲಾರವೆನ್ನ ಪ್ರಣಾಮಗಳು.

ನಿಗರ್ವಿಯಾದಾ ಅತಿ ದರಿದ್ರ, ಅತಿ ಪತಿತ, ಕಳೆದುಹೋದವರೊಡನೆ ಸಂಚರಿಪ ನಿನ್ನೊಳಿಲ್ಲ ಗರ್ವಿಗಳಿಗೆ ಪ್ರವೇಶ.

ಸಾಥಿಯಿಲ್ಲದಾ ಅತಿ ದರಿದ್ರ, ಅತಿ ಪತಿತ, ಕಳೆದು ಹೋದವರ ಮಿತ್ರತ್ವವನೆಳಸುವ ನಿನ್ನ ಸನಿಯವನು ಸೇರುವಾ ದಾರಿ ಅಗಮ್ಯವಾಗಿಹುದೆನ್ನ ಹೃದಯಕೆ.

೧೧

ಮಂತ್ರ, ತಂತ್ರ, ಜಪಗಳನ್ನು ತ್ಯಜಿಸಲೆ ಮಾನವಾ. ಬಾಗಿಲನು ಮುಚ್ಚಿ, ಕತ್ತಲೊಳಿದ್ದು ಅದಾರ ಪೂಜೆಯನು ಮಾಡುತಿಹೆ ನೀನು? ತೆರೆ ನಿನ್ನ ಕಣ್ಗಳನು. ನಿನ್ನೆದುರು ದೇವನಿಲ್ಲವೆಂಬುದನು ನೋಡು ಮಾನವಾ.

ಗದ್ದೆಯುಳುವಾ ರೈತನೊಡನಿರುವನಾ ದೇವನು; ಕಲ್ಲೊಡೆಯುವಾ ಆಳಿನಾ ಸನಿಯದಲ್ಲಿರುವನವನು. ಬಿಸಿಲಲ್ಲಿ ಒಣಗುವನವನು ಕಾರ್ಮಿಕರೊಡನೆ; ಮಳೆಯಲ್ಲಿ ನಿಂತಿಹನವನು ಅವರೊಡನೆ; ವಸ್ತ್ರವಾಗಿಹುದಾತನಾ ಧೂಳಿಮಯ. ನಿನ್ನ ಮಡಿಯುಡುಪನ್ನು ಕಳಚಿಲೆಮಾನವಾ; ಆತನಂದದಿ ಕೆಲಸಕ್ಕೆ ತೊಡಗು ಧೂಳಿಯಲಿ.

ಮುಕ್ತಿ ಬೇಕೆ ಮಾನವಾ, ನಿನಗೆ? ಎಲ್ಲಿರುವುದಾ ಮುಕ್ತಿ? ಸೃಷ್ಟಿ ಬಂಧನದಾ ಮಹತ್ಕಾರ್ಯವನು ಹೊತ್ತಿಹನು ನಮ್ಮ ದೇವನು ಅತ್ಯಂತ ಸಂತಸದಿ. ಆಗಿರುವವನು ನಮ್ಮಂತೆ ಬಂಧಿತನು ನಿರಂತರ.

ನಿನ್ನ ಧ್ಯಾನೋಪಾಸನೆಯಿಂದ ಬಾರೆಲೊ ಮಾನವಾ ಹೊರಗೆ; ಷೋಡಶೋಪಚಾರಗಳಿರಲಿ ಮೂಲೆಯಲಿ. ನೀನುಟ್ಟ ಬಟ್ಟೆ ಹರಿದಲ್ಲಿ ಧೂಳಿಮಯವಾದಲ್ಲಿ ಕೆಡುಕೇನು ಮಾನವಾ? ಆತನಾ ಜೊತೆಯನ್ನು ಸೇರಿ ಬದ್ಧಕಂಕಣನಾಗು, ಹಣೆಯಲ್ಲಿ ಬೆವರ ಸುರಿಸಲು.

೧೨

ಎನ್ನ ಪಯಣಕೆ ತಗಲುವುದು ಬಹು ಸಮಯ; ಮಾರ್ಗವಿಹುದದರ ಬಹು ದೀರ್ಘ.

ಅರುಣೋದಯದ ಕಾಲದೊಳು ಬಂದಿಹ ಪ್ರಥಮ ಕಿರಣದೊಡನೆ ಬಂಡಿಯನ್ನೇರಿ ಹೊರಟೆನು ನಾನು. ನಕ್ಷತ್ರಗ್ರಹಗಳನೇಕವುಗಳನು ದಾಟಿ ಪಯಣವನು ಬೆಳೆಸಿದೆನು ಜಗದ ಮರುಭೂಮಿಯ ಮೂಲಕದಿ.

ನಿನ್ನ ಸಾನಿಧ್ಯವನು ದೊರೆಕೊಳ್ಳ ಅತಿ ಸಮೀಪದ ಮಾರ್ಗವಿಹುದತಿ ದೀರ್ಘ. ಅತ್ಯಂತ ಸರಳತೆಯ ನಾದವನು ಕಲಿಸುವಾ ಅಧ್ಯಯನವತಿ ಗಹನವಾಗಿಹುದು.

ಪಯಣಿಗನು ನಿಜಗೃಹದ ಹುಡುಕಾಟದೊಳು ಪ್ರತಿಯೊಂದು ಪರಗೃಹದ ಬಾಗಿಲನು ಬಡಿಯಲಿಕ್ಕಿಹುದು; ಅಂತ್ಯಕಾಲದೊಳು ಆಂತರಿಕ ಗರ್ಭಗುಡಿಯನು ಹೊಗಲು ಬಾಹ್ಯಪ್ರಪಂಚದೊಳಲೆಯಲಿಕ್ಕಿಹುದು.

ದಿಗಂತಾವಲೋಕನದ ಕೆಲಸವಿದು ಸಿಕ್ಕಿಹುದೆನ್ನ ಕಣ್ಗಳಿಗೆ. ಆ ಮೇಲೆನ್ನ ಕಣ್ಗಳನು ಮುಚ್ಚಿ, "ನೀನಿಲ್ಲಿಹೆ" ಎಂದೊದರಿದೆನು ನಾನು.

"ಓ, ಎಲ್ಲಿ?" ಎಂಬೆನ್ನ ಪ್ರಶ್ನೆ ರೋದನಗಳ ಅಶ್ರುವಿನ ಸಹಸ್ರ ನದಿಗಳಾಗಿ, "ನಾನೆಂಬ" ಆಶ್ವಾಸನಾ ಜಲದ ನೆರೆ ಬಂದುದು ಜಗದೊಳು.

೧೩

ಬಂದಿರ್ದ ನಾ ಹಾಡಲೋಸುಗ; ಹಾಡದುಳಿದಿಹುದಾ ಹಾಡಿಂದು.

ವೀಣೆ ಯಾ ತಂತಿಯನು ಸರಿಗೊಳಿಸೆ ವ್ಯರ್ಥವಾಗಿವೆಯನ್ನ ದಿನಗಳನೇಕವುಗಳು.

ಒದಗಲಿಲ್ಲವು ಯೋಗ್ಯವಾಗಿಹ ಸಮಯ; ಅಸ್ತವ್ಯಸ್ತವಾಗಿಹುದೆನ್ನ ಪದರಚನೆ. ಅಶಾಂತರ್ಗತ ವೇದನೆಯು ತುಂಬಿಹುದೆನ್ನ ಹೃದಯದೊಳು.

ಕುಸುಮವಿದು ವಿಕಾಸವಾಗದಿಹುದು; ಮಂದಮಾರುತನ ತಲೆಯ ಮೇಲಣ ಹೊರೆ ಭುಜದೊಳಾಸೀನವಾಗಿಹುದು.

ಆತನಾ ಮುಖಕಮಲವನು ಕಾಣದಿಹೆ; ಆತನಾ ಸವಿನುಡಿಗಳನು ಕೇಳದಿಹೆ ನಾನು. ಎನ್ನ ಮನೆಯೊಳಗಿಂದಾತನಾ ಮಾರ್ಗದೊಳಗಣ ಕೋಮಲ ಪದಧ್ವನಿಯನು ಮಾತ್ರ ಕೇಳಿಹೆನು ನಾನು.

ಆತನಿಗುಚಿತವಾದಾಸನದ ನಿರ್ಮಾಣ ಕಾರ್ಯದೊಳು ದಿನವು ಸಂದಿಹುದು. ದೀಪವನು ಬೆಳಗಿಸದಿಹೆನು ನಾನಿಲ್ಲಿ; ಆತನನು ಸ್ವೀಕರಿಸಲಸದಳವಾಗಿಹುದೆನಗೆ.

ಆತನನೊಮ್ಮೆ ನೋಡುವಾ ಬಯಕೆಯಿಂದಲಿ ಜೀವಿಸಿಹೆನು ನಾನಿಲ್ಲಿ; ಆದರೇನು? ನಮ್ಮ ಮಧುರ ಮಿಲನದಾಕಾಲ ಬರದಿಹುದು.

೧೪

ಅನೇಕವಿಹವೆನ್ನ ಬಯಕೆಗಳು, ಶೋಚನೀಯವಾಗಿಹುದೆನ್ನ ರೋದನವು. ಆದರೆ, ಕಠಿಣ ತಿರಸ್ಕಾರದಿಂದುಳಿಸೆನ್ನನನವರತ, ತವಪ್ರಬಲ ದಯಾಧಾರೆ ಮಿಶ್ರಿತವಾಗಿಹುದೆನ್ನ ಬಾಳ್ವೆಯೊಳು.

ಅತ್ಯಾಸೆಯಾ ಅಪಾಯದಿಂದುಳಿಸೆನ್ನನನುದಿನದಿ, ಸರಳ, ಅಮೂಲ್ಯವಾಗಿಹ, ನಾನಪೇಕ್ಷಿಸದ ಪಾರಿತೋಷಕಗಳನು— ಅಂತರಿಕ್ಷವಿದನು, ಪ್ರಕಾಶ

ವಿದನು, ಪಂಚಭೂತಾತ್ಮಕ ದೇಹ, ಜೀವನ, ಮನಗಳಿವನು—ಸ್ವೀಕರಿಸೆ ಯೋಗ್ಯತೆಯು ಕರುಣಿಸಿಹೆ ಯೆನಗೆ.

ನಿರ್ಬಲತೆಯಾ ನೆವನದಿಂ ಹಿಂದೆ ಬಿದ್ದಿಹ ದಿನಗಳಿಹವನೇಕವುಗಳು; ಜಾಗೃತಾವಸ್ಥೆಯನು ಸೇರಿ ಅವಸರದಿಯೆನ್ನ ಗುರಿಯನರಸಿದ ದಿನಗಳಿಹ ವನೇಕವುಗಳು. ಆದರೂ, ನೀನೆನ್ನೆದುರೊಳಿಂದಡಗಿಹೆಯಲ್ಲ?

ನಿರ್ಬಲದಸಿತ್ಯದಾಸೆಗಳ ಅಪಾಯದಿಂದೆನ್ನನುಳಿಸಿ, ಎನ್ನ ಬಯಕೆಗಳ ನೀಡೇರಿಸದೆ, ನೀನೆನ್ನ ಸ್ವೀಕರಿಸೆ ಯೋಗ್ಯನನಾಗಿಸುವೆ ನನವರತ.

೧೫

ನಿನಗಾಗಿ ಹಾಡಿ ತೋರಿಸಲಿಹೆನು ನಾನಿಲ್ಲಿ. ನಿನ್ನ ಕೊಠಡಿಯೊಳು ಸಿಕ್ಕಿಹುದೆನಗೀ ಮೂಲೆ.

ನಿನ್ನ ಸಾಮ್ರಾಜ್ಯದೊಳಗೆನಗಿಲ್ಲ ಕಾರ್ಯ; ಅಪ್ರಯೋಜಕವಾಗಿಹ ಯೆನ್ನ ಬಾಳ್ವೆಯಿದು ಒಂದಲ್ಲ ಒಂದು ದಿನ ಒಡೆಯಲಿಕ್ಕಿಹುದು.

ಕರಾಳವಾಗಿಹ ನಡುವಿರುಳ ದೇಗುಲದೊಳು ತವಮೌನ ಪೂಜೆಯಾ ಕಾಲವಾಗವಿಸೆ, ಹೆ ಪ್ರಭು, ನಿನ್ನೆದುರು ಹಾಡಲೋಸುಗ ವಿಧಿಸೆನಗೆ.

ಪ್ರಭಾತ ಕಾಲದೊಳು ಸ್ವರ್ಣವೀಣೆಯ ತವಗಾಯನವು ವಾತಾವರಣ ಹೊಳು ತುಂಬಿದಾ ಸಮಯದೊಳು, ಪ್ರೇಕ್ಷಕನಾಗಿಸೆ ದಯೆದೋರೆನ್ನೊಳು.

೧೬

ಜಾಗತಿಕ ಜಾತ್ರೆಯಿದಕೆ ಸಿಕ್ಕಿಹುದೆನಗೊಂದು ಆಮಂತ್ರಣವು. ಆದರಿಂದಾಗಿಹುದೆನ್ನ ಜೀವನವತಿ ಪಾವನ. ಎನ್ನ ಕಣ್ಗಳಿವು ಕಂಡಿಹವು; ಕೇಳಿಹವೆನ್ನ ಕಿವಿಗಳು.

ಈ ಔತಣದ ಸಮಾರಂಭದೊಳೆನ್ನ ವಾದ್ಯವನು ಬಾರಿಪ ಕೆಲಸವಿದು ಸಿಕ್ಕಿಹುದೆನಗೆ; ಎನಗೆ ಸಾಧ್ಯವಾದಂದದಿ ಪೂರ್ಣಗೊಳಿಸಿಹೆನು ನಾನದನು.

ತವಸಾನಿಧ್ಯವನು ಸೇರಿ, ಎನ್ನ ಮೂಕ ಪ್ರಣಾಮಗಳನರ್ಪಿಸುವ ಸಮಯ ಬಂದಿಹುದೆ? ಕೊನೆಗೊಮ್ಮೆ ಪ್ರವೇಶಿಸಲೆ ನಾನು?

೧೭

ಅಂತ್ಯಕಾಲದೊಳಾತನಾ ಕರದೊಳಗೆನ್ನನರ್ಪಿಸಲು ಪ್ರೇಮೋದಯಕೆ ಮಾತ್ರ ಕಾದಿಹೆನು ನಾನು. ಆಗಿಹುದದರಿಂದತಿ ವಿಳಂಬ. ಆ ಕೊರತೆಯ ನಿಮಿತ್ತದಿಂದೆನ್ನ ಮನಕಿಲ್ಲ ಶಾಂತತೆಯು.

ಬರುತಿಹರವರು; ಅವರಾ ನೀತಿ ನಿಯಮಗಳಿಂದೆನ್ನ ಬಂಧಿಸಲೆತ್ನಿಪರವರು. ಅಂತ್ಯಕಾಲದೊಳಾತನಾ ಕರದೊಳಗೆನ್ನನರ್ಪಿಸಲು ಪ್ರೇಮೋದಯಕೆ ಮಾತ್ರ ಕಾದಿಹೆನು ನಾನು. ಅದರಿಂದವರಿಗಗೋಚರನಾಗಿಹೆನು ನಾನನವರತ.

ಲೋಕಾಚಾರವನು ಪಾಲಿಸೆನೆಂಬ ದೋಷವನು ಹೊರಿಸುವರೆನ್ನ ಮೇಲೆ. ಅವರಾರೋಪದೊಳಗಿಹುದು ಸತ್ಯವೆಂಬದರಲ್ಲಿ ಸಂದೇಹವೆನಗಿಲ್ಲ.

ಸಂತೆಯಾದಿನವದು ಕಳೆದಿಹುದು, ಕಾರ್ಯಪಟುಗಳ ಸರ್ವ ಕಾರ್ಯಗಳಾಗಿಹವು ಸಂಪೂರ್ಣ. ಎನ್ನನು ವ್ಯರ್ಥದಿಂ ನೋಡಬಂದವರು ಮರಳಿಹರು ನಸುಕಿನಿಸಿನಿಂ. ಅಂತ್ಯ ಕಾಲದೊಳಾತನಾ ಕರದೊಳಗೆನ್ನನರ್ಪಿಸಲು ಪ್ರೇಮೋದಯಕೆ ಮಾತ್ರ ಕಾದಿಹೆನು ನಾನು.

೧೮

ಅಂತರಿಕ್ಷವಾಗಿಹುದು ಮೇಘಾಚ್ಛಾದಿತ, ಜಗದೊಳಗೆ ತುಂಬಿಹುದು ಗಾಢಾಂಧಃಕಾರ. ಹೆ ಪ್ರೇಮಪುರುಷ, ಬಾಗಿಲ ಬಳಿಯಲೇತಕೆ ಒಣಗಿಸುವೆ ಎನ್ನನು?

ಮಧ್ಯಾಹ್ನ ಕಾಲದಾ ಗಲಭೆಯಾಘಟಿಗಳಲಿ ಸಾಮಾನ್ಯ ಜನರೊಡನೆ ದುಡಿಯುತಿಹೆನು ನಾನು; ಆದರೆ, ಅಂಧಃಕಾರಮಯ ಏಕಾಂತದಾ ದಿವಸದೊಳು ತವಪ್ರಾಪ್ತಿಯನು ಮಾತ್ರ ಬಯಸುವೆನು ನಾನು.

ತವಮುಖಕಮಲದಾ ದರುಶನದ ಲಾಭವನು ದಯೆಪಾಲಿಸದೊಡೆ, ಸಂಪೂರ್ಣವಾಗೆನ್ನನಲಕ್ಷಿಸಿದೊಡೆ, ದೀರ್ಘವಾಗಿಹ ವರ್ಷಾಕಾಲವಿದನು ಕಳೆಯುವುದೆಂತೆನಗೆ ತಿಳಿಯದಿಹುದು.

ಬಹುದೂರದಾ ನಭೋಮಂಡಲದ ನಿರ್ಜೀವಾಂಧಃಕಾರವನು ನಾನೀಕ್ಷಿಸುತಿರೆ, ಎನ್ನ ಹೃದಯವಿದು ರೋದಿಸುತ ಅಶಾಂತ ಮಾರುತನೊಳಲೆಯುತಿಹುದು.

೧೯

ಮೌನತೆಯನೊಡೆಯದೆನೆ ನೀನಿರುವುದಾದೊಡೆ, ತವಮೌನವನೆನ್ನ ಹೃದಯದೊಳು ತುಂಬಿಪೆನದನನುಭವಿಸಲು. ಸ್ತಬ್ಧನಾಗುವೆನು ನಾನು; ಸಹನೆಯಿಂದವಗತವದನವಾಗಿಹ, ನಕ್ಷತ್ರ ಮುಖದಿಂದ ಕಾಯುವಾ ನಿಶಾದೇವಿಯಂದದಿ ಕಾಯುವೆನು ನಾನು.

ಪ್ರಾರ್ಥಃ ಕಾಲವದು ಬರುವುದೆಂಬುದು ನಿಶ್ಚಿತವು; ಅಂಧಃಕಾರವಿದು ನಶಿಸಿ, ತವಸ್ವರ್ಣಕಿರಣರೂಪದಿ, ನಭೋಮಂಡಲವ ಭೇದಿಸುತ ತವಮಧುರ ಸ್ವರ ಹರಿಯಲಿಕ್ಕಿರುವುದೆಂಬುದು ನಿಶ್ಚತವು.

ಎನ್ನ ಪ್ರತಿಯೊಂದು ಪಕ್ಷಿಪಂಜರದಿಂದಾಗ ನಿನ್ನ ಶಬ್ದಗಳು ಪದ್ಯರೂಪದೊಳು ಹಾರುವುವು; ಕಟ್ಟಡವಿಯಾ ಕಿರಿಯುಗಲದಾ ಮಾರ್ಗದಿಂದಾಗ ಸರ್ವಕುಸುಮಗಳನು ಭೇದಿಸುತ ತವಗೀತ ಸೌರಭವು ಬರಲಿಹುದು.

೨೦

ಸುಂದರ ಕಮಲವದರಳಿದಂದು ಎನ್ನ ಮನವಿದು ಸ್ಥಿಮಿತದೊಳಗಿರಲಿಲ್ಲ. ಅದರ ಗೊಡವೆಯಿರಲಿಲ್ಲೆನಗೆ. ಎನ್ನ ಬುಟ್ಟಿ ಬರಿದಿತ್ತಾಗ; ಕಮಲವದಲಕ್ಷದಿಂದುಳಿದಿತ್ತಲ್ಲಿ.

ಶೋಕವೊಂದಾಗಾಗ ಹಲ್ಲೆ ನಡೆಸುತಿಹುದೆನ್ನ ಮೇಲೀಗ ಮಾತ್ರ. ಆಗೆನ್ನ ಸ್ವಪ್ನದಿಂ ಜಾಗೃತಕೆ ಬರೆ, ವಿಚಿತ್ರ ಸೌರಭದ ಮಧುರ ಶೇಷವದು ಬಂದಿಹುದೆನ್ನನುಭವದೊಳಗೆ ದಕ್ಷಿಣ ಮಾರುತನೊಳಗಿಂದ.

ಮಾಧುರ್ಯದಾ ಅಲ್ಪಾನುಭವವು ಆಶಾರೂಪಿ ಗಾಯವೊಂದನು ಮೂಡಿಹುದೆನ್ನ ಹೃದಯಕೆ. ಪರಿಪೂರ್ಣತೆಯನರಸೆ ಬೇಸಿಗೆಯು ಆತುರತೆಯಿಂ ನಡೆಸುವಾ ಶ್ವಾಸಕ್ರಿಯೆಯಾಗಿ ತೋರಿತೆನಗಾ ಮಾಧುರ್ಯ.

ಅತ್ಯಂತ ಸಮೀಪವಿದ್ದುದದೆಂದು ತಿಳಿಯದಿದ್ದೆನು ನಾನು. ಕಮಲವದಾಗಿತ್ತುಯೆನ್ನದೆಂದು, ಸಂಪೂರ್ಣ ಮಾಧುರ್ಯವಿದೆನ್ನ ಹೃದಯದೊಳು ವಿಕಸಿತವಾಗಿತ್ತೆಂದು ತಿಳಿಯದಿದ್ದೆನು ನಾನು.

೨೧

ಎನ್ನ ದೋಣಿಯನು ನಡೆಸಲೇ ಬೇಕೀಗ. ಸವಿಯಿಲ್ಲದಾ ಯೆನ್ನ ದಿವಸಗಳು ತೊರೆಯ ತೀರದೊಳು ವ್ಯರ್ಥವಾಗುತಿಹವು. ಹಾ! ಯೆನ್ನ ವಿಧಿಯೆ!

ತನ್ನ ಕಾರ್ಯವನು ಪೂರ್ಣಗೊಳಿಸಿಹನು ವಸಂತನು. ಆತನಾ ಬಿಡುವಿನಾ ಕಾಲ ಬಂದಿಹುದು. ಬಾಡಿದಾ ವ್ಯರ್ಥಕುಸುಮಗಳ ಭಾರ ವನು ಹೊತ್ತು ಕಾಯುತಿಹೆನು ನಾನು. ಆದರಿಂದ ಹಿಂದೆ ಬಿದ್ದಿಹೆನು ನಾನು.

ಕರ್ಕಶದ ಸ್ವರದಿಂದಾಡುತಿಹವು ತರಂಗಗಳು; ನೆರಳಿನಿಂ ಮುಚ್ಚಿದಾ ದಾರಿಯೊಳಿಹ ನದಿಯ ದಡದೊಳು ಮುದಿಯೆಲೆಗಳವಸರದಿಂದ ಬೀಳು ತಿಹವು. ಅಚ್ಚರಿಯಿಂದದಾವ ಶೂನ್ಯತೆಯ ನೀಕ್ಷಿಸುವೆ ನೀನು! ಬಹು ದೂರದಾ ವಿರುದ್ಧ ತೀರದೊಳಿಹ ಗೀತಧ್ವನಿಯು ವಾತಾವರಣದೊಳು ಪಯಣಿಸುವ ಆವೇಶಬಾರದೆ ನಿನ್ನನುಭವದೊಳು?

೨೨

ಅಖಂಡ ವರ್ಷಾಕಾಲದಾ ಅಗಾಧ ಛಾಯೆಯೊಳು ನಿಶಾಮೌನದಿಂ ದೆಲ್ಲರಾ ಕಣ್ಮರೆಸಿ ಗುಪ್ತವಾಗಿಹ ಹೆಜ್ಜೆಗಳ ನಿಡುವೆ ನೀನು?

ತಾರಕ ಕಂಠದಾ ಪೂರ್ವ ಮಾರುತನ ಒತ್ತಾಯದಾಮಂತ್ರಣವ ನಲಕ್ಷಿಸಿ ಪ್ರಾತಃಕಾಲವದು ಕಣ್ಗಳನು ಮುಚ್ಚಿಹುದಿಂದು; ನಿತ್ಯಜಾಗೃತಾ ವಸ್ಥೆಯೊಳಿಹ ನೀಲಾಂತರಿಕ್ಷದ ಮೇಲೆ ಹೊದೆದಿಹುದೊಂದು ದಪ್ಪಗಿನ ಬಟ್ಟೆ.

ಅರಣ್ಯದೊಳಗಣ ಹಾಡುಗಳು ಸ್ತಬ್ಧವಾಗಿಹವು, ಸರ್ವ ಗೃಹದ್ವಾರ ಗಳು ಮುಚ್ಚಿಹವು. ಜನರಹಿತವಾದೀ ಮಾರ್ಗದೊಳು ಪಯಣಿಗನು ನೀನೊರ್ವನಾಗಿರುವೆ. ಎಲೆಯೆನ್ನ ಓರ್ವನೆಯಾದ ಪ್ರಿಯಕರಮಿತ್ರನೆ, ಎನ್ನ ಮನೆಯ ದ್ವಾರ ತೆರೆದಿಹುದು. ಸ್ವಪ್ನದೊಳಗಣಾಗಮನದಂತಿರದೆ, ಪ್ರವೇಶಿಸೆನ್ನ ಮನೆಯನು.

೨೩

ಎಲೆಯೆನ್ನ ಮಿತ್ರ, ಕರಾಳವಾದೀ ರಾತ್ರಿಯುಲಿ, ತವಪ್ರೇಮ ಪ್ರಯಾಣ ಕೋಸುಗ ಪರದೇಶದೊಳಗಿಹೆಯಾ? ಕಂಗೆಟ್ಟು ಪಿಸುಗುಟ್ಟುತಿಹುದೀ ನಭೋ ಮಂಡಲವು.

ನಿದ್ರಾಲಾಭವಿಲ್ಲೆನಗೀರಾತ್ರಿಯುಲಿ. ಇಡಿ ರಾತ್ರಿಯುಲಿ, ಬಾಗಿಲನು ತೆರೆದಾಗ, ಎಲೆಯೆನ್ನ ಮಿತ್ರ, ಆರಸುವೆನು ನಾನಂಧಃಕಾರದೊಳು.

ಶೂನ್ಯವನು ಕಾಣುತಿಹೆನು ನನ್ನೆದುರು. ತವಪಥವೆಲ್ಲಿಹುದೆಂದಚ್ಚರಿಯು ಪಡೆಯುತಿಹೆನು ನಾನು.

ಕೃಷ್ಣವರ್ಣದ ತೊರೆಯು ಅದಾವ ಅಸ್ಪಷ್ಟ ದಡದಿಂದ, ಅಸಂತೋಷಿತವಾಗಿಹ ಅದಾವ ಕಾನನದ ಬದಿಯಿಂದ, ಆದಾವ ಅಂಧಃಕಾರದಾ ಅಸ್ಪಷ್ಟ ಅಂತಃಕರಣದಿಂದ, ಎಲೆಯೆನ್ನ ಮಿತ್ರ, ಬರುತಿರುವೆಯೆನ್ನ ಕಾಣಲೋಸುಗ?

೨೪

ದಿವಸವಂತ್ಯವಾದೊಡೆ, ಹಕ್ಕಿಗಳ ಗಾಯನವು ಮುಗಿದೊಡೆ, ಆಯಾಸದಿಂ ಮಾರುತನು ಶಕ್ತಿರಹಿತನಾದೊಡೆ ನಿದ್ರಾಂಬರಾಚ್ಛಾದನದಿ ಪೃಥ್ವಿಯಂ ಹೊದೆದ ತೆರದಿ, ಸಂಧ್ಯಾಕಾಲದೊಳು ಕಮಲದೆಸಳುಗಳನು ಮಾರ್ದವ್ಯದಿಂ ಮುಚ್ಚಿದವೊಲು, ಗಾಢಾಂಧಃಕಾರದಾ ಬಟ್ಟೆಯನು ಸುತ್ತೆನಗೆ.

ಪಯಣದಂತ್ಯದ ಮೊದಲು ಪಯಣಿಗನ ಬುತ್ತಿ ಬರಿದಾದಲ್ಲಿ, ಆತನಾವುಡಿಗೆ ಹರಿದು ಹೋದಲ್ಲಿ, ಧೂಳಿಮಯವಾದಲ್ಲಿ, ಆತನಾ ಶಕ್ತಿ ಕುಗ್ಗಿ ಹೋದಲ್ಲಿ, ಅಂತ್ಯಗೊಳಿಸಾತನ ದರಿದ್ರತೆಯನಪಖ್ಯಾತಿಯನು; ದಯಾಮಯನಿಶಾ ದೇವಿ ಕುಸುಮವನು ಸಾಕುವ ತೆರದಿ ನವಜೀವನವನು ತುಂಬಿಸವನೊಳು.

೨೫

ಎನ್ನ ವಿಶ್ವಾಸವನು ನಿನ್ನ ಮೇಲಿರಿಸಿ, ನಿಶಾಯಾಸದೊಳು ಪ್ರತಿಭಟಿಸದೆನೆ ನಿದ್ರಾದೇವಿಯ ಶರಣುಬರ ಲೆಳಸುವೆನು ನಾನು.

ನಿನ್ನ ಪೂಜೆಗೆ ಪ್ರಯಾಸದಿಂ ಶಕ್ತಿಹೀನನಾದೆನ್ನ ಆತ್ಮವಿದು ತುಚ್ಛ ಸಾಧನಗಳ ತಯಾರಿಕೆಯುಲಿ ನಿರತವಾಗಲೆಳಸೆನು ನಾನು.

ದಿವಸ ದಾಯಾಸಗೊಂಡಿಹ ಕಣ್ಗಳಲಿ, ಜಾಗೃತಾವಸ್ಥೆಯಲಿ ಅದರ ದೃಷ್ಟಿಯ ಮೇಲೆ ನವಸಂತೋಷವನೆರೆಯೆ, ನಿಶಾಯಾಂ ಬರವಹೊದಿಸಿದವ ನೀನಾಗಿಹೆ.

೨೬

ಬಂದಿದ್ದನವನು, ಕುಳಿತಿದ್ದನವನೆನ್ನೊಡನೆ, ಆದರೆ ಎಚ್ಚರಗೊಳ್ಳದಿದ್ದೆನು ನಾನಾಗ. ಯಾವ ಶಾಪದ ನಿದ್ದೆಯೋ ಅದು, ಅದೆಷ್ಟು ದುರ್ದೈವಿಯೋ ನಾನು!

ಬಂದಿದ್ದನವನು ಪ್ರಶಾಂತ ನಿಶೆಯೊಳು; ಆತನಾವೀಣೆಯಿದ್ದುದವನ ಕೈಯೊಳಗೆ. ಎನ್ನ ಸ್ವಪ್ನಗಳೆಲ್ಲವು ಸಹಸ್ಪಂದಿಸಿದುವಾತನಾ ಗಾನದೊಳು.

ಹಾಯ್, ಎನ್ನ ಸರ್ವರಾತ್ರಿಗಳಿಂತು ವ್ಯರ್ಥವಾದುವದೇಕೆ? ಆತನಾ ಶ್ವಾಸವದೆನ್ನ ನಿದ್ರೆಯನು ಸ್ಪರ್ಶಿಸಿದ ಕಾಲದೊಳಾತನಾದರುಶನವ ನಾನೇಕೆ ಕಳೆದಿಹೆನು?

೨೭

ಬೆಳಕು, ಎಲ್ಲಿಹುದಾ ಬೆಳಕು? ಉರಿವ ಆಸೆಯಾ ಬೆಂಕಿಯಿಂದದನು ಬೆಳಗಿಸು!

ಹಣತೆಯೊಂದಿಹುದಲ್ಲಿ; ಜ್ಯೋತಿಯಾ ಕಿಡಿಯಿಲ್ಲದವರಲ್ಲಿ. ಎನ್ನೆದೆಯು ಬಿದಿಯುದಾಗಿಹುದು!

ತೊಡಕುಗಳು ಬಂದು ಬಡಿಯುವುವು ನಿನ್ನ ಬಾಗಿಲುಗಳನು, ನಿನ್ನೊಡೆಯನಿಹನೆಚ್ಚತ್ತೆಂಬರಾಯುಸವ ತರುತಿಹವು. ಇರುಳಕತ್ತಲೆಯೊಳಗಿಂದ ನಣ್ಪಿನಾ ಬರವಸೆಯುತರುತಿಹವು.

ಆಗಸದಿ ಮೋಡಗಳು ತುಂಬಿಹವು, ಬಿಡದೆ ಬೀಳುತಿಹುದಿಲ್ಲಿ ಮಳೆ. ಎನ್ನ ಮನವನಲ್ಲೋಲ ಕಲ್ಲೋಲವಾಗಿಸಿದುದಾರೆಂದು ಬಲ್ಲದಿಹೆನು ನಾನಿಲ್ಲಿ; ಆದರರಿವು ಆಗದೆನಗೀಗ.

ನಿಮಿಸದಾ ಮಿಂಚಿನಾ ಬೆಳಕು ಕಗ್ಗತ್ತಲೆಯು ಹೊರೆಯು ಹೊರಿಸುವುದೆನ್ನ ನೋಟದ ಮೇಲೆ; ಇರುಳ ಹಾಡಿದೆನ್ನನು ಕರೆವ ದಾರಿಯನರಸುತಿಹುದು ಕತ್ತಲೊಳೆನ್ನೆದೆಯು.

ಬೆಳಕು, ಎಲ್ಲಿಹುದಾ ಬೆಳಕು? ಉರಿವ ಆಸೆಯಾ ಬೆಂಕಿಯಿಂದದನು ಬೆಳಗಿಸು! ಗುಡುಗುಡಿಸುತಿಹುದಿಲ್ಲಿ; ಕಿರಿಚುತಲಿ ಸೊನ್ನೆಯಿಂ ಬೀಸುತಿಹುದಲ್ಲಿ ಗಾಳಿ. ಕಗ್ಗಲ್ಲತೆರದಿಹುದೀಯಿರುಳು. ವೇಳೆ ಕಳೆಯದಿರಲೀ ಕತ್ತಲೆಯಲಿ. ನಣ್ಪಿನಾ ಜ್ಯೋತಿಯನು ಬಾಳ್ವೆಯಿಂ ಬೆಳಗಿಸು.

೨೮

ಬಗಿದ ಸಂಕಲೆಗಳ ವಿಧೇಯವಾಗಿಹವು. ಅವುಗಳನು ಒಡೆಯಲೆತ್ನಿಸುವಾಗೆನ್ನ ಹೃದಯ ವೇದನಾಮಯವಾಗುವುದು.

ಸ್ವಾತಂತ್ರ್ಯವೊಂದೆ ಬೇಕಿಹುದೆನಗೀಗ; ಆದರದನು ಬಯಸುವುದು ನಾಣ್ಚಿಗೆಡೆಯಾಗಿಹುದು.

ಅಮೂಲ್ಯವಾದಾ ಐಶ್ವರ್ಯ ನಿನ್ನೊಳಿಹುದೆಂದು, ನೀನೆನ್ನ ನಚ್ಚಿನಾ ಮಿತ್ರನಾಗಿಹೆಯೆಂದು ನಿಶ್ಚಿತವಾಗಿಹುದೆನಗೆ; ಆದರೀ ಕೊಠಡಿಯೊಳಗಣ ತುಚ್ಛವಾಗಿಹ ಶೃಂಗಾರ ಸಾಧನಗಳನೆಲ್ಲವನು ತ್ಯಜಿಪ ಹೃದಯವೆನಗಿಲ್ಲ.

ಧೂಳಿಮಯವಾಗಿಹುದು, ಮೃತ್ಯುರೂಪದಿಂದಿಹುದು ಈ ಯೆನ್ನ ಹೊದಿಕೆ. ದ್ವೇಷಿಸುವೆ ನಾನದನು; ಆದರೂ ಪ್ರೇಮದಿಂದಾಲಿಂಗಿಸುವೆನದನು.

ಅನೇಕವಿವೆ ಯೆನ್ನ ಋಣಗಳು, ಎನ್ನಪಜಯುಗಳು ಪಡೆದಿಹವು ಭೀಕರಾಕಾರಗಳನು, ಗುಪ್ತಂದಿಂದಿಹವು ಭಾರವಾಗಿಹವೆನ್ನವಮಾನಗಳು ಆದರೂ, ಎನ್ನ ಒಳಿತನ್ನು ಬೇಡ ಬಂದಾಗ, ಎನ್ನ ಬೇಡಿಕೆಯು ಫಲಿಸುವುದೆಂಬ ಭಯದಿಂದ ನಡುಗುವೆನು ನಾನು.

೨೯

ಎನ್ನ ಹೆಸರಿನಿಂದಾವರಿತನಾಗಿ ಈ ಹಿಂಸಾ ಕೂಪದೊಳಳುತಿಹನವನು. ಪ್ರಾಕಾರ ನಿರ್ಮಾಣಕಾರ್ಯದೊಳು ದೊರಕದೆನಗವಕಾಶ. ದಿನ ದಿನಕೆ ಬೆಳೆಯುತಿಹವೀ ಗೋಡೆಗಳಾಗಸದಿ. ಗೋಡೆಯಾ ಕಾಳ ಛಾಯೆಯಿಂದೆನಗವನ ನಿಜ ಸ್ವರೂಪವದ ಗೋಚರವಾಗುವುದು.

ಶ್ರೇಷ್ಠವಾದೀ ಪ್ರಾಕಾರದಿಂ ಗರ್ವಿತನಾಗಿಹೆನು ನಾನು; ಛಿದ್ರಗಳ ನಿಲ್ಲಿ ಉಳಿಯಬಿಡದೆನೆ ಧೂಳಿಯಿಂ, ಹೊಯಿಗೆಯಿಂ ಸವರುವೆ ನೀ ಗೋಡೆಯನು; ನಿತ್ಯಜಾಗೃತನಾಗಿಂತಿರೆ, ಆತನಾ ನಿಜ ಸ್ವರೂಪವದಗೋಚರವಾಗುವುದು.

೩೦

ಎನ್ನಾಶ್ವಾಸನೆಗನುವಾಗಿ ಆತನನು ನೋಡೆ ಹೊರಟೆ ನಾನೊರ್ವನಂದು ಆದರೀ ಮೌನಾಂಧಃಕಾರದೊಳಾರದು ಬೆಂಬತ್ತಿ ಹರೆನ್ನನು?

ಆತನಾ ದೃಷ್ಟಿಯಿಂ ಮರೆಯಾಗೆ ಮಾಡಿದಾ ಯತ್ನಗಳೆಲ್ಲ ನಿಷ್ಫಲವಾಗಿಹವು.

ಅಟ್ಟಹಾಸದಿಂದಾತನಾ ತುಂಬಿಪನವನು ಗಾಳಿಯೊಳು ಧೂಳಿಯನು. ಆತನಾತಾರಕ ಕಂಠದೊಳು ಬೆರಸುವನವನೆನ್ನ ಮಂದ್ರ ಶಬ್ದಗಳೆಲ್ಲವನು.

ಎಲೆಯೆನ್ನ ಪ್ರಭುವೆ, ಎನ್ನ ಬಲು ಚಿಕ್ಕ ಮನವಾಗಿಹನವನು; ನಾಚ್ಕೆಂಬುದಿಲ್ಲವವನಿಗೆ. ಆತನೊಡಗೂಡಿ ತವದ್ವಾರವನು ಹೊಗಲು ಲಜ್ಜಿಪೆನು ನಾನು.

೩೧

"ಅದಾರಿಂದ ಬಂಧಿತನಾಗಿಹೆ, ಪೇಳೆನಗೆಲೆ ಕೈದಿ"

"ಎನ್ನೊಡೆಯನಾ ಕಾರ್ಯವಿದು. ಎನ್ನ ಪ್ರಾಬಲ್ಯದಿಂ, ಐಶ್ವೈರ್ಯದಿಂ ಜಗದೊಳಗಿಹ ಸರ್ವರನು ಸೋಲಿಸಲು ಶಕ್ತನಿಹೆನೆಂದು ಭಾವಿ

ಸಿದ್ದೆನು ನಾನು. ರಾಜನಿಗರ್ಪಿಸುವ ಧನದಿಂದೆನ್ನ ಭಂಡಾರವನು ತುಂಬಿ ರ್ದೆನು ನಾನು. ನಿದ್ರಾವೇಶವೆನ್ನನಾವರಿಸೆ ಎನ್ನ ಪ್ರಭುವಿನಾ ಶಯನ ತಲ್ಪದೊಳೊರಗಿದೆನು ನಾನೆಂದು ಕಂಡುಕೊಂಡೆನು ನಾನು" ಎಂದನಾ ಕೈದಿ.

"ದುರ್ಭೇದ್ಯ ಶೃಂಖಲೆಯನೀ ನಿರ್ಮಿಸಿದವರದಾರೆಂದು ಪೇಳೆ ನೆಗೆಲೆ ಕೈದಿ."

"ಬಹಳ ಜಾಗ್ರತೆಯಿಂದ ಸಂಕಲೆಯನೀ ಹದಗೊಳಿಸಿಹೆನು ನಾನು. ಎನ್ನ ಸ್ವಾತಂತ್ರ್ಯವನು ಕಳಕೊಳ್ಳದೆನೆ, ಎನ್ನ ಅಪ್ರತಿಭಟಿತ ಪ್ರಾಬಲ್ಯದಿಂ, ಜಗವೆಲ್ಲವನೆನ್ನ ಕರದೊಳಿರಿಸಲು ಶಕ್ತನಿಹೆನೆಂದು ಭಾವಿಸಿದ್ದೆನು ನಾನು. ಆದರಿಂದೆ ತೀಕ್ಷ್ಣಾಗ್ನಿಯಿಂ ಕಠೋರಾಘಾತದಿಂ ಈ ಸಂಕಲೆಯ ಕೆಲಸವನು ಕೈಕೊಂಡೆ ನಾನಹೋ ರಾತ್ರಿಯಲಿ. ಅಂತ್ಯದೊಳೀ ಕೆಲಸ ಪೂರ್ಣ ವಾಗಲು, ಸಂಕಲೆಯ ಕೊಂಡಿಗಳು ದುರ್ಭೇದ್ಯವಾಗಲು ಸಂಕಲೆಯ ಹಿಡಿತ ದೊಳು ಸಿಕ್ಕಿಹೆನು ನಾನೆಂದು ಕಂಡುಕೊಂಡೆನು'' ಎಂದನಾ ಕೈದಿ.

೩೨

ಎನ್ನನು ಪ್ರೇಮಿಸುವೀ ಜಗದ ಜನಗಳು ಬಂಧಿಸಲೆನ್ನನಿಲ್ಲಿ ಉತ್ಸಾ ಹದಿಂ ಯತ್ನಿಪರು. ಇದಕ್ಕಿಂತ ಉತ್ತಮವಿಹ ನಿನ್ನ ಪ್ರೇಮದಾ ಸ್ವರೂಪ ವಿದಾಗಿಲ್ಲ; ಸ್ವಾತಂತ್ರ್ಯವನು ಕರುಣಿಸುತಿಹೆ ನೀನೆನಗೆ.

ನಾನವರ ಮರೆವೆನೆಂಬ ಭಯದಿಂದ ನನ್ನನೊಬ್ಬನನೆ ಬಿಡಲವರು ಸಿದ್ಧವಾಗರು, ಆದರೆ, ದಿನದ ಮೇಲೊಂದು ದಿನ ಕಳೆಯುತಿಹುದು; ದೊರಕಿ ಲ್ಲೆನಗೆ ನಿನ್ನ ದರುಶನವು.

ನಿನ್ನನಾನಪೇಕ್ಷಿಸದೊಡೆನ್ನ ಪ್ರಾರ್ಥನೆಯೊಳು, ಸ್ಥಾಪಿಸದೊಡೆ ನಿನ್ನ ನೆನ್ನ ಹೃದಯದೊಳು, ಎನ್ನ ಪ್ರೇಮವನು ಕಾಯುತಿಹುದು ನಿನ್ನ ಪ್ರೇಮವು.

೩೭

ದಿವಸದಲಿ ಬಂದಿಹರವರೆನ್ನ ಮನೆಯಲಿ, "ಬಲು ಚಿಕ್ಕ ಕೊಠಡಿಯಲಿರುವೆವು ನಾವೆಂ"ದು ಹೇಳಿದರವರು.

"ನಿನ್ನ ದೇವಪೂಜೆಯೊಳು ನೆರವಾಗುವೆವು ನಾವು, ಆತನಾನುಗ್ರಹದೆಮ್ಮ ಭಾಗವನು ನಮ್ರತೆಯಿಂದ ಸ್ವೀಕರಿಸುವೆವು ನಾವು" ಎಂದರವರು; ಕುಳಿತರವರೊಂದು ಮೂಲೆಯಲಿ ನಿಗರ್ವದಿಂ ಶಾಂತತೆಯಿಂದೆನ್ನ ಕೊಠಡಿಯೊಳು.

ನಿಶಾಂಧಃಕಾರದೊಳು, ಪವಿತ್ರವಾಗಿಹಯೆನ್ನ ದೇಗುಲವನವರು ಸೂರೆಗೊಳ್ಳುವ ದೃಶ್ಯವನು ಕಂಡಿಹೆನು ನಾನು. ಎದುರಿಸಲಸದಳವಾದವರ ಪ್ರಾಬಲ್ಯದಿಂದ ಪ್ರವಿತ್ರಸ್ವಾರ್ಥದಿಂ ದೈವಪೀಠದ ನೈವೇದ್ಯವನವರು ಸೂರಿಗೊಂಡುದನು ಕಂಡುಕೊಂಡೆನು ನಾನು.

೩೪

ಎನ್ನ ಸರ್ವಸ್ವವನು ನಿನಗೆ ತೋರಿಸಲವಶ್ಯವಿರುವಾಯೆನ್ನ ಸ್ವಲ್ಪಾಂಶ ಮಾತ್ರ ಉಳಿದಿರಲಿ.

ಪ್ರತಿಯೊಂದು ಭಾಗದಿಂ ನಿನ್ನನುಭವವ ಪಡೆಯಲೆನಗೆ, ಪ್ರತಿಯೊಂದರಿಂ ನಿನ್ನ ಬಳಿಯನು ಸೇರಲೆನಗೆ, ಪ್ರತಿಯೊಂದು ನಿಮಿಷದಲೆನ್ನ ಪ್ರೇಮವನರ್ಪಿಸಲವಶ್ಯವಿರುವಾಯೆನ್ನ ಸ್ವಲ್ಪಾಂಶ ಮಾತ್ರ ಉಳಿದಿರಲಿ.

ನಿನ್ನನೊಮ್ಮೆಯೂ ಹುದುಗಿಸದಂತೆ ಮಾಡಲವಶ್ಯವಿರುವಾಯೆನ್ನ ಸ್ವಲ್ಪಾಂಶ ಮಾತ್ರ, ಉಳಿದಿರಲಿ.

ನಿನ್ನಂತಃ ಶಕ್ತಿಯಿಂದೆನ್ನ ಬಂಧಿಸಲು, ನಿನ್ನುದ್ದೇಶವನೆನ್ನ ಜೀವನದಿ ಸಾಧಿಸಲವಶ್ಯ ವಿರುವಾ ಯೆನ್ನ ಸ್ವಲ್ಪಾಂಶ ಮಾತ್ರ ಉಳಿದಿರಲಿ-ತವಪ್ರೇಮ ಶೃಂಖಲೆಯಾಗಿಹುದದು.

೩೫

ಮನಕೆ ಭಯವೆಲ್ಲಿರದೊ, ತಲೆಯೆಲ್ಲಿ ಬಾಗಿರದೊ,
ಅರಿವಿಗೆಲ್ಲಿ ಸ್ವಾತಂತ್ರ್ಯವಿಹುದೊ,
ಅಲ್ಪವಾದಾ ಸಾಂಸಾರಿಕ ಪ್ರಾಕಾರದಿಂದೆಲ್ಲಿ ಜಗವಿದು
ಒಡೆಯದಿಹುದೊ,
ಸತ್ಯಾಂತರಾತ್ಮನಿಂದೆಲ್ಲಿ ಹೊರಹೊಮ್ಮುವವೊ ಶಬ್ದಗಳು,
ಆಯಾಸವನುಗಣಿಸದೆನೆ ಕಾರ್ಯವದೆಲ್ಲಿ ಪೂರ್ಣತೆಗಾಹ್ವಾ
ಹನವನೀವುದೊ,
ನಿರ್ಜೀವ ನಡತೆಯೂ ಸಪ್ಪೆ ಮರುಭೂಮಿಯೊಳೆಲ್ಲಿ ಸ್ಪಷ್ಟದಾ
ವಿಚಾರಸರಣಿಯದು ದಾರಿಯನು ಮರೆಯದಿಹುದೊ,

ಅನವರತ ವಿಸ್ತಾರವಾಗುತಿಹ ಯೋಚನೆಗಳಲೆಲ್ಲಿ ನಡೆಯಿಸುವೆಯೊ ಮನವನು.

ಎಲೆ ಯೆನ್ನ ಪಿತನೆ, ಅಂಥ ಸ್ವಾತಂತ್ರ್ಯದಾ ಸ್ವರ್ಗದಲೆಚ್ಚರಿಸೆನ್ನ ದೇಶವನು.

೩೬

ಎಲೆಯೆನ್ನ ಪ್ರಭುವೆ, ಬೇಡುವೆನು ನಿನ್ನೊಡನೆ, ಎನ್ನ ಹೃದಯದಾ ದಾರಿದ್ರ್ಯವನಂತ್ಯಗೊಳಿಸು.

ಸುಖದುಃಖವನು ನಿರಾಯಾಸದಿಂ ಹೊರುವ ಶಕ್ತಿಯನು ದಯೆ ಪಾಲಿಸೆನಗೆ.

ನಿನ್ನ ಸೇವೆಯೊಳೆನ್ನ ಸೇವೆಯಿದು ಫಲಭರಿತವಾಗಿಸುವ ಶಕ್ತಿಯನು ದಯೆಪಾಲಿಸೆನಗೆ.

ಬಡವರನು ಕಡೆಗಣಿಸದೆನೆ, ಮದಾಂಧಃ ಬಲಶಾಲಿಗಳಿಗೆ ಬಾಗದೆನೆ ನಡೆವ ಶಕ್ತಿಯನು ದಯೆಪಾಲಿಸೆನಗೆ.

ನಿನ್ನಂತಃ ಶಕ್ತಿಗೆನ್ನ ಶಕ್ತಿಯನು ಪ್ರೇಮಪೂರ್ವಕವಾಗಿ ಶರಣಾಗಿಸುವ ಶಕ್ತಿಯನು ದಯೆಪಾಲಿಸೆನಗೆ.

೩೭

ಎನ್ನ ಶಕ್ತಿ ಶೇಷದಿಂದೀ ಪಯಣ ಕೊನೆಗೊಂಡಿಹುದೆಂದು, ಎನ್ನ ಮುಂದಿನ ಪಥವು ಮುಚ್ಚಿಹುದೆಂದು, ಅವಶ್ಯವಾಗಿಹ ಸಾಮಗ್ರಿಗಳ ಬುತ್ತಿ ಬರಿದಾಗಿಹುದೆಂದು, ಗಾಢಾಂಧಃಕಾರದೊಳು ವಿರಾಮವನು ಪಡೆಯುವಾ ಕಾಲ ಬಂದಿಹುದೆಂದು ಭಾವಿಸಿದ್ದೆನು ನಾನು.

ಆದರೆ, ಅಂತ್ಯವೆನಗಿಹುದೆಂದು ನಿನ್ನಂತಃ ಶಕ್ತಿಗರಿವಿಲ್ಲವೆಂಬುದನು ಕಂಡುಕೊಂಡೆನು ನಾನು. ವೊದಲ ಶಬ್ದಗಳು ನಾಲಗೆಯೊಳಂತ್ಯವಾಗಲು, ಹೃದಯದಾಳದಿಂ ಬರುತಿಹುದು ಮಧುರಗಾಯನವು; ಪುರಾತನ ಪಥಗಳೆಲ್ಲ ಕಣ್ಮರೆಯಾದಲ್ಲಿ ಆಚ್ಚರಿಯ ಹೊಸನಾಡು ಪ್ರಕಟವಾಗುತಲಿಹುದು.

೩೮

ನಿನ್ನನೊಬ್ಬನನೆ ಬಯಸುವೆನೆಂದನಂತಸಲ ಪ್ರಾರ್ಥಿಸಲೆನ್ನ ಹೃದಯ. ಅಹೋ! ರಾತ್ರಿಯಲಿ ನಿನ್ನೊಳಗಣೆನ್ನಾಸಕ್ತಿಯನು ಕುಗ್ಗಿಸುವ ಆಸೆಗಳು ಸಟೆಯಾಗಿಹವು; ಶೂನ್ಯತೆಯು ತುಂಬಿಹುದದರೊಳು.

ಬೆಳಕಿನಾ ಬಯಕೆಯನಂಧಃಕಾರದೊಳು ನಿಶೆಯು ಅಡಗಿಸಿದ ತೆರದಿ ಈ ಯೆನ್ನ ಜಾಗ್ರತಾಂತಃಕರಣದೊಳು, “ನಿನ್ನನೊಬ್ಬನನೆ ಬಯಸುವೆನು ನಾನೆ”ಂಬ ರೋದನವು ಹೊಮ್ಮುತಿಹುದು.

ಜಂಝಾ ಮಾರುತನು ಶಾಂತತೆಯ ಮೇಲೆ ಸರ್ವಶಕ್ತಿಯೊಡಗೂಡಿ ಹಲ್ಲೆಯನು ನಡೆಸಿ, ಪ್ರಶಾಂತನಾಗುವ ತೆರದಿ, ತವಪ್ರೇಮದಾ ಮೇಲೆನ್ನ ಕ್ರಾಂತಿಯಿದು ಹಲ್ಲೆಯನು ನಡೆಸುತಿಹುದು; ಆದರೂ, “ನಿನ್ನನೊಬ್ಬನನೆ ಬಯಸುವೆನು ನಾನೆ”ಂಬುದಾಗಿಹುದದರ ರೋದನವು.

೩೯

ಎನ್ನ ಹೃದಯವಿದಿಲ್ಲಿ ಕಠೋರವಾಗಿರೆ, ಶುಷ್ಕವಾಗಿರೆ, ಕರುಣಾವರ್ಷ ರೂಪದೊಳು ಬೀಳೆನ್ನಮೇಲೆ.

ಎನ್ನ ಜೀವನವು ಸೌಂದರ್ಯ ಹೀನವಾಗಿರೆ, ಗೀತ ಸ್ಫೋಟನದಿಂದ ಬೀಳೆನ್ನ ಮೇಲೆ.

ಬಾಹ್ಯ ಸ್ಥಳದಿಂದೆನ್ನ ಬೇರ್ಪಡಿಸಿ ರೋಮಾಂಚಕಾರಕ ಕಾರ್ಯದಾ ಕಂಠವದು ತಾರಕವ ಸೇರಿರೆ, ಎಲೆಯೆನ್ನ ಮೌನಾಧಿಪನೆ, ತವವಿರಾಮ ಶಾಂತಿಗಳೊಡನೆ ಬೀಳೆನ್ನಮೇಲೆ.

ನಿನ್ನನೀಹೃದಯ ಸೇರುವಾ ಬಯಕೆಯಿಂದೀ ಮೂಲೆಯಲಿ ಸಿದ್ಧ ವಾಗಿರೆ, ಎಲೆಯೆನ್ನ ರಾಜನೆ, ದ್ವಾರವನು ಭೇದಿಸುತ ರಾಜವೈಭವದಿಂದಾ ಗಮಿಸು.

ಮಾಯೆಯಿಂ, ನಿಕೃಷ್ಟಧೂಳಿಯಿಂದೆನ್ನ ಮನವನು ಬಯಕೆ ಕುರು ಡಾಗಿಸುತಿರೆ, ನಿನ್ನ ಬೆಳಕಿನೊಡಗೂಡಿ, ಎಲೆ ಜಾಗ್ರತಪವಿತ್ರಾತ್ಮನೇ, ಬೀಳೆನ್ನಮೇಲೆ.

೪೦

ಶುಷ್ಕವಾದೆನ್ನ ಹೃದಯದೊಳು, ದೇವ, ದಿನಗಳನೇಕ ಸಂದಿಹವು ಮಳೆ ಬೀಳದೆನೆ. ಭೀಭತ್ಸನಗ್ನವಾಗಿಹುದೀ ದಿಗಂತ—ಅತಿತೆಳುವಿನಾ ಮೃದುಮೇಘದಾಚ್ಛಾದನವಿಲ್ಲ; ಮುಂಬರುವ ತಂಪಗಿನ ಮಳೆಯ ಅಸ್ಪಷ್ಟ ಸೂಚನೆಯಿಲ್ಲ.

ನಿನ್ನ ಮನದೊಳಿಂತಿಹುದಾದೊಡೆ, ಘೋರಮೃತ್ಯುರೂಪಿ ಕ್ರೋಧಾ ವಿಷ್ಟ ಜಂಝೂಮಾರುತನ ಕಳಿಸು, ಮಿಂಚಿನಾ ಕಸೆಯ ಹೊಡೆತದಿಂದಂತ ರಿಕ್ಷದೊಳು ಭೀಭತ್ಸ ವಿಸ್ಮಯವ ತುಂಬಿಸು.

ಸ್ತಬ್ಧವಾಗಿಹ, ಕುಶಲವಾಗಿಹ, ಕ್ರೂರವಾಗಿಹ ಭೀಕರ ವಿಸ್ಮಯ ದಿಂದ ಹೃದಿಯುವನು ದಹಿಸುವಾ ಪ್ರಸಾರಿತ ಮೌನೋಷ್ಣವನು ಹಿಂತೆ ಗೆಯು, ಎಲೆಯೆನ್ನ ಪ್ರಭುವೆ, ಹಿಂತೆಗೆಯು.

ಪಿತನು ಕ್ರೋಧಾವಿಷ್ಟನಾಗಿರಲು ಮಾತೆಯಾ ಅಶ್ರುಮಯ ದೃಷ್ಟಿ ಯಂದದಿ, ಸೌಂದರ್ಯಮೇಘವದು ಕೆಳಗೆ ನೋಡುತಲಿರಲಿ.

೪೧

ಪ್ರಿಯಕರನೇ, ನೆರಳಿನೊಳಡಗಿ, ಎಲ್ಲ ಮಾನವರ ಹಿಂದೆಲ್ಲಿ ನಿಂತಿರುವೆ ನೀನು! ನಿನ್ನನವರು ಕಡೆಗಣಿಸುತಲಿ, ದೂಡುತಲಿ, ಧೂಳಿಪಥದೊಳು ಪಯಣಿಸುತಿಹರು. ಶೋಕದಿಂದೀ ದೀರ್ಘಸಮಯದಲಿ ನಿನಗರ್ಪಿಸುವ ನೈವೇದ್ಯವನು ಬಿಡಿಸಿರಿಸಿ ಕಾಯುತಿಹೆನು ನಾನಿಲ್ಲಿ; ಇತರ ಪಯಣಿಗರು ಬರುತಿಹರು; ಬುಟ್ಟಿಯೊಳಗಿಂದೆನ್ನ ತೆಗೆಯುತಿಹರವರು ಪುಷ್ಪಗಳನೊಂದೊಂದಾಗಿ; ಬರಿದಾಗುತಲಿಹುದೀ ಬುಟ್ಟಿ.

ಮುಂಜಾನೆ ಕಳೆದಿಹುದು, ನಡುಹಗಲು ಜಾರಿಹುದು. ಬೈಗಿನಾ ನೆರಳಿನಲಿ ಕಣ್ಗಳಿವು ನಿದ್ದೆಯಿಂ ಕೂಡಿಹವು. ಮನೆಯ ಕಡೆಯಾದಾರಿಯನು ಹಿಡಿದವರು ಮುಗುಳುನಗೆಯಿಂದೆನ್ನ ದೃಷ್ಟಿಸುತ, ನಾಚಿಕೆಯ ತುಂಬಿಪರೆನ್ನೊಳು. ಸೆರಗಿನಿಂ ಮುಖವ ಮುಚ್ಚಿದ ಬಡವಬಾಲೆಯಂದದಿ ಕುಳಿತಿಹೆನು ನಾನಿಲ್ಲಿ; ಎನ್ನ ಮನದಿಂಗಿತವನವರು ವಿಚಾರಿಸಲು, ಅವರ ಮೇಲಿನ ದೃಷ್ಟಿಯನು ತಪ್ಪಿಸುತ, ಅವರಿಗುತ್ತರವ ಕೊಡದಿಹೆನು ನಾನು.

ನಿನ್ನ ಕಾಯುತಲಿ ಕುಳಿತಿಹೆನು ನಾನಿಲ್ಲಿ; ನಿನ್ನಾಗಮನದಾಶ್ವಾಸನೆಯು ಸಿಕ್ಕಿಹುದೆಂದು ಅವರನೆಂತು ಒಪ್ಪಿಸಲಿ? ಕನ್ಯಾಶುಲ್ಕವನಾಗಿ ದಾರಿದ್ರ್ಯವಿದನಿಲ್ಲಿ ಜತನವಾಗಿರಿಸಿಹೆನೆಂದದಾವ ಮುಖದಿಂದುಚ್ಚರಿಸಲವರೊಡನೆ? ಈ ಯೆನ್ನ ಹೆಮ್ಮೆಯನು ಗುಟ್ಟನಿಂದಾಲಿಂಗಿಸುವೆನೆನ್ನ ಹೃದಯದೊಳು.

ತೃಣಾಸನವನೇರಿ ಆಗಸವನೀಕ್ಷಿಸುತ ಕನಸ ಕಾಣುವಯೆನಗೆ, ಸ್ವಸ್ಥಾನದಿಂದಿಳಿದು ನೀನೆನ್ನನುದ್ಧರಿಸುವುದನೀಕ್ಷಿಸಿ, ಬೇಸಿಗೆಯ ಶುಷ್ಕ ಹವೆಯೊಳು ಥರಥರನೆ ನಡುಗುವಾ ಗಿಡದ ತೆರದಲಿ, ನಿನ್ನ ಸಹ ಪಂಕ್ತಿಯೊಳು ನಾಣ್ಚಿನಿಂ, ಗರ್ವದಿಂ ಕಂಪಿಸುವ ಬಡಬಾಲೆಯನ್ನೀಕ್ಷಿಸಿ ವಿಸ್ಮಿತರಾಗಿ ನಿಂತಹ ಪಥಿಕರಿಂದ, ಸ್ವರ್ಣಧ್ವಜದಿಂದ ಶೋಭಿಸುವ ನಿನ್ನ ರಥದಿಂದ ಜ್ವಲಿಪ ಸಮಸ್ತ ದೀಪಗಳಿಂದ ಕೂಡಿರುವ ನಿನ್ನಾಗಮನದಾ ಶೋಭೆಯಾ ಅನುಭವವು ಲಭಿಸುತಿಹುದು.

ಕಾಲಚಕ್ರವಿದು ಗಿರಗಿರನೆ ತಿರುಗುತಲಿಹುದು; ನಿನ್ನ ರಥಚಕ್ರದಾ ದನಿಯು ಕೇಳಿಸದಿಹುದು. ಸೌಂದರ್ಯದಾಡಂಬರದ ಗದ್ದಲದೊಡನೆ ಮೆರವಣಿಗೆಗಳನೇಕವುಗಳು ಹೋಗಿಹವು. ನೆರಳಿನೊಳಡಗಿ ಗೌಪ್ಯರೀತಿಯಲ್ಲೆಲ್ಲ ಮಾನವರ ಹಿಂದೆ ನಿಂತಿಹೆಯಾ? ವ್ಯರ್ಥದಾ ಬಯಕೆಯಿಂದಳುತ ನಿನ್ನ ಕಾಯುತಲಿ ಹೃದಯವನು ಸವೆಯುತಲಿ ನಾನೊರ್ವನಿಹೆನೆ?

೪೨

ನಿನ್ನೊಡನೆ ದೋಣಿಯಲಿ ನಾನೊರ್ವನೆ ಪಯಣಿಸಲಿಕ್ಕಿಹುದೆಂದು, ಅಂತ್ಯವಿರದಾ, ಅಸ್ಪಷ್ಟದೇಶವನು ಹೊಗುವ ನವಿಮ್ಮಾ ಪಯಣವನಾರೂ ಬಲ್ಲದಿಹರೆಂದದಾರೊ ಮುಂಜಾನೆಯುಲೆನ್ನ ಕಿವಿಯೊಳಗರುಹಿಹರು.

ಶಬ್ದಬಂಧನದಿಂದ ಸ್ವಾತಂತ್ರ್ಯವನು ಪಡೆದು, ತರಂಗದಂದದಿ, ಸ್ವಚ್ಛಂದದಿಂದಿದ್ದು, ದಡವಿರದಾ ಸಾಗರದಿ ತವಮೌನಪ್ರೇಕ್ಷಣೆಯ ಮುಂದೆ ಹಾಸದೆದುರೆನ್ನ ಹಾಡಿನ ಗಾನತರಂಗಗಳು ಆನಂಧದಿಂದುಬ್ಬುವುವು

ಅಂಥಕಾಲವಿನ್ನೂ ಬಂದಿರದೆ? ಎನ್ನ ಕರ್ಮಗಳೆಲ್ಲವು ಮುಗಿಯದಿಹವೆ? ದಡದಿ ಸಂಧ್ಯಾಕಾಲ ಬಂದುದನೀಕ್ಷಿಸು, ಮುಂದಪ್ರಕಾಶದೊಳು ಗೂಡಿನೆಡೆಗೆ ಹಾರುವಾ ಪಕ್ಷಿಸಮೂಹವನೀಕ್ಷಿಸು.

ಸಂಕಲೆಗಳೆಂದು ಕಳೆಯುವವು, ಸೂರ್ಯಾಸ್ತಮಾನದಂತ್ಯ ಜೋತಿಯಂದದೀ ದೋಣಿ ಕತ್ತಲಲೆಂದು ಕಣ್ಮರೆಯಾಗುವುದೆಂದದಾರು ಬಲ್ಲಿಹರು?

೪೩

ನಿನ್ನ ಸ್ವೀಕರಿಪ ಸಿದ್ಧತೆಯೊಳಿರಲಿಲ್ಲ ನಾನಂದು; ಎಲೆಯೆನ್ನ ಪ್ರಭುವೆ, ಎನಗೆ ತಿಳಿಯದೆನೆನ್ನೊಡನೆ ಕೇಳದೆನೆ, ಸಾಮಾನ್ಯ ಮಾನವನಂದದೆನ್ನ ಹೃದಯವನು ಪ್ರವೇಶಿಸಿ, ಎನ್ನ ಜೀವನದನೇಕ ಅಶಾಶ್ವತಗಳಿಗೆ ಗಳಲಸಂತದಾ ಮುದ್ರೆಯನು ನೀನೊತ್ತಿಹೆ.

ಅದೃಷ್ಟವಶಸಾಗಿ ನಾನಿಂದೆನ್ನ ಹೃದಯವನು ಬೆಳಗಿಸಿ, ನಿನ್ನ ಹಸ್ತಾಕ್ಷರವನೀಕ್ಷಿಸಲು, ಮರೆತುಹೋಗಿಹಯೆನ್ನ ಜೀವನದಾ ಸುಖದುಃಖದಾ ನೆನಪಿನೆೊಳು ಬೆರಸಿ ಧೂಳಿಯೊಳು ಸೇರಿದಾ ದೃಶ್ಯವನು ಕಂಡಿಹೆನು ನಾನು.

ಧೂಳಿಯೊಳಗಣೆನ್ನ ಬಾಲತನದಾಟವನೀಕ್ಷಿಸಿ, ತಿರಸ್ಕರಿಸಿ ವಿಮುಖನಾಗದಿಹೆ ನೀನು; ನಾನಂದು ಆಟದಾ ಸಮಯದಲಿ ಕೇಳಿಹ ಪದಧ್ವನಿಯು ತಾರೆಗಳೊಳು ಚಲಿಪ ಮರುದನಿಯಾಗಿಹುದೆಂದು ತಿಳಿದಿಹುದೆನಗೆ.

೪೪

ಬೆಳಕನ್ನು ಬೆಂಬತ್ತಿ ಚಲಿಪ ಛಾಯೆಯಾ ಪಥದೊಳು, ಬೇಸಗೆಯು ಬೆಂಬತ್ತಿ ಚಲಿಪ ವರ್ಷದಾಪಥದೊಳಿಂತು ಕಾಯುವ, ಈಕ್ಷಿಸುವ ಕಾರ್ಯದಲಿ ಸಂತಸವ ಪಡೆಯುವೆನು ನಾನು.

ಅನಿರ್ದಿಷ್ಟನಾಗಿಹ ಅಂತರಿಕ್ಷದ ರಾಯಸವ ತಂದಿಹ ಸಂದೇಶಕರು ಪ್ರಣಾಮವನರ್ಪಿಸುವರೆನಗೆ, ಆ ಮೇಲೆ ತಮ್ಮ ದಾರಿಯನು ಹಿಡಿಯುವರವರು. ಎನ್ನ ಹೃದಯದೊಳಗಿಂದ ಸಂತಸವಾಗಿಹುದೆನಗೆ, ಬೀಸುವಾ ಮಾರುತನ ಶ್ವಾಸವತಿ ಮಧುರವಾಗಿಹುದು.

ಪ್ರಾಥಃಕಾಲದಿಂ ಸಂಧ್ಯಾಕಾಲದ ವರೆಗೆನ್ನ ಮನೆಯ ಬಾಗಿಲೊಳು ಕುಳಿತಿಹೆನು ನಾನು, ನಿನ್ನ ದರುಶನದ ಸಂತಸದ ಗಳಿಗೆ ಫಕ್ಕನೆ ಬರಲಿಕ್ಕಿಹುದೆಂದು ತಿಳಿದಿಹುದೆನಗೆ.

ಆ ಗಳಿಗೆಯಾಗಮನದ ವರೆಗೆ ಮಂದಹಾಸದಿಂದಲಿ ನಾನೊರ್ವನೆ ಹಾಡುತಲಿರುವೆನು; ಆ ಗಳಿಗೆಯಾಗಮನದ ವರೆಗೆ ಆಶ್ವಾಸನೆಯ ಸೌರಭವು ವಾತಾವರಣದೊಳು ತುಂಬುತಲಿಹುದು.

೪೫

ಆತನಾ ಮೌನ ಹೆಜ್ಜೆಯನು ಕೇಳದಿಹೆಯಾ ನೀನು? ಬರುತಿಹನು, ಬರುತಿಹನು, ಅನವರತ ಬರುತಿಹನವನು.

ಪ್ರತಿಯೊಂದು ಗಳಿಗೆಯಲಿ, ಪ್ರತಿಯೊಂದು ಕಾಲದಲಿ, ಪ್ರತಿಯೊಂದು ದಿವಸದಲಿ, ಪ್ರತಿಯೊಂದು ಇರುಳಿನಲಿ ಬರುತಿಹನು, ಬರುತಿಹನು, ಅನವರತ ಬರುತಿಹನವನು.

ಅನೇಕ ಭಾವಾವೇಶದಲಿ ಅನೇಕ ಗೀತಗಳನು ಹಾಡಿಹೆನು ನಾನು; ಆದರೆ, ಅವುಗಳೊಳಗಣ ಶಬ್ದಗಳೆಲ್ಲ, "ಬರುತಿಹನು, ಬರುತಿಹನು, ಅನವರತ ಬರುತಿಹನವ"ನೆಂದು ಘೋಷಿಸಿಹವು.

ವಸಂತ ಋತುವಿನಾ ಪುಷ್ಪ ಸೌರಭದ ದಿವಸದಲಿ ಆರಣ್ಯ ಪಥದೊಳು ಬರುತಿಹನು, ಬರುತಿಹನು, ಅನವರತ ಬರುತಿಹನವನು.

ಅಖಂಡ ವರ್ಷಾಕಾಲದೊಳು ರಭಸದಿಂ ಮಳೆ ಬರುವ ರಾತ್ರಿಯಲಿ ಗುಡುಗುಡಿಪ ಮೇಘ ಶಕಟದಲಿ ಬರುತಿಹನು, ಬರುತಿಹನು, ಅನವರತ ಬರುತಿಹನವನು.

ಸಮಸ್ತ ಕಷ್ಟಕಾಲದಲೆನ್ನ, ಆತನಾ ಪದಮುದ್ರೆ ಬಿದ್ದಿಹುದೆನ್ನ ಹೃದಯದೊಳು; ಆತನಾ ಪದಕಮಲದಾ ಸ್ವರ್ಣ ಸ್ಪರ್ಶವದೆನ್ನ ಸಂತಸವ ಬೆಳಗಿಸಿಹುದು.

೪೬

ನೋಡಲೆನ್ನನನವರತ ಮತಿಸಮೀಪವನು ಸೇರಲೆಂದದೆಷ್ಟು ಪೂರ್ವ ದಲಿ ಹೊರಟಿರುವೆ ನೀನೆಂದು ತಿಳಿಯದಿಹೆನು ನಾನಿಲ್ಲಿ. ಎನ್ನೆದುರಿನಿಂದ ನವರತ ನಿನ್ನನಲ್ಲಿ ಮರೆಯಾಗಿಸಲಸಮರ್ಥವಾಗಿಹವು ಸೂರ್ಯತಾರೆಯರು.

ಅನೇಕ ದಿವಸಗಳ ಪ್ರಾಥಃಕಾಲದಲಿ, ಸಂಧ್ಯಾಕಾಲದಲಿ ತವಪದ ಧ್ವನಿಯನು ಕೇಳಿಹೆನು ನಾನು; ನಿನ್ನ ಸಂದೇಶಕನೆನ್ನ ಹೃದಯವನು ಹೊಕ್ಕು ಗುಟ್ಟಿನಾ ವಿಷಯವನು ಹೇಳಿಹನೆನಗೆ.

ಇಂದೆನ್ನ ಜೀವನದಲ್ಲೋಲಕಲ್ಲೋಲವಾಗುತಿಹುದೇಕೆಂದು ತಿಳಿಯ ದಿಹೆನು ನಾನಿಲ್ಲಿ; ಕಂಪಿಸುವ ಸಂತಸದ ತರಂಗಗಳೆನ್ನ ಹೃದಯದಲಿ ಮೂಡುತಿಹವಿಂದು.

ಎನ್ನ ದುಡಿತದಾ ಕಾರ್ಯವನು ಮುಗಿಸುವಾ ಕಾಲ ಬಂದಂತೆ ತೋರುತಿಹುದೀಗ; ತವಮಧುರ ಅಸ್ತಿತ್ವದಾ ಅಸ್ಪಷ್ಟ ಪರಿಮಳವನನು ಭವಿಸಿಹೆನು ನಾನೀ ವಾತಾವರಣದೊಳು.

೪೭

ವ್ಯರ್ಥದಿಂ ಕಾಯುತಲಿ ಇರುಳಿದು ಜಾರುತಲಿಹುದು. ಪ್ರಾಥಃಕಾಲದೊಳಾಯಾಸದಿಂದೊರಗಿದಾ ಸಮಯದಲೆನ್ನ ಮನೆಯ ಬಾಗಿಲಲಿ ಬರಬಹುದವನೆಂಬ ಭಯವಿಹುದೆನಗೆ. ಎಲೇ ಎನ್ನ ಮಿತ್ರರಿರಾ ಅವನ ದಾರಿಯನು ಮುಚ್ಚದಿರಿ; ಆತನನು ಕಡೆಗಣಿಸದಿರಿ.

ನಾನಾತನಾ ಪದಧ್ವನಿಯಿಂದ ಜಾಗೃತನಾಗದಿದ್ದೊಡೆ ಎಚ್ಚರಿಸಲೆತ್ನಿಸದಿರೆನ್ನನೆಂದು ಬೇಡುವೆನು ನಾನು. ಹಕ್ಕಿಗಳ ಸಡಗರದ ವಾದ್ಯವೃಂದದಿಂ ಪ್ರಭಾತ ಕಿರಣಗಳಾನಂದೋತ್ಸವದ ಕಾಲದಲಿ ಮಾರುತನು ಮಾಡುತಿಹ ಆಂದೋಲನದಿಂ, ನಿದ್ದೆಯಿಂ ಎಚ್ಚರವಗೊಳ್ಳಲಾಶಿಸೆನು ನಾನು. ಎನ್ನ ಬಾಗಿಲೊಳೆನ್ನ ಪ್ರಭುವು ದಯೆಮಾಡಿಸಿದರೂ ಎನ್ನ ನಿದ್ರಾಭಂಗವನು ಮಾಡದಿರಿ.

ಪ್ರಥಮ ಪ್ರಕಾಶದಿಂ, ಪ್ರಥಮ ಸ್ವರೂಪದಿಂ ಪ್ರತ್ಯಕ್ಷನಾಗಲವನೆನ್ನದುರೊಳು. ಆತನಾ ದರುಶನದಿಂದೆನ್ನ ಜಾಗ್ರತಾತ್ಮನಲಿ ಪ್ರಥಮ ಸಂತೋಷದಾವೇಶ ರೂಪಿಸಲಿ. ನಿಜಸ್ವರೂಪವನು ಕಂಡೊಡನೆ ಆತನೊಳಾನು ಕೂಡುವಂತಾಗಲಿ.

೪೮

ಪ್ರಭಾತದಾ ಮೌನ ಸಾಗರವು ಪಕ್ಷಿಗೀತ ತರಂಗಗಳಿಗೆ ಜನುಮವನು ಕೊಟ್ಟಿಹುದು; ಮಾರ್ಗದಾ ಇಬ್ಬದಿಯ ಕುಸುಮಗಳು ಸಂತಸವ ತಾಳಿಹವು; ಮೇಘ ಛಿದ್ರದಿಂ ಸುವರ್ಣ ದ್ರವ್ಯವದು ಹರಡಿಹುದು; ಆದರೆ ಅವಸರದೊಳಿದ್ದೆವು ನಾವಾಗ, ಗಮನವನು ಕೊಡಲಿಲ್ಲ ನಾವಲ್ಲಿ.

ಮಧುರ ಗೀತಗಳನು ಹಾಡದೆನೆ ಆಟವನು ಆಡದೆನೆ ಇದ್ದೆವು ನಾವಾಗ; ವಸ್ತು ವಿನಿಮಯಕೆ ಹಳ್ಳಿಯನು ಹೊಗಲಿಲ್ಲ, ಮೌನವನು ತಳೆದು ಮಂದಹಾಸ ಕಾಹ್ವಾಹನವನೀಯಲಿಲ್ಲ; ದಾರಿಯಲಿ ಹಿಂದೆ ಬೀಳದೆನೆ ಮುಂದೆ ನಡೆದೆವು ನಾವಾಗ. ಕಾಲದಾ ಸಾಗಾಟದೊಡನೆ ವೇಗವೇಗದಿ ನಡೆಯುತಿದ್ದೆವು ನಾವು.

ದಿನಕರನು ಸೇರಿದನು ಆಗಸದ ಮಧ್ಯವನು; ನೆರಳಿನಳೊಗಿಂದ ಪಾರಿವಾಳಗಳು ಹಾಡತೊಡಗಿದವು ಮಧ್ಯಾಹ್ನ ಕಾಲದಾ ಬಿಸಿಗಾಳಿಯಲಿ ಮುದಿ ಎಲೆಗಳ ನರ್ತನವು ತೊಡಗಿದುದು. ವಟವೃಕ್ಷದಾ ನೆರಳಿನಲಿ ಕುರುಬ ಬಾಲಕನೊರಗಿ ಸ್ವಪ್ನಸಾಮ್ರಾಜ್ಯದಲಿ ವಿಹರಿಸುವಾಗ ನದಿಯ ದಡದಲೊರಗಿ ಬಳಲಿದಾಯೆನ್ನಂಗಗಳನು ತೃಣಾಸನದಿ ಚಾಚಿದೆನು ನಾನು.

ಎನ್ನ ಒಡನಾಡಿಗಳೆಲ್ಲ ಎನ್ನ ನೋಡುತಲಿ ಹಾಸ್ಯವನು ಮಾಡಿಹರು; ತಲೆಯನ್ನು ಬಾಗಿಸದೆನೆ ಮುನ್ನಡೆದರವರು; ಹಿಂದೆನೋಡದೆನೆ, ವಿಶ್ರಾಂತಿ ಯನು ಪಡೆಯದೆನೆ ಮುನ್ನಡೆದರವರು; ಬಹುದೂರದಾ ಅಸ್ಪಷ್ಟ ನೀಲ ವಾತಾವರಣದಲದೃಶ್ಯವಾದರವರು. ಬಯಲಿನಾ ಬೆಟ್ಟದಾ ದಾರಿಯಲಿ ನಡೆ ಯುತಲಿ ಅತಿದೂರದಾ ಅಪರಿಚಿತವಾಗಿಹ ದೇಶಗಳನು ಕಳೆದಿಹರವರು. ಅನಂತವಾದಾದಾರಿಹಲಿಯ ಅತಿಥಿಗಳ ಸತ್ಕಾರದಾ ಕೀರ್ತಿ ನಿನಗೆ ಸಲ್ಲು ವುದು. ಅಪಮರ್ಯಾದೆ ಅಪಮಾನಗಳೆನ್ನನೆಬ್ಬಿಸಲೆತ್ನಿಸಿ ವಿಫಲವಾಗಿ ಹವು. ಅಸ್ಪಷ್ಟಸಂತೋಷದಾ ಛಾಯೆಯಲಿ ಹರ್ಷದಾಯಕ ದೈನ್ಯತೆಯ ಅಂತರಂಗದಲಿ ಕಣ್ಮರೆಯಾಗಲೆಂದು ಶರಣು ಬಂದಿಹೆನು ನಾನು.

ರವಿಕಿರಣಾಂಕಿತ ಅಸ್ಪಷ್ಟ ಅಂಧಃಕಾರದಾ ವಿಶ್ರಾಂತಿ ಪಸರಿಸಿಹುದೆನ್ನ ಹೃದಯದ ಮೇಲೆ. ಎನ್ನ ಪಯಣದಾ ಉದ್ದೇಶವನು ಮರೆತಿಹೆನು ನಾನು; ಅನಿರ್ದಿಷ್ಟವಾಗಿಹ ನೆರಳಿನಾ ಹಾಡಿನಾ ಪಥಗಳಿಗೆ ಪ್ರತಿಭಟಿಸದೆನೆ ಶರಣು ಬಂದಿಹೆನು ನಾನು.

ಕೊನೆಯಲ್ಲಿ ನಿದ್ದೆಯಿಂದೆಚ್ಚೆತ್ತು ಕಣ್ಗಳನು ತೆರೆದಾಗ ನೀನೆನ್ನ ಬಳಿ ಯಲ್ಲಿ ನಿಂತಿರುವುದನು ಕಂಡಿಹೆನು ನಾನು. ಮಾರ್ಗವದು ದೀರ್ಘವಾಗಿಹು ದಿಂದು ಪಯಣವದು ಬಳಲಿಕೆಯ ಮೂಲವಾಗಿಹುದೆಂದು, ನಿನ್ನ ಮುಟ್ಟುವ ಯತ್ನಗಳು ಕಠಿಣವಾಗಿಹವೆಂದು ವ್ಯರ್ಥದಲಿ ಭಯಪಡುತಲಿದ್ದೆನು ನಾನು!

೪೯

ನಿನ್ನ ಸಿಂಹಾಸನದಿಂದ ಕೆಳಗಿಳಿದೆನ್ನ ಗುಡಿಸಿಲಿನ ಬಾಗಿಲೊಳು ಬಂದಿದ್ದೆ ನೀನು.

ಮೂಲೆಯೊಂದರಲಿ ನಾನೊರ್ವನೆ ಹಾಡುತಲಿದ್ದೆ; ಗಾಯನವದು ನಿನ್ನ ಕಿವಿಗಳನು ಸೇರಿದುದು. ನೀನಾಗ ಕೆಳಗಿಳಿದೆನ್ನ ಗುಡಿಸಿಲಿನ ಬಾಗಿಲೊಳು ಬಂದಿದ್ದೆ.

ನಿನ್ನ ಭವನದಲಿ ಪಂಡಿತರನೇಕರಿಹರು: ನಿರಂತರವಾಗಿ ಹಾಡುತಲಿಹರವರು. ಆದರೆ ಪ್ರಾರಂಭಿಕ ವಿದ್ಯಾರ್ಥಿಯಾಗಿಹ ಎನ್ನ ಸರಳವಾಗಿಹ ಆನಂದಗೀತವಿದು ಮುಟ್ಟಿಹುದು ನಿನ್ನ ಪ್ರೇಮದಾಸೆರೆಯನು. ಜಾಗತಿಕ ಉತ್ಕೃಷ್ಟಗಾಯನದಿ ಅತಿಯತ್ನದಿಂ ರಚಿಸಿದ ದುಃಖಗೀತವದು ಬೆರೆತಿಹುದು, ಬಹುಮಾನದಾ ಕುಸುಮವನು ಹಿಡಿದು ಕೆಳಗಿಳಿದೆನ್ನ ಗುಡಿಸಲಿನ ಬಾಗಿಲೊಳು ಬಂದಿದ್ದೆ ನೀನು.

೫೦

ಭದ್ರವಾಗಿಹ ಸ್ವಪ್ನದಂದದಿ ತವಸ್ವರ್ಣಶಕಟ ದೂರದಲಿ ಗೋಚರಿಸುತಿರೆ ಗ್ರಾಮದ ಮಾರ್ಗದಲಿ ಬಿಕ್ಕೆಯನು ಬೇಡುತಲಿ ಪ್ರತಿಯೊಂದು ಮನೆಯ ಬಾಗಿಲನು ಬಡೆಯುತಿದ್ದೆನು ನಾನು ರಥಿಕನಾಗಿಹ ರಾಜರಾಜನದಾರೆಂದು ಅಚ್ಚರಿಯ ಪಟ್ಟಿದ್ದೆ ನಾನಾಗ.

ಎನ್ನಾಸೆಗಳು ರೆಕ್ಕೆಯನು ಕಟ್ಟಿ ಮೇಲುಮೇಲಕೆ ಹಾರತೊಡಗಿದವು, ಕಷ್ಟದಾ ದಿನಗಳೆನ್ನವು ಅಂತ್ಯವಾಗಿಹವೆಂದು ಭಾವಿಸಿದ್ದೆನು ನಾನು; ಬೇಡದೆನೆ ಪಡೆಯುವಾ ಬಿಕ್ಕೆಯನು ಬಯಸುತಲಿ ಸರ್ವದಿಶೆಯಿಂದ ಧೂಳಿಯಲಿ ಪಸರಿಸಿದ ದ್ರವ್ಯವನು ಬಯಸುತ ಕಾಯುತ್ತ ನಿಂತಿದ್ದೆ ನಾನು.

ಎನ್ನ ಸನಿಯದಲಿ ನಿಂತಿತಾರಥವು. ನಿನ್ನ ದೃಷ್ಟಿಯು ಬಿದ್ದಿತೆನ್ನ ಮೇಲಾಗ, ಮಂದಹಾಸದಿ ಕೆಳಗಿಳಿದು ಬಂದಿದ್ದೆ ನೀನಾಗ. ಎನ್ನ ಜೀವನದ ಭಾಗ್ಯಕೊನೆಯಲ್ಲಿ ಬಂದಿಹುದೆಂದು ಭಾವಿಸಿದೆನು ನಾನು. ತತ್‌ಕ್ಷಣದಿ ನೀನು ಬಲಗೈಯ ಚಾಚಿ, "ಎನಗೆ ಕೊಡಲಿಕ್ಕೇನಿಹುದು ನಿನ್ನೊಡನೆ" ಎಂದಿದ್ದೆ.

ಆಹ್, ಭಿಕ್ಷುಕನೊಡನೆ ಬೇಡುವಾ ಸಲುವಾಗಿ ಕೈಯ ತೆರೆಯುವಾ ಅದಾವ ಉತ್ಕೃಷ್ಟ ಪರಿಹಾಸವಿದು! ವಿಸ್ಮಯವನು ತಾಳುತಲಿ ಅನಿಶ್ಚಿತ ಪ್ರವೃತ್ತಿಯಲಿ ನಿಂತು ಬಿಟ್ಟೆನು ನಾನು; ಆಮೇಲೆನ್ನ ಜೋಳಿಗೆಯಿಂದ

ಅಥಿ ನಿಧಾನದಲಿ ಸೂಕ್ಷ್ಮತಮ ಧಾನ್ಯದಾ ಕಾಳನೊಂದನು ಹೊರಗೆ ತೆಗೆದೆನು.

ಆದರೆ ಸಂಜೆಯಲಿ ಜೋಳಿಗೆಯ ಕಾಳನೆಲ್ಲವನು ನೆಲದ ಮೇಲಿರಿಸೆ, ಬಲು ಚಿಕ್ಕ ಚಿನ್ನದಾ ಕಾಳನದರಲಿ ಕಂಡು ಅಚ್ಚರಿಯ ಗೊಂಡಿದ್ದೆ ನಾನು. ಅತ್ಯಂತ ಶೋಕದಿಂ ರೋಧಿಸುತಲೆನ್ನ ಸರ್ವಸ್ವವನು ನಿನಗರ್ಪಿಸುವ ಹೃದಯವೆನಗಿರಬೇಕಿತ್ತೆಂದು ಆಸಿಸಿದ್ದೆನಾಗ.

೫೧

ಇರುಳು ಕರಿದಾಗಿಹುದು. ನಮ್ಮ ದಿವಸದಾ ಕಾರ್ಯಗಳು ಅಂತ್ಯವಾಗಿಹವು. ಆ ಇರುಳ ಕೊನೆಯ ಅತಿಥಿಯು ಬಂದಿಹನೆಂದು ಭಾವಿಸುತ ಗ್ರಾಮದೊಳಗಣ ಬಾಗಿಲೆಲ್ಲವನು ಮುಚ್ಚಿದೆವು ನಾವು. ಕೆಲವರೆಂದರು ರಾಜ ಬರಲಿಕ್ಕಿಹನೆಂದು. ಅದನೊಪ್ಪದೆನೆ ಅದು ಅಸಾಧ್ಯವೆನುತಲಿ ನಕ್ಕು ಬಿಟ್ಟೆವು ನಾವು.

ಬಾಗಿಲನು ಬಡಿದಂತೆ ಸದ್ದು ಬಂದುದನು ಕೇಳಿದೆವು ನಾವು. ಗಾಳಿಯಿಂದದಾಗಿರಬೇಕೆಂದು ಹೇಳಿದೆವು ನಾವು. ದೀಪಗಳನಾರಿಸುತ ನಿದ್ರಿಸಲು ಒರಗಿದೆವು ನಾವಾಗ, ಕೆಲವರೆಂದರು ಸಂದೇಶಕನವನೆಂದು. ಅದನೊಪ್ಪದೆನೆ ಗಾಳಿಯಿಂದಲೆ ಸದ್ದು ಬಂದಿಹುದೆಂದು ನಕ್ಕುಬಿಟ್ಟೆವು ನಾವು.

ಮಧ್ಯರಾತ್ರಿಯಲಿ ಸದ್ದೊಂದು ಕೇಳಿಸಿತು. ಅರೆನಿದ್ದೆಯಿಂದಲಿ ಬಹುದೂರದಾ ಗುಡುಗಿನಾ ಸದ್ದದೆಂದು ಭಾವಿಸದೆವು ನಾವು. ನೆಲವಲುಗಿ ಗೋಡೆಗಳದರಿ ಭಂಗವಾಯಿತು ನಮ್ಮ ನಿದ್ದೆಗೆ. ಚಕ್ರದಾ ದನಿಯದೆಂದು ಕೆಲವರರುಹಿದರು. ಅದನೊಪ್ಪದೆನೆ ಬಹುದೂರದಾ ಮೇಘಕಲಹದ ದನಿಯದೆಂದು ಪಿಸುಗುಟ್ಟುತಲಿ ನಕ್ಕುಬಿಟ್ಟೆವು ನಾವು.

ಭೇರಿಯಾ ನಾದ ಬರುವಾಗ ಇರುಳಿತ್ತು ಕತ್ತಲಲಿ. “ಎಚ್ಚರಾಗಿರಿ ತಡವ ಮಾಡದಿರೆ”ಂಬ ಸದ್ದು ಬಂದಿತು. ಎದೆಯ ಮುಟ್ಟುತಲಿದ್ದೆವು. ಭಯದ ಜ್ವರ ಬಂದಿತೆಮಗೆ. “ನೋಡಿರಲ್ಲಿ ರಾಜನಾ ಧ್ವಜವನೆ”ಂದು ಕೆಲವರೆಂದರು. ಎದ್ದು ನಿಂತೆವು ನಾವು, ತಡಮಾಡಲಿಕ್ಕಿನ್ನಿಲ್ಲವೆಂದೆವು ನಾವು.

ರಾಜ ಬಂದಿಹನು. ಆದರೆ ದೀಪಗಳೆಲ್ಲಿಹವು? ಹೂಮಾಲೆಗಳೆಲ್ಲಿಹವು? ಎಲ್ಲಿಹುದಾತನಾ ಸಿಂಹಾಸನವು? ಆಹ್! ಅದೆಂಥಃ ನಾಚಿಕೆಯಿದು! ಶೃಂಗರಿಸಿದಾ ಭವನವೆಲ್ಲಿಹುದು? "ಕೂಗುವುದಿದು ವ್ಯರ್ಥ! ಬರಿಗೈಯು ಪ್ರಣಾಮುವನರ್ಪಿಸಿರವನಿಗೆ; ಸರಳವಾಗಿಹ ನಿಮ್ಮ ಭವನದಲಿ ಕರೆಯಿರವನನೆ"ಂದದಾರೊ ಹೇಳಿಗರು.

ಬಾಗಿಲನು ತೆರೆದು ಶಂಖದಾದನಿ ಪಸರಿಸಲಿ. ಅಂಧಃಕಾರದಾ ಎಮ್ಮ ಶೋಕಿತ ಗೃಹದ ರಾಜನು ಕತ್ತಲೆಯ ಇರುಳಿನಲಿ ಬಂದಿಹನು. ಆಗಸದಿ ತುಂಬಿಹುದು ಮೇಘಗರ್ಜನೆಯು. ಮಿಂಚಿನಾ ಭಯದಿಂದ ಥರಥರನೆ ನಡುಗುವುದಂಧಃಕಾರವಲ್ಲಿ. ಕಾಲನೊರಸುವ ಹರಕು ಚಿಂದಿಯನು ತರಬಾರದೆ, ಬಿಡಿಸಬಾರದೆ ಅಂಗಳದಲದನು? ಭೀಭತ್ಸವಾಗಿಹ ಇರುಳಿನಾರಾಜ ಬಂದಿಹನು ಜಂಝೂಮಾರುತನೊಡನೆ.

೫೨

ನಿನ್ನ ಕೊರಳಿನಲಿ ಶೋಭಿಸುವ ಗುಲಾಬಿಯ ಮಾಲೆಯನು ಕೇಳಲೆಂದಪೇಕ್ಷಿಸಿದ್ದೆನು ನಾನು; ಆದರದನು ಕೇಳುವ ಧೈರ್ಯವಿರಲಿಲ್ಲವೆನಗೆ. ನಿನ್ನ ನಿರ್ಗಮನದಾ ಮೇಲೆ, ನಿನ್ನ ಹಾಸಿಗೆಯಲಿ ಬಿದ್ದಿಹ ಕುಸುಮದಾ ಎಸಳುಗಳ ಪಡೆಯೆ ಪ್ರಭಾತವನು ಕಾಯುತಲಿದ್ದೆನು ನಾನು. ಪ್ರಭಾತದಲಿ ಭಿಕ್ಷುಕನಂದದಲಿ ಎಸಳುಗಳ ಶೋಧಿಸಲು ತೊಡಗಿದೆನು ನಾನು.

ಹಾ ಎನ್ನ ವಿಧಿಯೆ! ಸಿಕ್ಕಿಹುದದೇನೆನಗೆ? ನಿನ್ನ ಪ್ರೇಮದಾ ಅದಾವ ಚಿಹ್ನೆಯನು ಬಿಟ್ಟಿರುವೆ ನೀನು? ಕುಸುಮವಲ್ಲವದು, ರುಚಿಕರ ಪದಾರ್ಥವಲ್ಲವದು, ಸುಗಂಧದ್ರವ್ಯದಾ ದಾನಿಯಲ್ಲವದು. ಮೇಘಪಾಷಾಣದಾ ಭಾರದಾ, ಜ್ಯೋತಿರ್ಪ್ರಭೆಯಿಂದ ಶೋಭಾಯಮಾನವಾಗಿಹ ನಿನ್ನ ಬಲಾಢ್ಯ ಖಡ್ಗವಾಗಿಹುದದು. ಪ್ರಭಾತದ ಬಾಲ್ಯಕಿರಣಗಳು ಕಿಟಕಿಯನು ದಾಟಿ ನಿನ್ನ ಹಾಸಿಗೆಯಲಿ ಪಸರಿಸಿಹವು. ಇನಿವಕ್ಕಿ ಚಿಲಿಪಿಲಿಗುಟ್ಟುತ ಕೇಳುತಿಹುದು. "ದೇವಿ ನಿನ್ನೊಡನದೇನಿಹುದೆ"ಂದು. ಕುಸುಮವಲ್ಲವದು, ರುಚಿಕರ ಪದಾರ್ಥವಲ್ಲವದು, ಸುಗಂಧದ್ರವ್ಯದಾ ದಾನಿಯಲ್ಲವದು - ನಿನ್ನ ಭೀಭತ್ಸ ಖಡ್ಗವಾಗಿಹುದದು.

ಅದೆಂಥ ಪಾರಿತೋಷಕವಾಗಿಹುದೆಂದು ಆಶ್ಚರ್ಯದಿಂದಾಲೋಚಿಸು ತಿಹೆನು ನಾನು. ಇದನು ಮರೆಸಿಡುವ ಜಾಗವನು ನಾ ಕಾಣೆ. ನಿರ್ಬಲ ನಾಗಿಹೆನು ನಾನು, ಖಡ್ಗವನು ಧರಿಸುವಾ ಯೋಗ್ಯತೆಯು ಎನಗಿಲ್ಲ. ಅದನು ಎದೆಗೆನ್ನ ಅಪ್ಪಿಕೊಳ್ಳಲು ನೋವನನುಭವಿಸುವೆನು ನಾನು. ಆದರೂ, ನಿನ್ನ ಪಾರಿತೋಷಕವಿದನು, ನೀನಿತ್ತ ವೇದನಾಮಯದ ಹೊರೆಯ ಮಾನವನು ಹೊರುವೆನೆನ್ನ ಹೃದಯದಲಿ.

ಇಂದಿನಿಂದೆನಗೆ ಭಯವೆಂಬುದಿಲ್ಲ; ಎನ್ನ ಕಲಹದಲಿ ಜಯವು ದೊರ ಕುವುದು ನಿನಗೆ. ಎನ್ನ ಸಾಥಿಯಾಗಿ ಮೃತ್ಯುವನು ನೇಮಿಸಿಹೆ ನೀನು; ಎನ್ನ ಜೀವನದ ಕಿರೀಟವನಾತನ ಶಿರದ ಮೇಲಿಡುವೆ ನಾನು. ಎನ್ನ ಬಂಧಿಪ ಸಂಕಲೆಯನೊಡೆಯುವಾ ನಿನ್ನ ಖಡ್ಗವಿಹುದೆನ್ನೊಡನೆ; ಜಗದೊಳೆ ನಗಿಲ್ಲ ಭಯವಿನ್ನು.

ಇಂದಿನಿಂದೆಲ್ಲ ತುಚ್ಛ ಶೃಂಗಾರಗಳನು ತ್ಯಜಿಸುವೆನು ನಾನು. ಎಲೆ ಯೆನ್ನ ಹೃದಯದೊಡೆಯನೆ, ಸಾಕಾಗಿಹುದೆನಗೀ ಮೂಲೆಯಲಿ ರೋದಿಸುತ ಕಾಯುವಾ ಕೆಲಸ; ಭಯದಿಂದಿಹ, ಮಾಧುರ್ಯದಿಂದಿಹ ಯೆನ್ನ ವರ್ತ ನೆಯು ಸಾಕಾಗಿಹುದೆನಗೆ. ನಿನ್ನ ಖಡ್ಗವನಾಭರಣವಾಗಿ ಕರುಣಿಸಿಹೆ ನೀನು; ಗೊಂಬೆಯಾ ಶೃಂಗಾರವಿನ್ನು ಬೇಕಿಲ್ಲೆನಗೆ.

೫೩

ತಾರೆಗಳಿಂದಲಂಕೃತವಾಗಿಹ, ಸಹಸ್ರರಂಗಿತ ರತ್ನಗಳಿಂದತಿ ಚತುರತೆ ಯಿಂದ ಮಾಡಿದ ನಿನ್ನ ಕಂಕಣವತಿ ಸುಂದರವಿಹುದು. ಸೂರ್ಯಾಸ್ತ ಮಾನದಾ ಕ್ರೋಧಾನ್ವಿತ ರಕ್ತಕಿರಣದೊಳು ಯೋಗ್ಯರೀತಿಯಲಿ ಹೆಣೆದ, ಗರುಡನಾ ಬಿಡಿಸಿದಾ ರೆಕ್ಕೆಗಳಂದದಿ ಥಳಥಳಿಪ ನಿನ್ನ ಖಡ್ಗವಿದೆನಗೆ ನಿನ್ನ ಕಂಕಣಕಿಂತ ಸುಂದರತರವಾಗಿ ತೋರುತಿಹುದು.

ಅಂತಕನ ಅಂತ್ಯದಾಘಾತದಲಿ ವೇದನಾವೇಗದಿಂದಲಿ ಪ್ರತಿಕ್ರಿಯೆಯ ಪ್ರಕಟಿಸುವ ಪ್ರಾಣನಂದದಿ ಕದಲುವುದಾ ಖಡ್ಗ; ಲೌಕಿಕವಯವಗಳನು ಕೂರಪ್ರಭೆಯಿಂದ ಉರಿಯಿಸುವ ಪರಿಶುದ್ಧ ಜ್ಯೋತಿಯಂದದಿ ಶೋಭಿಸು ವುದದು.

ನವರತ್ನಗಳಿಂದಲಂಕೃತವಾಗಿಹ ನಿನ್ನ ಕಂಕಣವು ಸುಂದರವಿಹುದು; ಆದರೆ, ಹೆ ಮೇಘರಾಜ್, ದೃಷ್ಟಿಸಲು, ಭಾವಿಸಲು, ಭೀಕರವಾಗಿಹ ನಿನ್ನ ಖಡ್ಗವತ್ಯಂತ ಸೌಂದರ್ಯದಿಂದ ತಯಾರಿಸಿಹೆ ನೀನು.

೫೪

ನಿನ್ನೊಡನೆ ಬೇಡದೆನೆ, ಎನ್ನ ಹೆಸರನು ಹೇಳದೆನೆ ನಾನಿಲ್ಲಿದ್ದೆ. ನಿನ್ನ ನಿರ್ಗಮನದೊಳು ಸ್ತಬ್ಧನಾದೆನು ನಾನು. ಮರಗಳಾ ನೆರಳು ಮಾಲಿ ಕೊಂಡಿಹ ಬಾವಿಯ ಸನಿಯದಲಿ ನಾನೊರ್ವನೆ ನಿಂತಿದ್ದೆ; ಕಂದು ಮಣ್ಣಿನ ಮಡಕೆಗಳಲಿ ನೀರತುಂಬಿಸಿ ಹೆಂಗುಸರು ಮನೆಯದಾರಿಯನು ಹಿಡಿದಿಹರು. "ಬಾರೆಮ್ಮೊಡನೆ; ಮುಂಜಾನೆ ಸರಿದು ಮಧ್ಯಾಹ್ನವಾಗಮಿಸುತಿಹುದೆ"ಂದು ಕೂಗಿದರವರು. ಆದರದರೊಳು ಮನವ ಹರಿಯಿಸದೆನೆ, ಅಸ್ಪಷ್ಟ ಯೋಚನೆ ಯಲಿ ಮಗ್ನನಾಗುತ ಹಿಂದೆಬಿದ್ದೆನು ನಾನು.

ನಿನ್ನಾಗಮನದ ಕಾಲದಲಿ ನಿನ್ನ ಕಾಲದನಿ ಕೇಳಿಸಿಲ್ಲೆನಗೆ. ಎನ್ನ ಕಾಣುವ ಕಾಲದಲಿ ಶೋಕಮಯವಾಗಿತ್ತು ನಿನ್ನ ದೃಷ್ಟಿ; "ಬಾಯಾರಿಕೆಯ ಬೇಗೆಯಲಿ ಬಾಧೆಪಡುವ ಪಯಣಿಗನು ನಾನೆ"ಂದು ಮಂದಸ್ವರದಲಿ ನೀನೆಂದಾಗ ನಿನ್ನ ಕಂಠವದು ಬಳಲಿಕೆಯ ಪ್ರತೀಕವಾದುದನು ಕಂಡು ಕೊಂಡೆನು ನಾನು. ದಿವಾಸ್ವಪ್ನದಿಂದಲೆಚ್ಚೆತ್ತು, ಮಡಕೆಯಿಂದೆನ್ನ ತವ ಹಸ್ತಾಂಜಲಿಯೊಳು ನೀರ ಸುರಿದೆನು ನಾನು. ಮೇಲಿನಿಂದಲಿ ಸುಶ್ರಾವ್ಯ ಪತ್ರಗಳರವ ಕೇಳಿಸಿತು; ಮಾರ್ಗವದು ತಿರುಗುವೆಡೆಯಿಂದ ಪುಷ್ಪಸೌರ ಭವು ಪಸರಿಸಿತು.

ನೀನೆನ್ನ ಹೆಸರ ಕೇಳಿದಾಗ ಲಜ್ಜೆ ತುಂಬಿತೆನ್ನೊಳಗೆ; ಮೂಕನಾದೆನು ನಾನು. ನಿನಗೆನ್ನ ನೆನಪಾಗುವಂದದಿ ಆದಾವ ಕಾರ್ಯವನು ಮಾಡಿಹೆನು ನಾನು? ನಿನ್ನ ಬಾಯಾರಿಕೆಯ ಕಳೆಯೆ ನೀರನೆರೆದ ನೆನಪೆನ್ನ ಹೃದಯ ದಲಿ ತುಂಬಿಹುದು. ಮಾಧುರ್ಯಮಯಾಲಿಂಗನವ ಮಾಡುತಿಹುದಲ್ಲಿ. ಪ್ರಾಥಃಕಾಲವಿದು ಕಳೆಯುತಲಿ ಬಂದಿಹುದು, ಹಕ್ಕಿಗಳು ದುಃಖನಾದದಿ ರೋದಿಸುತಿಹವು, ಅಶ್ವತ್ಥವೃಕ್ಷದಾ ಪತ್ರಗಳು ಸುಶ್ರಾವ್ಯಗಾಯನವ ಮಾಡು ತಿಹವು; ನಾನಿಲ್ಲಿ ಕುಳಿತಿದ್ದು ಯೋಚಿಸುತಲಿಹೆನು.

೫೫

ನಿನ್ನ ಹೃದಯವದು ನಿರ್ಬಲವಾಗಿಹುದು; ಕಣ್ಣುಗಳು ಕೂರುತಿಹವು.

ಮುಳ್ಳುಗಳ ನಡುವಣಾ ಕುಸುಮ ವೈಭವದಿ ಮೆರೆಯುತಿಹುದೆಂಬ ಕರೆ ಕೇಳಿಸಿಲ್ಲವೆ ನಿನಗೆ? ನಿದ್ದೆಯಿಂದಚ್ಚರಗೊಳು. ವ್ಯರ್ಥದಿಂದಲಿ ಕಾಲಹರಣವ ಗೈಯದಿರು.

ಕಲ್ಲದಾರಿಯು ಮುಗಿಯುವೆಡೆಯೊಳು, ಪರಿಶುದ್ಧ ಯೇಕಾಂತ ಭಾವದಾ ಪ್ರದೇಶದೊಳು ನಿನ್ನ ಮಿತ್ರನೊಬ್ಬನೆ ಕುಳಿತಿಹನು. ಮೋಸ ಗೊಳಿಸದಿರಾತನನು, ನಿದ್ದೆಯಿಂದೆಚ್ಚರಗೊಳು.

ಮಧ್ಯಾಹ್ನ ಕಾಲದಾ ಬಿಸಿ ಬಿಸಿಲತಾಪದಲಿ ಆಗಸವು ಬಳಲಿದರೇನು? ನಡುಕದೊಳಿರಲೇನು, ತಾಪಯುತಮರಳರಾಶಿಯು ಮೇಲೆ ತೃಷ್ಣಾಂಬರವ ಹೊದಿಸಿದರೇನು,—

ನಿನ್ನ ಹೃದಯಾಂತರಾಳದಲಿ ಸಂತಸವಿರದೆ? ಮಾರ್ಗದಾ ವೀಣೆ ನಿನ್ನ ಹೆಜ್ಜೆಹೆಜ್ಜೆಗೆ ವೇದನಾಮಯ ಗಾಯನವ ಹೊರಡಿಸದೆ?

೫೬

ಇಂತೆನ್ನೊಳಗಣ ನಿನ್ನ ಸಂತೋಷವದು ಪೂರ್ಣವಾಗಿಹುದು ಇಂತೆನಗೆ ಭೇಟಿಯನು ಕೊಡಲು ಕೆಳಗಿಳಿದು ಬಂದಿಹೆ ನೀನು. ನಾನಿಲ್ಲ ದಿದ್ದೊಡೆ, ಲೋಕಾಧಿಪತಿ, ನಿನ್ನ ಪ್ರೇಮಕದಾವ ಸ್ಥಾನ ದೊರಕಲಿ ದ್ದುದೊ.

ಐಶ್ವರ್ಯವಿದರೊಳೆನ್ನನು ನಿನ್ನ ಭಾಗಿಯನಾಗಿ ಮಾಡಿರುವೆ ನೀನು. ಅನಂತವಾಗಿಹ ನಿನ್ನ ಸಂತಸವೆನ್ನ ಹೃದಯದಲಿ ಆಡುತಲಿಹುದು. ಎನ್ನ ಬಾಳ್ವೆಯಲಿ ನಿನ್ನಂತಃ ಶಕ್ತಿಯು ಪಕ್ವವಾಗುತಲಿಹುದು

ಇದಕೆಂದು ರಾಜರಾ ರಾಜನಿಹನೀನೆನ್ನ ಹೃದಯವನು ಬಂಧಿಸಲು ಸೌಂದರ್ಯದಿಂದಲಂಕೃತನಾಗಿಹೆ. ಇದಕೆಂದು ನಿನ್ನ ಪ್ರೇಮವದು ನಿನ್ನ ಪ್ರೇಮಿಯೂ ಪ್ರೇಮದಲಿ ಬೆರೆಯುತಿಹುದು. ಆ ಯೆರಡು ಪ್ರೇಮಗಳ ಸಂಪೂರ್ಣ ಸಂಗಮದಿ ನಿನ್ನ ದರುಶನವಾಗುತಲಿಹುದು.

೫೭

ಬೆಳಕು, ಎನ್ನ ಬೆಳಕು, ಜಗನ್ಮ್ರಯವಾದ ಬೆಳಕು, ನಯನಚುಂಬಕವಾದ ಬೆಳಕು, ಹೃದಯವನು ಸವಿಯೂಟದಿಂ ತಣಿಸುವಾ ಬೆಳಕು!

ಪ್ರಿಯಕರನೆ, ಜೀವನದ ಕೇಂದ್ರದಲಿ ಬೆಳಕದು ಕುಣಿಯುತಿಹುದು. ಬೆಳಕದು, ಪ್ರಿಯಕರನೇ, ಎನ್ನ ಪ್ರೇಮತಂತಿಗಳನು ಮೀಂಟುತಿಹುದು. ಆಗಸವು ವಿಕಸಿತಗೊಳುತಿಹುದು, ಮಾರುತನು ಕ್ರೋಧದಿಂದಲಿ ಬೀಸುತಲಿಹನು, ಹಾಸ್ಯಪ್ರವಾಹ ತುಂಬಿಹುದು ಜಗದೊಳು.

ಪ್ರಕಾಶ ಸಾಗರದೊಳು ಪತಂಗಗಳು ರೆಕ್ಕೆಯನು ಬಿಡಿಸುತಿಹವು ಕುಮುದ ಕುಸುಮಗಳು ಪ್ರಶಾಂತ ತರಂಗದೊಳು ನರ್ತಿಸುತಿಹವು.

ಪ್ರಕಾಶವದು ಪ್ರತಿಯೊಂದು ಮೋಡದಲಿ ಸ್ವರ್ಣವರ್ಣವನು ಚೆಲ್ಲಿಹುದು, ಪ್ರಿಯಕರನೆ, ಆಗಣಿತ ರತ್ನಗಳನು ಚೆಲ್ಲಿಹುದು.

ಪ್ರಿಯಕರನೆ, ಎಲೆಯಿಂದ ಎಲೆಗೆ ಮಧುರ ಹಾಸ್ಯರಸವು ಪಸರಿಸುತ ಹರಿಯುತಿಹುದು; ಅಪರಿಮಿತಾನಂದವನು ಪಸರಿಸುತಿಹುದು. ಸಗ್ಗದಾ ತೊರೆ ದಡ ಮೀರಿ ಹರಿಯುತಿಹುದು, ಸಂತಸದ ನೆರೆ ಬಂದಿಹುದಾ ತೊರೆಗೆ.

೫೮

ಧರಣಿಮಾತೆಯನು ಕ್ರಾಂತಿಕಾರಕ ತೃಣ ಬಾಹುಳ್ಯದಿಂದಲಿ ಪ್ರವಹಿಸುವ ಸಂತಸದ, ಯಮಳ ಬಾಲರಿಗೆ ಜನುಮವನು, ಮರಣವನು ಕರುಣಿಸುತ ವಿಶಾಲ ಜಗದೊಳು ನರ್ತಿಸುವ ಸಂತಸದ, ಜಂಝೂಮಾರುತನೊಡನಾಗಮಿಸಿ ಸಮಸ್ತ ಜೀವಿಗಳನೆಚ್ಚರಿಸಿ ಹಾಸ್ಯಮಯಗೊಳಿಸುವಾ ಸಂತಸದ, ವೇದನೆಯ ರಕ್ತಕಮಲದೆಸಳೊಳು ಅಶ್ರುಮಯವಾಗುತಲಿ ಶಾಂತತೆಯಿಂದ ಕುಳಿತಿಹ ಸಂತಸದ, ತನ್ನೊಡನಿಹ ಸರ್ವವನು ಧೂಳಿಯಲಿ ಚೆಲ್ಲುತಲಿ ಆಜ್ಞಾತವಾಗಿರುವ ಸಂತಸದ, ಯತ್ನಗಳೆಲ್ಲ ಎನ್ನ ಕೊನೆಯ ಗೀತದಲಿ ಕೂಡಿಕೊಂಡಿರಲಿ.

೫೯

ಎಲೆಯೆನ್ನ ಹೃದಯದಿನಿಯನೆ, ಎಲೆಗಳಲಿ ನರ್ತಿಸುವ ಸುವರ್ಣ ಪ್ರಕಾಶವದು, ಆಲಸ್ಯದಿಂದಲಿ ಆಗಸದಿ ಪಯಣಿಸುವ ಮೇಘ ಸಮೂಹ

ವದು, ಹಣೆಗೆನ್ನ ತಂಪನೀಯುತ ಹರಿಯುವಾ ಮಾರುತನು-ನಿನ್ನ ಪ್ರೇಮದಾ ಪ್ರತೀಕವಾಗಿಹವೆಂದು ತಿಳಿದಿಹುದೆನಗೆ.

ಪ್ರಭಾತಕಿರಣಗಳೆನ್ನ ಕಣ್ಣಗಳಲಿ ನೆರೆಯು ತಂದಿಹವೆಂಬ ನಿನ್ನ ಸಂದೇಶ ಸಿಕ್ಕಿಹುದೆನ್ನೆಡೆಗೆ. ಮೇಲಿಂದ ನಿನ್ನ ಮುಖಕಮಲ ಬಾಗಿಹುದು, ಮೇಲಿಂದ ನಿನ್ನ ಕಣ್ಣುಗಳು ನೋಡೆಹವೆನ್ನ ಕಣ್ಗಳನು, ನಿನ್ನ ಪದಗಳನೆನ್ನ ಹೃದಯ ಸ್ಪರ್ಶಿಸಿಹುದು.

೬೦

ಅನಂತವಾಗಿಹ ಜಗತ್ಸಾಗರದ ದಂಡೆಯಲಿ ಬಾಲಕರು ಕೂಡಿಹರು. ಗಣನಾತೀತವಾಗಿಹ ಆಗಸವು ನಿಶ್ಚಲವಾಗಿಹುದು; ಅವಿಶ್ರಾಂತ ಜಲ ಕರ್ಕಶವಾಗಿಹದು. ಅನಂತವಾಗಿಹ ಜಗತ್ಸಾಗರದ ದಂಡೆಯಲಿ ಒದರುತಲಿ ಕುಣಿಯುತಲಿ ಕೂಡಿಹರು ಬಾಲಕರು.

ಹೊಯಿಗೆಯಾ ಮನೆಗಳನು ಕಟ್ಟುತಿಹರು ಬಾಲಕರು; ಆಡುತಿಹರವರು ಪೊಳ್ಳು ಚಿಪ್ಪುಗಳೊಡನೆ. ಮುದುರಿದಾ ಯೆಲೆಗಳನು ದೋಣಿಯಾಗಿಸಿಹರವರು, ಮಂದಹಾಸದಲಿ ವಿಶಾಲ ಜಲದಲಿ ತೇಲಬಿಡುತಿಹರವರು. ಜಗತ್ಸಾಗರದ ದಂಡೆಯಲಿ ಬಾಲಕರಿಗಿಹುದವರ ಆಟಗಳು.

ಈಜು ಬಾರದು ಬಾಲರಿಗೆ, ಬಲೆಬೀಸುವುದನರಿಯದಿಹರವರು. ಮುತ್ತಿನಾ ಶೋಧಕರು ಸಾಗರದಿ ಮುಳುಗುತಿಹರು, ಸಮುದ್ರಯಾನದಲಿ ನಿರತರಾಗಿಹರು ವರ್ತಕರು, ಹೊಯಿಗೆಯಾ ಕಣಗಳನು ಹೆಕ್ಕುತಲಿ ಚೆಲ್ಲುತಲಿ ಆಡುತಿಹರು ಬಾಲಕರು. ಗುಪ್ತಧನವನು ಹುಡುಕದಿಹರವರು, ಬಲೆಬೀಸುವುದನರಿಯದಿಹರವರು.

ಜಲನಿಧಿಗೆ ಹಾಸ್ಯದಾವೇಶ ಬರುತಿಹದು, ಸಾಗರದ ದಂಡೆಯಾ ಮಂದ ಹಾಸದ ಮೇಲೆ ಹಲ್ಲೆಗೈಯುತಿಹುದಲ್ಲಿ ದುಃಖ. ತೊಟ್ಟಿಲನು ತೂಗುತಲಿ ಜೋಗುಳವ ಹಾಡುತಲಿಹ ತಾಯಿಯಂದದಿ, ಮೃತ್ಯುರೂಪದ ತರಂಗಗಳು ಅರ್ಥವಿರದಾ ಲಾವಣಿಗಳನು ಹಾಡುತಿಹವು. ಬಾಲಕರೊಡನೆ ಜಲನಿಧಿಯು ಆಡುತಲಿಹುದು; ಸಾಗರದ ದಂಡೆಯಾ ಮಂದಹಾಸದ ಮೇಲೆ ಹಲ್ಲೆಗೈಯುತಿಹುದಲ್ಲಿ ದುಃಖ.

ಅನಂತವಾಗಿಹ ಜಗತ್ಸಾಗರದ ದಂಡೆಯಲಿ ಬಾಲಕರು ಕೂಡಿಹರು. ಮಾರ್ಗವೈವಿಧ್ಯದಾ ಬಾಹುಳ್ಯವಿಹ ಆಗಸದಿ, ಕಣ್ಗಳನು ತೆರೆಯದೆನೆ ಜಂಝೂಮಾರುತನಲೆಯುತಿಹನು, ಮಾರ್ಗವೈವಿಧ್ಯದಾ ಬಾಹುಳ್ಯವಿಹ ಸಾಗರದಿ ನೌಕಾಭಂಗವಾಗುತಲಿಹುದು, ಕಾಲಬುಡದಲಿ ಮೃತ್ಯು ಬಂದಿಹುದು, ಬಾಲಕರು ಆಡುತಿಹರು. ಅನಂತವಾಗಿಹ ಜಗತ್ಸಾಗರದ ದಂಡೆಯಲಿ ಬಾಲಕರ ಹಿರಿದಾದ ಸಭೆ ಸೇರಿಹುದು.

೬೧

ಶಿಶುವಿನಾ ಕಣ್ಗಳಲಿ ಆಗಾಗ ಕುಣಿಯುತಿಹ ನಿದ್ದೆಎಲ್ಲಿಂದ ಬಂದಿಹುದೆಂದಾರಾದರೂ ಬಲ್ಲಿಹರೆ? ಅಹುದು, ದೇವಲೋಕದೊಳಗಣ ಮಿಣುಕುಹುಳಗಳ ಮಂದಪ್ರಕಾಶದಿಂದಲಿ ಬೆಳಗಿಹ ಕಟ್ಟಡವಿಯು ನೆರಳೊಳಗಣ ಪುಕ್ಕತನದೆರಡು ಮಾಯಾಮೊಗ್ಗುಗಳಿರುವೆಡೆ ವಾಸವಾಗಿಹುದೆಂದದಾರೊ ಹೇಳಿಹರು. ಶಿಶುವಿನಾ ಕಣ್ಗಳನು ಚುಂಬಿಸಲು ಬರುತಿಹುದದು.

ಶಿಶುವು ನಿದ್ರಿಸುತಿರಲದರ ತುಟಿಗಳಲಿಹ ಮಂದಹಾಸವದೆಲ್ಲಿಂದ ಬಂದಿಹುದೆಂದಾರಾದರೂ ಬಲ್ಲಿಹರೆ? ಅಹುದು, ಎಳತಾದ ಬಾಡಿರುವ ಶಶಿಕಿರಣ, ಗ್ರೀಷ್ಮಋತುವಿನಾ ಕ್ಷಣಮಾತ್ರದಲಿ ಅದೃಶ್ಯವಾಗುತಿಹ ಮೇಘದಾ ಪಾರ್ಶ್ವವನು ಸ್ಪರ್ಶಿಸಿತಂತೆ; ಇಬ್ಬನಿಯು ತೊಳೆದ ಬೆಳಗಿನಾ ಕನಸಿನಲಿ ಮೊದಲಾಗಿ ಜನಿಸಿದ ಮಂದ ಹಾಸವದು ಶಿಶುವು ನಿದ್ರಿಸುತಿರಲದರ ತುಟಿಗಳಲಿಹ ಚಂಚಲ ಮಂದಹಾಸವಾಗಿಹುದೆಂದಾರಾರೋ ಹೇಳಿಹರು.

ಶಿಶುವಿನಾ ಅಂಗಾಂಗದಲಿ ರೂಪಿಸಿಹ ಮೃದುಮಧುರ ನವ್ಯತೆಯದೆಲ್ಲಿ ಅಡಗಿತ್ತೆಂದಾರಾದರೂ ಬಲ್ಲಿಹರೇ? ಅಹುದು, ಶಿಶುವಿನಾ ಮಾತೆ ಕನ್ನಿಕೆಯ ರೂಪದೊಳಿಹ ಕಾಲದಲಿ, ಶಿಶುವಿನಾ ಅಂಗಾಂಗದಲಿ ರೂಪಿಸಿಹ ಮೃದುಮಧುರ ನವ್ಯತೆಯು ಮೌನ ಕೋಮಲ ಪ್ರೇಮರೂಪದಲಿ ಕನ್ನಿಕೆಯ ಹೃದಯದಲಿ ಪಸರಿಸಡಗಿತ್ತು.

೬೨

ನಿನಗೆಂದು ಬಣ್ಣಬಣ್ಣದ ಗೊಂಬೆಗಳ ತರುವಾಗ, ಎನ್ನ ಕಂದನೆ, ಮೇಘ ಸಮೂಹದಲಿ, ಜಲನಿಧಿಯ ತಳದಲ್ಲಿ ಬಣ್ಣವೇಕಿಹುದೆಂದು ತಿಳಿಯು ವುದೆನಗೆ; ಬಣ್ಣಬಣ್ಣದ ಗೊಂಬೆಗಳನು ನಿನಗರ್ಪಿಸುವಾಗ ಕುಸುಮಗಳೇಕೆ ವರ್ಣವೈವಿಧ್ಯದಿಂ ಶೋಭಿಸುತಿಹವೆಂದು ತಿಳಿಯುವುದೆನಗೆ

ನಿನ್ನ ಕುಣಿಯಿಸಲೆಂದು ಹಾಡುವೊಡೆ, ವೃಕ್ಷದಾ ಪತ್ರಗಳೊಳು ಗಾಯನವದೇಕಿಹುದೆಂದು ತಿಳಿಯುವುದೆನಗೆ; ನಿನ್ನ ಕುಣಿಯಿಸಲೆಂದು ಹಾಡುವೊಡೆ, ಹಾಡ ಕೇಳುತಲಿಹ ಧರಣಿಯಾ ಹೃದಯದೆಡೆಗೆ ತರಂಗ ಸಮೂಹವದೇಕೆ ಸಹಧ್ವನಿಯ ಕಳಿಸುವುದೆಂದು ತಿಳಿಯುವುದೆನಗೆ.

ನಿನ್ನ ಸ್ವಾರ್ಥಿ ಕರಗಳಿಗೆಂದು ಮಧುರ ವಸ್ತುಗಳ ತರುವಾಗ ಕುಸು ಮದಾ ತೊಟ್ಟಿನಲಿ ಮಧುವಿರುವುದೇಕೆಂದು ತಿಳಿಯುವುದೆನಗೆ. ನಿನ್ನ ಸ್ವಾರ್ಥಿ ಕರಗಳಿಗೆಂದು ಮಧುರ ವಸ್ತುಗಳ ತರುವಾಗ ಫಲವಸ್ತುಗಳೊಳು ಗುಪ್ತ ರೀತಿಯಲಿ ಮಧುರ ರಸವೇಕೆ ತುಂಬಿಹುದೆಂದು ತಿಳಿಯುವುದೆನಗೆ.

ನಿನ್ನನುನಗಿಸಲೆಂದು, ಮುದ್ದುಕಂದ, ನಿನ್ನ ಮುಖವ ಚುಂಬಿಸುವಾಗ ಪ್ರಭಾತ ಪ್ರಕಾಶದಲಿ ಆಗಸದೊಳದಾವ ಸಂತಸವು ಪಸರಿಸಿಹುದೆಂದು ತಿಳಿಯುವುದೆನಗೆ; ನಿನ್ನನು ನಗಿಸಲೆಂದು, ಮುದ್ದುಕಂದ, ನಿನ್ನ ಮುಖವ ಚುಂಬಿಸುವಾಗ, ಬೇಸಿಗೆಯ ಮಾರುತನೆನ್ನ ದೇಹಕದಾವ ಸಂತಸವ ತರುವ ನೆಂಬುದು ತಿಳಿಯುವುದೆನಗೆ.

೬೩

ನಾನರಿಯದ ಮಿತ್ರರಾ ಪರಿಚಯವ ಮಾಡಿಕೊಟ್ಟಿರುವೆ ನೀನೆನಗೆ. ನನ್ನದಲ್ಲದ ಮನೆಯೊಳೆನಗೆ ಆಸನವ ಕೊಟ್ಟಿರುವೆ ನೀನು. ಬಹುದೂರ ವಿರುವದನು ನೀನತಿ ಸಮೀಪಗೊಳಿಸಿಹೆ: ಅಪರಿಚಿತನೊಬ್ಬನನು ನೀನೆನ್ನ ತಮ್ಮನಾಗಿಸಿಹೆ.

ಎನ್ನ ಪರಿಚಯದ ಮನೆಯ ಬಿಡುವ ಕಾಲದಲೆನ್ನ ಹೃದಯದಲಿ ಅತೃಪ್ತಿ ಮೂಡುತಿಹುದು. ನವ್ಯದಲಿ ಪುರಾತನವು ವಾಸಿಸಿಹುದೆಂದು, ನೀನಲ್ಲಿ ತಂಗಿರುವೆಯೆಂದು ಮರೆಯುವೆನು ನಾನು.

ಈ ಜಗದೊಳು, ಇತರ ಜಗಗಳೊಳು ಜನನ ಮರಣಗಳ ರೂಪದಲಿ ಎನ್ನನದೆಲ್ಲಿಯೊ ಒಯ್ಯುವವನು, ಸದಾಕಾಲದಲಪರಿಚಿತ ಜನರೊಡನೆ ಸಂತಸದ ಸಂಕಲೆಯಿಂದೆನ್ನ ಹೃದಯವನು ಜೋಡಿಸುವ, ಅನಂತವಾಗಿಹ ಯೆನ್ನ ಜೀವನದ ಒರ್ವನೆ ಸಾರಥಿಯಾದ ನೀನೆಯಾಗಿರುವೆ.

ನಿನ್ನನರಿತವಗೆ ಪರಕೀಯನೆಂಬವನಿಲ್ಲ; ಆತನಾ ದ್ವಾರಗಳೆಲ್ಲ ತೆರೆದಿರುವುವು ನಿರಂತರ. ಅನೇಕರನು ಆಡಿಸುತಲಿರುವವನ ಸ್ಪರ್ಶಸುಖವೆನಗೆ ದೊರಕಲೆಂಬೆನ್ನ ಪ್ರಾರ್ಥನೆಯು ಫಲಿಸುವಂದದಿ ದಯೆದೋರು ದೇವ.

೬೪

ನಿರ್ಜನ ಪ್ರದೇಶದಾತೊರೆಯ ಇಳಿಜಾರಿನಲಿ, ಉದ್ದ ಬೆಳೆದಿಹ ಹುಲ್ಲಿನಾ ಬಯಲಿನಲಿ, “ಕುಮಾರಿ, ನಿನ್ನ ಸೆರಗಿನೊಳು ಬಚ್ಚಿಟ್ಟ ದೀವಿಗೆಯೊಡನೆ ಎಲ್ಲಿ ನಡೆದಿರುವೆ? ಕತ್ತಲಲಿ ಏಕಾಂತದಲಿಹುದೆನ್ನ ಮನೆ—ಕೊಡಲಾರೆಯಾ ನಿನ್ನ ಬೆಳಕನೆನಗೆ?” ಎಂದು ಕೇಳಿದೆನು ನಾನವಳೊಡನೆ. ಅವಳ ಸೂಕ್ಷ್ಮವಾಗಿಹ ಕಣ್ಣಳನು ಮೇಲೆತ್ತಿ, ಸಂಧ್ಯಾಕಾಲದಾ ಮಂದ ಪ್ರಕಾಶದಲೊಂದು ನಿಮಿಷ ಮಾತ್ರಕೆನ್ನ ಮುಖವ ನೋಡಿದಳವಳು. ಆಗವಳು, “ಪಶ್ಚಿಮಾಂಬುಧಿಯೊಳು ದಿವಾಕಿರಣ ಐಕ್ಯವಾಗುವ ಕಾಲದಲೀ ದೀಪವನು ತೊರೆಯ ನೀರೊಳು ತೇಲಬಿಡ ಬಂದಿಹೆನು ನಾನಿಲ್ಲಿ” ಎಂದುಸುರಿದಳು. ಉದ್ದ ಬೆಳೆದಿಹ ಹುಲ್ಲಮಧ್ಯದಿ ನಿಲ್ಲುತಲಿ, ವ್ಯರ್ಥದಿಂದಲಿ ತರಂಗದೊಳು ತೇಲುವಾ, ಹೆದರಿಕೊಂಡಿಹ ದೀಪದಾ ಜ್ಯೋತಿಯ ನೀಕ್ಷಿಸುತ ನಿಂತುಬಿಟ್ಟೆನು ನಾನು.

ಒಟ್ಟುಗೂಡುತಲಿ ಬೆಳೆಯುವಾ ಮೌನ ನಿಶೆಯಲಿ, “ಕುಮಾರಿ, ನಿನ್ನ ಸರ್ವ ದೀಪಗಳು ಬೆಳಗುತಿಹವು—ನಿನ್ನ ದೀವಿಗೆಯೊಡನೆಲ್ಲಿ ನಡೆದಿರುವೆ? ಕತ್ತಲಲಿ, ಏಕಾಂತದಲಿಹುದೆನ್ನ ಮನೆ—ಕೊಡಲಾರೆಯಾ ನಿನ್ನ ಬೆಳಕನೆನಗೆ”ಎಂದು ಕೇಳಿದೆನು ನಾನವಳೊಡನೆ. ಅವಳ ಸೂಕ್ಷ್ಮವಾಗಿಹ ಕಣ್ಗಳನು ಮೇಲೆತ್ತಿ ಸಂದೇಹ ಭಾವದಲಿ ನಿಮಿಷಮಾತ್ರಕೆನ್ನ ಮುಖವ ನೋಡಿದಳವಳು. ಕೊನೆಗವಳು, “ದೀವಿಗೆಯನಿದನು ಗಗನಕರ್ಪಿಸಲು ಬಂಡಿಹೆನು ನಾನಿಲ್ಲಿ” ಎಂದುಸುರಿದಳು. ಶೂನ್ಯದಲಿ ವ್ಯರ್ಥದಿಂದಲಿ ಬೆಳಗುವಾ ಬೆಳಕ ನೀಕ್ಷಿಸುತ ನಿಂತುಬಿಟ್ಟೆನು ನಾನು.

ಚಂದ್ರನಿರದಾ ಮಧ್ಯರಾತ್ರಿಯ ಅಂಧಃಕಾರದಲಿ, "ಕುಮಾರಿ
ನಿನ್ನೆಡೆಯ ಬಳಿ ದೀವಿಗೆಯ ಹಿಡಿದು, ಅದೇನ ಶೋಧಿಸುತಲಿಹೆ? ಕತ್ತಲಲಿ
ಏಕಾಂತದಲಿಹುದೆನ್ನ ಮನೆ—ಕೊಡಲಾರೆಯಾ ನಿನ್ನ ಬೆಳಕನೆನಗೆ"ಂದ
ಕೇಳಿದೆನು ನಾನವಳೊಡನೆ. ಯೋಚಿಸುತ ನಿಂತಳವಳೊಂದು ನಿಮಿಷ
ಕತ್ತಲಲೀಕ್ಷಿಸಿದಳೆನ್ನಮುಖವನವಳು "ಆನಂದೋತ್ಸಾಹದಾ ದೀಪಾವ
ಯೊಳು ಸೇರಿಸಲೆನ್ನ ಬೆಳಕ ತಂದಿಹೆನು ನಾನೆ"ಂದಳವಳು. ದೀಪಸಮೂಹ
ದೊಳು ವ್ಯರ್ಥದಿಂದಲಿ ಕೂಡಿಹೋಗಿಹ ಚಿಕ್ಕ ದೀವಿಗೆಯ ನೀಕ್ಷಿಸುತ ನಿಂತ
ಬಿಟ್ಟೆನು ನಾನು.

೬೫

ದೇವ, ತುಂಬಿತುಳುಕುವ ಯೆನ್ನ ಜೀವನದ ತಟ್ಟೆಯಲಿ ಅದಾವ ದಿವ
ಪಾನೀಯವನೆರೆದಿರುವೆ?

ಕವಿವರ್ಯ, ನಿನ್ನ ಸೃಷ್ಟಿಯನೆನ್ನ ಕಣ್ಗಳಿಂದಲಿ ನೋಡುವಾ, ಎನ
ಕರ್ಣದ್ವಾರದಲಿ ನಿಂತು ನಿನ್ನ ಅಮರ ಸಮ್ಮಿಳಿತ ಗಾಯನವ ಕೇಳುವ
ಸಂತಸವು ನಿನಗಿಹುದೆ?

ನಿನ್ನ ಜಗವದೆನ್ನಮನೆಯೊಳು ಶಬ್ದಗಳ ಹೆಣೆಯುತಿಹುದು, ನಿನ
ಸಂತಸವದರೊಳು ಸಂಗೀತವನು ತುಂಬುತಿಹುದು. ಪ್ರೇಮದಿಂದಲೆನ
ನಿನ್ನನರ್ಪಿಸಿ, ತವಸಮಗ್ರ ಮಾಧುರ್ಯದಾ ಅನುಭವವೆನ್ನೊಳಗೆ ಪಡೆಯು
ತಿಹೆ ನೀನು.

೬೬

ದೇವ, ಥಕ್ಕನೆ ಬೆಳಗಿ, ಅದೃಶ್ಯವಾಗುವಾ, ಶೋಭಾಯಮಾನದ
ಮಂದ ಪ್ರಕಾಶದಲೆನ್ನ ಅಸ್ತಿತ್ವದಾ ಆಳದಲಿ ಸದಾಕಾಲವಿಹ, ಪ್ರಭಾ
ಕಿರಣದೊಳೆಂದೂ ಮುಖದ ಮೇಲಣ ಸೆರಗ ತೆಗೆಯದ ರಮಣಿಯನೆ
ಕೊನೆಯ ಗೀತದೊಳಡಗಿಸುತಲೆನ್ನ ಕೊನೆಯ ಉಡುಗೊರೆಯಾಗಿ ನಿನ
ಕೊಡಲಿರುವೆ ನಾನು.

ಸಪ್ರೇಮದಾ ಮಾತಿನಿಂದಲಿ ಅವಳನೊಲಿಸಲು ತಳೆದ ಯತ್ನಗ
ವಿಫಲವಾಗಿಹವು; ಅವಳನೊಪ್ಪಿಸಲು ಆತುರತೆ ಪಟ್ಟ ಶ್ರಮಗಳೆಲ್ಲ
ವ್ಯರ್ಥವಾಗಿಹವು.

ಅವಳನೆನ್ನ ಹೃದಯದಾ ತಿರುಳಿನಲಿ ಹುದುಗಿಸುತ ದೇಶ ದೇಶಗಳ ಲಲೆದಿಹೆನು ನಾನು; ಎನ್ನ ಬಾಳ್ವೆಯಾ ಬೆಳವಣಿಗೆ, ನಾಶಗಳು ಬಂದಿಹವು, ಹೋಗಿಹವವಳ ಸಮುಕ್ಷಮದಿ.

ಎನ್ನ ಕಾಯ ಮನಗಳೆರಡರ ಮೇಲೆ, ಎನ್ನ ಸ್ವಪ್ನ ಸುಷುಪ್ತಿಗಳೆರಡರ ಮೇಲೆ ಅವಳ ಆಳ್ವಿಕೆಯ ನಡೆಸಿದಳವಳು. ಆದರೂ, ಪ್ರತ್ಯೇಕವಿರುತಳವಳು ವಾಸಿಸಿದಳೊಬ್ಬಳಾಗಿ.

ಅವಳ ಕಾಣಲೆಂದನೇಕ ಜನ ಬಂದಿಲ್ಲಿ, ಬಾಗಿಲನು ಬಡಿಯುತಲಿ, ನಿರಾಶೆಯನು ಪ್ರಕಟಿಸುತ ಹೋಗಿಹರು.

ಅವಳ ಸಮುಕ್ಷಮದಿ ನಿಲ್ಲುತಲಿ, ಅವಳ ದರುಶನವ ಪಡೆದವರಿಲ್ಲ ಜಗದೊಳು; ಏಕಾಂತದೊಳಗಿದ್ದು, ನಿನಗವಳ ನೆನಪಾಗುವನಕ ಕಾಯುತಲಿ ಉಳಿದಳವಳು.

೬೭

ಗಗನವಿದು ನೀನಾಗಿರುವೆ; ಪಂಜರವಿದು ನೀನೆಯಾಗಿರುವೆ.

ಸೌಂದರ್ಯದಧಿದೇವ, ಆತ್ಮನಿಗೆ ವರ್ಣದಾ, ಶಬ್ದದಾ, ವಾಸನೆಯ ಆವರಣವ ಕೊಟ್ಟಿಹುದು ನಿನ್ನ ಪ್ರೇಮವಾಗಿಹುದು.

ಮೌನ ರೀತಿಯಲಿ ಭೂದೇವಿಯಾ ಶಿರವ ಕಿರೀಟದಿಂದಲಿ ಶೃಂಗರಿಸೆ, ಸೌಂದರ್ಯದಾ ಮಾಲೆಯನು ಧರಿಸಿದಾ ಚಿಹ್ನದಾಬುಟ್ಟಿಯನು ಬಲಗೈ ಯೊಳಿಟ್ಟು ಉಷಾದೇವಿ ಬರುತಿಹಳಲ್ಲಿ.

ವಿಶ್ರಾಂತಿಯಾ ಪಶ್ಚಿಮಾಂಬುಧಿಯಿಂದ ಸ್ವರ್ಣಘಟದೊಳು ಶಾಂತ ತೆಯ ಶೀತಲೋದಕವ ತುಂಬಿ, ಅನಿರ್ದಿಷ್ಟ ಪಥವ ದಾಟುತಲಿ ಗೋವುಗಳ ನಿರ್ಗಮನದಾ ಮೇಲೆ ಏಕಸ್ಥ ಬಯಲಿನಾ ಪ್ರದೇಶದೊಳು ಸಂಧ್ಯಾದೇವಿ ಬರುತಿಹಳಲ್ಲಿ.

ಆದರೆ, ಆತ್ಮನಾ ನೆಗೆತದಾ ಕ್ಷೇತ್ರವಾಗಿಹ ಪ್ರಸಾರಿತ ಗಗನವನು ನಿರ್ಮಲ ಶ್ವೇತಪ್ರಭೆಯೊಂದು ಆಳುತಿಹುದು. ದಿನವಿಲ್ಲ ಇರುಳಿಲ್ಲವಲ್ಲಿ. ವರ್ಣರೂಪಗಳ ಭೇದಗಳಿಲ್ಲ; ಎಂದೆಂದಿಗೂ ಇಲ್ಲ ಶಬ್ದವಲ್ಲಿ

೬೮

ಎನ್ನ ಜಗದೊಳಗೆ ನಿನ್ನ ರವಿಕಿರಣಗಳು ಅಂಗೈಯು ತೆರೆದು ನಿಂತಿಹವು; ಎನ್ನ ಅಶ್ರುಗಳ, ವೇದನೆಯ, ಗೀತಗಳ ಮೇಘವನು ತವಪದ ಕಮಲಕರ್ಪಿಸ ಲೆನ್ನ ಬಾಗಿಲೊಳು ದಿವಸದಾದ್ಯಂತ ಕಾಯುತಲಿಹವು.

ಅತ್ಯಂತ ಸಂತಸದಿ ಆದ್ರ್ರಮೇಘದಾ ಸೆರಗನ್ನು ತವ ನಕ್ಷತ್ರ ವಕ್ಷದಾ ಮೇಲೆಳೆದು, ಗಣನಾತೀತವಾಗಿಹ ಆಕಾರದೊಳು, ಮಡಿಕೆಯೊಳು ಬದಲಿಸು ತಲದನು, ಅಶಾಶ್ವತವಾಗಿಹ ವರ್ಣ ವೈವಿಧ್ಯದಿ ಶೃಂಗರಿಸಿಹೆ ನೀನು.

ಹಗುರವಾಗಿಹುದದು, ಅನಿತ್ಯ, ಕೋಮಲ, 'ಅಶ್ರುಮಯವಾಗಿಹು ದದು, ಅಂಧಃಕಾರಯುತವಾಗಿಹುದದು. ಅದರಿಂದೆ, ನಿರ್ಮಲ ಪ್ರಶಾಂತ ರೂಪಿ ದೇವ, ನಿನಗದರ ಮೇಲಿಹುದು ಪ್ರೇಮ. ಆದರಿಂದೆ, ತವಭೀಕರ ಶ್ವೇತಕಿರಣಗಳ ಮೇಲದರ ಶೋಚನೀಯ ಛಾಯೆಯಾ ಆವರಣವ ಬೀಸ ಬಹುದದು.

೬೯

ಎನ್ನ ರಕ್ತನಾಳದೊಳು ಅಹೋ ರಾತ್ರಿಯಲಿ ಹರಿಯುವಾ ಬಾಳಿನಾ ತೊರೆ ಜಗದಿ ಹರಿಯುವಾ ತೊರೆಯಾಗಿಹುದು; ಲಯಬದ್ಧ ನರ್ತನವ ಮಾಡುತಿಹುದದು.

ಪೃಥ್ವಿರಜದಿಂದಲಗಣಿತ ತೃಣಸಮೂಹದಾ ರೂಪದಲುದ್ಭವಿಸುವಾ, ಕುಸುಮಗಳ ಪತ್ರಗಳ ಆಂದೋಲನಯುತ ತರಂಗಗಳ ರೂಪವನು ಧರಿಸುವಾ ಜೀವನವದಾಗಿಹುದು.

ಇಳಿತದಾ ಭರತದಾ ಕಾಲದಲಿ ಜನನ ಮರಣದಾ ಸಾಗರದ ತೊಟ್ಟ ಲೊಳು ತೂಗುತಲಿಹ ಜೀವನವದಾಗಿಹುದು.

ಈ ಜಗಜೀವನದ ಸ್ಪರ್ಶದಿಂದಲೆನ್ನಂಗಾಂಗಗಳು ಶ್ರೇಷ್ಠವಾಗಿಹ ವೆಂದು ತೋರುವುದೆನಗೆ. ಎನ್ನ ಈಗಿನಾ ರಕ್ತದೊಳು ನರ್ತಿಸುವ, ಮೊದ ಲಿಂದ ವಾಸಿಸಿಹ ಜೀವಶಕ್ತಿಯ ನೆವದಿಂದ ಹೆಮ್ಮೆಯಿಹುದೆನಗೆ.

೬೦

ಲಯಬದ್ಧತೆಯ ಆನಂದವಿದರೊಳು ಸಂತಸವ ಪಡಲಾಗದೆ ನಿನ್ನಿಂದ? ಭೀಕರದ ಸಂತಸದ ಸುಳಿಯೊಳಗೆ ಅಲೆದು ತಿರೆಯುತಲಿ ಒಡೆದುಹೋಗಲು ಆಗದೆ ನಿನ್ನಿಂದ?

ಸರ್ವ ಪದಾರ್ಥಗಳೋಡುತಿಹವು ಮುಂದು ಮುಂದಕೆ, ನಿಲ್ಲದೆನೆ, ಹಿಂದೆ ತಿರುಗದೆನೆ ಓಡುತಿಹವವು; ಅವುಗಳನ್ನು ತಡೆಯುವಾ ಶಕ್ತಿಯಿಲ್ಲಿಲ್ಲ, ಓಡುತಿಹವವು ಮುಂದು ಮುಂದಕೆ.

ಅವಿಶ್ರಾಂತ ಸಂಗೀತದಾ ತ್ವರಿತಗತಿಗನುವಾಗಿ ಕುಣಿಯುತಲಿ ಬರುತಿಹವು ವಿವಿಧ ಋತುಗಳು, ಹೋಗುತಿಹವವುಗಳು—ಪ್ರತಿ ನಿಮಿಷದಲಿ ಚೆಲ್ಲುತಲಿ, ಶರಣುಬರುತಲಿ, ಅಂತ್ಯ ಹೊಂದುತಲಿರುವ ಪರಿಪೂರ್ಣದಾ ಸಂತಸದಿ ಅವ್ಯಾಹತ ಜಲಪಾತದಂದದಿ ವರ್ಣ, ಧ್ವನಿ, ಸುಗಂಧಗಳು ಎರೆಯುತಿಹವಲ್ಲಿ.

೬೧

ಅನೇಕ ರೀತಿಯಲೆನ್ನನುಪಯೋಗಿಸಿ ದೊರಕಿದಾ ಫಲವ ದಿಕ್ಕುದಿಕ್ಕುಗಳಲಿ ಹಂಚುತಲಿ ನಿನ್ನ ಪ್ರಭೆಯು ಮೇಲೆ ಬಣ್ಣ ಬಣ್ಣದ ನೆರಳನೆನ್ನಿಂದ ಬೀಳಿಸುವುದು ನಿನ್ನ ಮಾಯೆ.

ನಿನ್ನೊಳಗೆ ನೀನೆ ಗಡಿಯ ನಿರ್ಮಿಸುತ, ಬೇರ್ಪಡಿಸಿದಾ ನಿನ್ನಾತ್ಮವನು ಸಹಸ್ರ ಧ್ವನಿಗಳಿಂದ ಕರೆಯುತಿಹೆ ನೀನು. ನಿನ್ನ ಆತ್ಮ ಭೇದನ ವಿದೆನ್ನೊಳಗೆ ರೂಪವನು ಪಡೆದಿಹುದು.

ಆವೇಶಕಾರಕ ಗೀತವಿದು ಸಮಗ್ರ ಗಗನದಲಿ ವಿವಿಧ ರಂಗಿತ ಅಶ್ರುವಿನಲಿ, ಮೃದು ಹಾಸ್ಯದಲಿ, ಎಚ್ಚರಿಕೆಯ ಮಾತಿನಲಿ, ಅಪೇಕ್ಷೆಯಲಿ ಮರುದನಿಯ ಸೃಜಿಸುತಿಹುದು; ತರಂಗಗಳು ಬರುತಿಹವು ಮೇಲೆ, ಮುಳುಗುತಿಹವವುಗಳಾ ಮೇಲೆ, ಸ್ವಪ್ನಗಳೊಡೆದು ಹೋಗುತಲಿ, ಮೂಡುತಿಹವು. ನಿನ್ನಾತ್ಮನಾ ಅಪಜಯವಿಹುದೆನ್ನೊಳಗೆ.

ನೀನು ಮಡಚಿದ ಪರದೆಯಿಂದರಲಿ ದಿವಾರಾತ್ರಿಗಳ ಕುಂಚದಿಂದಲ ಗಣಿತ ಚಿತ್ರಗಳು ರೂಪಿಸಿಹವು. ಬರಡಾಗಿಹ ಸರಳರೇಖೆಗಳ ತೊರೆದು ಅಚ್ಚರಿಯ ವಕ್ರರೇಖೆಗಳ ರಹಸ್ಯದಿಂದಲಿ ನಿರ್ಮಿಸಿದ ಆಸನವಿಹುದದರ ಹಿಂದೆ.

ನಿನ್ನ ಮೋಹಿನ್ನ ಭವ್ಯದೃಶ್ಯದಿಂದಲಿ ತುಂಬಿಹುದೀ ಆಗಸವು ನಿನ್ನ ಮೋಹಿನ್ನ ದನಿಯಿಂದ ಮಾರುತನು ಕಂಪಿತನಾಗಿಹನು; ನಿನ್ನ ಮೋಹಿನ್ನ ಕಣ್ಮರೆಯ ಆಟದಲಿ ಜಾರುತಿಹವು ಯುಗಗಳನೇಕ

೭೨

ಆತನಾ ಅಗಾಧ ಗುಪ್ತ ಸ್ಪರ್ಶದಿಂದಲೆನ್ನನೆಚ್ಚರಿಪ ಅಂತರಿಕ ವ್ಯಕ್ತಿ ಆತನೆ ಆಗಿಹನು.

ಎನ್ನ ಕಣ್ಗಳಲಿ ಮಾಯೆಯಾ ಆವರಣವ ಬೀಸಿದಾ ವ್ಯಕ್ತಿ, ಎನ್ನ ಹೃದಯ ವಾದ್ಯದಾ ತಂತಿಗಳಲಿ ಸುಖದುಃಖದಾ ವಿವಿಧ ಆರೋಹ ಅವ ರೋಹಗಳನು ಸಂತಸದಿ ಬಾರಿಪ ವ್ಯಕ್ತಿ ಆತನೆ ಆಗಿಹನು.

ಅಶಾಶ್ವತವಿಹ ಕನಕ, ರಜತ, ಶಾಮಲ, ಮರಕತ ವರ್ಣಗಳಲಿ ಮಾಯಾಂಬರವ ಹೆಣೆಯುವಾ ವ್ಯಕ್ತಿ, ಸ್ಪರ್ಶ ಮಾತ್ರದಿ ಮೈ ಮರೆಸುವಾ, ಕಾಲ್ಗಳನು ಬಟ್ಟೆಯಾ ಮಡಿಕೆಯೊಳಗಿಂದ ತೋರಿಸುವ ವ್ಯಕ್ತಿ ಆತನೆ ಆಗಿಹನು.

ಬರುತಿಹವು ದಿವಸಗಳು, ಹೋಗುತಿಹವು ವರುಷಗಳು; ಅನೇಕ ಹೆಸರಿನಲಿ, ಅನೇಕ ರೂಪದಲಿ, ಸುಖದುಃಖದಾ ಅನೇಕ ಅತಿರೇಕ ಆವೇಶ ದಲೆನ್ನ ಹೃದಯವನು ನಡೆಯಿಸುವ ವ್ಯಕ್ತಿ ಆತನೇ ಆಗಿಹನು.

೭೩

(ಸರ್ವಸಂಗ) ಪರಿತ್ಯಾಗದಲಿ ಸಿಗದೆನಗೆ ಮುಕ್ತಿ. ಸಂತಸದ ಸಹಸ್ರ ಶೃಂಖಲೆಯೊಳು ಸ್ವಾತಂತ್ರ್ಯದಾಲಿಂಗನದ ಅನುಭವವು ಸಿಗುತಲಿಹು ದೆನಗೆ.

ಈ ಮಣ್ಣ ಮಡಕೆಯನು ತುಂಬುತಲಿ, ವಿವಿಧ ವರ್ಣಗಳ ವಿವಿಧ ಗಂಧಗಳ ತವಪಾನೀಯದಾ ಹೊಸತಾದ ಗುಟುಕನ್ನು ನಿರಂತರವಾಗಿ ತುಂಬಿಹೆ ನೀನು.

ನಿನ್ನ ಜ್ಯೋತಿಯಿಂದಲೆನ್ನ ಜಗವಿದು ನೂರಾರು ದೀಪಗಳ ಹೊತ್ತಿಸಿಹುದು. ನಿನ್ನ ಮಂದಿರದೊಳಿಹ ಅಗ್ರಪೀಠದೆದುರೊಳು ಇರಿಸುತಿಹುದದು.

ಇಲ್ಲ, ಎನ್ನಿಂದ್ರಿಯಗಳ ಬಾಗಿಲನು ಎಂದೆಂದಿಗೂ ಮುಚ್ಚಲಾರೆನು ನಾನು. ದೃಕ್, ಶ್ರೋತ್ರ, ಸ್ಪರ್ಶಗಳ ಸಂತಸವು ನಿನ್ನ ಸಂತಸವ ಪ್ರಕಟಿಸುತಿಹುದು.

ಅಹುದು, ಎನ್ನ ಸರ್ವ ಭ್ರಾಂತಿಗಳು ದಹನವಾಗುತಲಿ ಸಂತಸದ ಬೆಳಕ ನೀಡುವುವು. ಎನ್ನೆಲ್ಲ ಬಯಕೆಗಳು ಪ್ರೇಮ ಫಲದೊಳು ಪಕ್ವವಾಗುವುವು.

೭೪

ದಿನವು ಮುಗಿದಿಹುದು, ಭೂಮಿಯೊಳು ನೆರಳು ಬಿದ್ದಿಹುದು. ತೊರೆಯ ಬಳಿಯನು ಸೇರಿ ಮಡಕೆಯನು ತುಂಬುವಾ ಸಮಯ ಬಂದಿಹುದೆನಗೆ.

ನೀರಿನಾ ಶೋಕಗೀತದೊಂದಿಗೆ ಸಂಧ್ಯಾ ಮಾರುತನು ಉತ್ಸುಕನಾಗಿಹನು. ಆಹ್, ಸಂಜೆಯಾ ನಸು ಬೆಳಕಿನಲಿ ಹೊರಬರಲು ಕರೆಯುತಿಹನವನು. ಏಕಸ್ಥವಾಗಿಹ ಓಣಿಯಲಿ ಪ್ರಯಾಣಿಕರಿಲ್ಲ, ಎಚ್ಚೆತ್ತಿಹನು ಮಾರುತನಲ್ಲಿ, ನದಿ ತರಂಗಗಳು ಲವಲವಿಕೆಯಿಂದಿಹವು.

ಮನೆಗೆ ಮರಳಲಿಕ್ಕಿಹುದೆಂದರಿಯೆನು ನಾನು; ಆದಾರನು ನೋಡಲಿರುವೆನು ನಾನೆಂದು ತಿಳಿಯೆನು ನಾನು. ಆಳವಿಲ್ಲದ ನೀರಿನೊಳು ದೋಣಿಯೊಂದರಲೊರ್ವ ಅಪರಿಚಿತನು ವೀಣೆಯನು ಬಾರಿಸುತಿಹನು.

೭೫

ಅಶಾಶ್ವತರಾಗಿಹ ಯೆಮಗೆ ಕಳುಹಿಸಿಧ ನಿನ್ನ ಪಾರಿತೋಷಕಗಳೆಮ್ಮ ಅವಶ್ಯಕತೆಗಳನು ಪೂರೈಸುವುವು; ಆದರೂ ಕಡಿಮೆಯಾಗದೆನೆ ಮರಳುವವುಗಳು ನಿನ್ನೆಡೆಗೆ ಓಡುತಲಿ.

ನದಿಗಿಹುದು ಅನುದಿನದ ಕೆಲಸ; ಹೊಲಗಳಲಿ, ಹಳ್ಳಿಗಳಲಿ ಅವಸರದಿಂದ ಹರಿಯುತಲಿಹುದು, ಆದರೂ ಅವ್ಯಾಹತವಾಗಿ ಪ್ರವಹಿಸುವ ಆದರ ಜಲ ತವಪಾದವನು ತೊಳೆಯೆ ಸಿದ್ಧವಾಗಿಹುದು.

ಪುಷ್ಪವದು ತನ್ನ ಸೌರಭದಿಂದ ಗಾಳಿಯನು ಮಧುರವಾಗಿಸುತಿಹುದು; ಆದರೂ, ಆದನು ನಿನಗರ್ಪಿಸುವುದದರ ಕೊನೆಯ ಸೇವೆಯಾಗಿಹುದು.

ನಿನ್ನ ಪೂಜನೆಯಿಂದ ದರಿದ್ರವಾಗದೀ ಜಗವು. ಕವಿಯ ಕೃತಿಗಳಿಗೆ ಜಗವು ಕೊಡುತಿಹುದು ತನ್ನ ನೆಚ್ಚಿನ ಅರ್ಥವನು; ಅದರೂ ಕೃತಿಗಳಾ ಕೊನೆಯ ಅರ್ಥವದು ನಿನ್ನ ತೋರಿಸುತಿಹುದು.

೭೬

ಎಲೆಯೆನ್ನ ಜೀವನದ ಪ್ರಭುವೆ, ಅನುದಿನವು ನಿನ್ನ ಮುಖಕೆ ಮುಖ ಮಾಡಿ ನಿಲ್ಲಲಿಕ್ಕಿಹುದೆ ನಾನು? ಎಲೆ ಜಗದೊಡೆಯನೆ, ಕೈಗಳನು ಜೋಡಿಸುತ ನಿನ್ನ ಮುಖಕೆ ಮುಖ ಮಾಡಿ ನಿಲ್ಲಲಿಕ್ಕಿಹುದೆ ನಾನು?

ಏಕಾಂತದಲಿ ಮೌನದಿಂದಲಿ, ವಿಶಾಲವಾಗಿಹ ಆಗಸದ ಕೆಳಗೆ ನಿಗರ್ವಿ ಹೃದಯದಿಂದಲಿ ನಿನ್ನ ಮುಖಕೆ ಮುಖ ಮಾಡಿ ನಿಲ್ಲಲಿಕ್ಕಿಹುದೆ ನಾನು?

ಕರ್ಮಯತ್ನಗಳು ದಂಗೆಯೆದ್ದಿರುವ ನಿನ್ನ ಈ ಶ್ರಮಿಕ ಜಗದೊಳು ಅವಸರದಿ ಓಡುತಲಿಹ ಜನರ ಗುಂಪಿನೊಳಿದ್ದು ನಿನ್ನ ಮುಖಕೆ ಮುಖ ಮಾಡಿ ನಿಲ್ಲಲಿಕ್ಕಿಹುದೆ ನಾನು?

ಈ ಜಗದೊಳೆನ್ನ ಕೆಲಸ ಮುಗಿದೊಡನೆ, ಎಲೆ ರಾಜೇಂದ್ರನೆ, ಒಂಟಿಯಾಗುತಲಿ, ಮೌನದಿಂದಲಿ ನಿನ್ನ ಮುಖಕೆ ಮುಖ ಮಾಡಿ ನಿಲ್ಲಲಿಕ್ಕಿಹುದೆ ನಾನು?

೭೭

ನೀನೆನ್ನ ದೇವನಾಗಿಹೆಯೆಂದು ತಿಳಿದಿಹೆನು ನಾನು; ಆದರಿಂದ ದೂರ ನಿಂತಿಹೆನು ನಾನು—ನೀನೆನ್ನವನೆಯೆಂದು ತಿಳಿಯದಿಹೆನು ನಾನು; ಆದರಿಂದ

ಹತ್ತಿರಕೆ ಬರುತಿಹೆನು ನಾನು ನೀನೆನ್ನ ಪಿತನೆಂದು ತಿಳಿಯುತಲಿ ನಿನ್ನ ಕಾಲ್ಗಳಿಗೆ ಬಾಗಿಹೆನು ನಾನು—ಮಿತ್ರನಿಗೆ ಕೊಡುವ ಹಸ್ತಲಾಘವವ ನಿನಗೆ ಕೊಡದಿಹೆನು ನಾನು.

ಎನ್ನ ಹೃದಯವನಾಲಿಂಗಿಸುತ ನಿನ್ನನೆನ್ನ ಮಿತ್ರನಾಗಿಸಲು, ನಿನ್ನಂತೆ ಎನ್ನನಧೀನವಾಗಿಸಲು ನೀನಿಳಿದು ಬರುವೆಡೆಯಲ್ಲಿ ನಿಂತಿಲ್ಲ ನಾನು.

ಎನ್ನ ತಮ್ಮಂದಿರಲಿ ನೀನೊಬ್ಬ ತಮ್ಮನಾಗಿಹೆ; ಆದರೆ, ಅವರೆಡೆಗೆ ಲಕ್ಷವನು ಕೊಡಲಿಲ್ಲ ನಾನು; ಎನ್ನ ದುಡಿಮೆಯುನವರೊಡನೆ ಹಂಚದೆನೆ, ನಿನ್ನೊಡನೆ ಹಂಚುತಿಹೆನು ನಾನು.

ಸುಖ ದುಃಖಗಳಲಿ ಜಗದೊಡನೆ ನಿಲ್ಲದೆನೆ ನಿನ್ನೊಡನೆ ನಿಂತಿಹೆನು ನಾನು ಎನ್ನ ಜೀವನವನರ್ಪಿಸಲು ಸಂಕೋಚವಾಗುವುದೆನಗೆ; ಜೀವನದ ಶ್ರೇಷ್ಠ ಸಾಗರದಿ ನೆಗೆದಿಹೆನು ನಾನು.

೭೮

ಜಗದೊಳಗೆ ನವಸೃಷ್ಟಿಯಾದ ಕಾಲದಲಿ, ತಾರೆಗಳು ಪ್ರಥಮ ಪ್ರಭೆಯಿಂದ ಶೋಭಿಸಿದ ಕಾಲದಲಿ ದೇವತೆಗಳೆಲ್ಲ ಆಗಸದಿ ಸಭೆಯ ಸೇರಿಸುತ, "ಪೂರ್ಣತೆಯ ಚಿತ್ರವಿದು! ಅಮಿಶ್ರಿತ ಸಂತೋಷವಿದೆಂದು" ಹಾಡಿದರು.

ಆದರೆ, "ಅದೆಲ್ಲೊ ದೀಪಶೃಂಖಲೆಯ ಕಣಿಕೆಯೊಂದು ಕಳೆದಿಹುದು; ತಾರೆಯೊಂದಿಲ್ಲಿಂದ ಕಾಣೆಯಾಗಿಹುದು" ಎಂದೊದರಿದನೊಬ್ಬನಾಕ್ಷಣದಿ.

ಅವರ ವೀಣೆಯಾ ಸ್ವರ್ಣ ತಂತಿ ಮುರಿಯಿತಾಗ, ನಿಂತು ಹೋಯಿತವರ ಗೀತ, "ಅಹುದು, ಕಾಣೆಯಾದಾ ತಾರೆಯತಿ ಚಂದವಾಗಿತ್ತು; ಸ್ವರ್ಗಲೋಕಕದು ಕೀರ್ತಿಯನು ತರುವುದಾಗಿತ್ತು" ಎಂದು ವಿಸ್ಮಯದಿಂದೊದರಿದರವರು.

ಅಂದಿನಿಂದದನರಸೆ ವಿಶ್ರಾಂತಿಯನು ಪಡೆಯದೆನೆ ಯತ್ನಗಳು ನಡೆದಿಹವು; ಅದರ ನಷ್ಟದಿಂದ ಆ ಜಗವು ಸಂತಸವೊಂದನು ಕಳೆದಿಹುದೆಂಬ ರೋದನವು ಕರ್ಣಾಕರ್ಣಿಯಾಗಿಹುದು.

ಇರುಳಿನಾ ಅಗಾಧ ಮೌನದಲಿ ತಾರೆಗಳು ಮಂದ ಹಾಸದಿ ತಮ್ಮೊಳಗೆ, “ಶೋಧವಿದು ನಿರರ್ಥಕವಾಗಿಹುದು! ಅಖಂಡ ಪೂರ್ಣತ್ವ ತುಂಬಿಹು ದೆಲ್ಲೆಡೆಯೊಳೆ”ಂದು ಪಿಸುಗುಟ್ಟುತಿಹವು.

೭೯

ಎನ್ನೀಜನುಮದಲಿ ನಿನಗೆ ಭೇಟಿಯನ್ನು ಕೊಡುವ ಭಾಗ್ಯವೆನಗಿಲ್ಲ ದೊಡೆ, ನಿನ್ನ ದರುಶನವ ಕಳೆದುಕೊಂಡೆನು ನಾನೆಂದು ಭಾವಿಸಲಿ ನಿರಂತರ; ನಿಮಿಷಮಾತ್ರಕೆ ನಾನಿದನು ಮರೆಯದಿರಲಿ; ಅಳಲಿನಾ ಹೊರೆಯ ಸ್ವಪ್ನ ಜಾಗೃತಗಳಲ್ಲಿ ಧರಿಸಿರಲಿ ನಾನು.

ಈ ಜಗದ ಜನಸಂದಣಿಯ ಸಂತೆಯಲೆನ್ನ ದಿವಸಗಳುರುಳುತಿರಲು, ಅನುದಿನದ ಲಾಭದಿಂದಲೆನ್ನ ಕರಗಳಲಿ ಧನವು ತುಂಬುತಿರಲು, ಲಾಭವನು ಗಳಿಸಿಲ್ಲ ನಾನೆಂದು ಭಾವಿಸಲಿ ನಿರಂತರ; ನಿಮಿಷಮಾತ್ರಕೆ ನಾನಿದನು ಮರೆಯದಿರಲಿ; ಅಳಲಿನಾ ಹೊರೆಯ ಸ್ವಪ್ನಜಾಗೃತಗಳಲಿ ಧರಿಸಿರಲಿ ನಾನು.

ಮಾರ್ಗದಾ ಬದಿಯಲಿದ್ದು ಬಳಲಿ ಬೆಂಡಾಗಿರಲು, ಧೂಳಿಯಲೆನ್ನ ಹಾಸಿಗೆಯ ಬಿಡಿಸುತಿರೆ, ಬಹುದೂರದಾ ಪಯಣವೆನ್ನೆದುರೊಳಿಹುದೆಂದು ಭಾವಿಸಲಿ; ನಿಮಿಷಮಾತ್ರಕೆ ನಾನಿದನು ಮರೆಯದಿರಲಿ; ಅಳಲಿನಾಹೊರೆಯ ಸ್ವಪ್ನ ಜಾಗೃತಗಳಲಿ ಧರಿಸಿರಲಿ ನಾನು.

ಎನ್ನ ಕೊಠಡಿಗಳೆಲ್ಲ ಸಿಂಗರಿಸಿರಲು, ಕೊಳಲ ನಾದವು ತುಂಬಿರಲದ ರೊಳು, ಹಾಸ್ಯಮಯವಾಗಿರಲದು, ಎನ್ನ ಮನೆಯೊಳಗೆ ನಿನ್ನನಾಮಂತ್ರಿಸಿ ಲ್ಲೆಂದು ಮರೆಯದಿರಲಿ; ನಿಮಿಷ ಮಾತ್ರಕೆ ನಾನಿದನು ಮರೆಯದಿರಲಿ; ಅಳಲಿನಾ ಹೊರೆಯ ಸ್ವಪ್ನ ಜಾಗೃತಗಳಲಿ ಧರಿಸಿರಲಿ ನಾನು.

೮೦

ಹೇ ಕೀರ್ತಿಭಾನು, ಅಪ್ರಯೋಜಕವಾಗಿ ಆಗಸದಿಯಲೆಯುವಾ ಗ್ರೀಷ್ಮ ಋತುವಿನಾ ಮೇಘಶೇಷದಂದದಿಹೆನು ನಾನು. ನಿನ್ನ ಬೆಳಕಿನಲಿ ಸೇರಿಸುವ

ಸಲುವಾಗಿ ನಿನ್ನ ಸ್ಪರ್ಶವದು ಮೋಘವಿದನು ಕರಗಿಸಿಲ್ಲ; ನಿನ್ನಿಂದ ಬೇರ್ಪಟ್ಟು ತಿಂಗಳನು, ವರುಷವನು ಎಣಿಸುತಲಿಹೆನು ನಾನು.

ನೀ ನಿಂತು ಬಯಸಿದೊಡೆ, ನಿಸ್ನಾಟವಿದಾಗಿಹುದೊಡೆ, ಎನ್ನ ಅಶಾಶ್ವತವಾಗಿಹ ಶೂನ್ಯತೆಯು ತೆಗೆದು, ಬಣ್ಣವನ್ನು ಬಳಿಯುದಕೆ, ಸುವರ್ಣ ದಾಲೇಪವನು ಕೊಡು, ಪ್ರಾಬಲ್ಯದಾಗರದ ಗಾಳಿಯುಲಿ ತೇಲಿಸದನು, ವೈಚಿತ್ರ್ಯ ವೈವಿಧ್ಯದೊಳು ಬಿಡಿಸದನು.

ಆಟವಿದ ನಿನ್ನೊಮ್ಮೆ ಇರುಳಿನಲಿ ಕೊನೆಗೊಳಿಸುವಾ ಬಯಕೆ ನಿನಗಿಹುದಾದೊಡೆ, ಅಥವ ಸ್ವಚ್ಛವಾಗಿಹ ಪಾರದರ್ಶಕತ್ವದಾ ಶೈತ್ಯದಲಿ, ಅಂಧಃಕಾರದಲಿ, ಅಥವ ಶ್ವೇತಪ್ರಭಾತದಾ ಮಂದಹಾಸದಲಿ ಕರಗುತಲಿ, ಕಣ್ಮರೆಯಾಗುವೆನು ನಾನು.

೮೧

ನೈಗಳ್ಪತನದಾ ಅನೇಕ ದಿನಗಳು ಕಳೆದುಹೋಗಿಹ ಕಾಲವನು ಕುರಿತು ಶೋಕಿಸಿದ್ದೆನು ನಾನು. ಆದರದು ಕಳೆದುಹೋಗಿಲ್ಲ ಪ್ರಭು. ಎನ್ನ ಜೀವನದ ಪ್ರತಿಯೊಂದು ಗಳಿಗೆಯನು ನಿನ್ನ ಕೈಗಳಲಿ ಹಿಡಿದಿರುವೆ ನೀನು.

ವಸ್ತುಗಳ ಅಂತಃಕರಣದೊಳಗಡಗಿದ್ದು, ಬೀಜಗಳಿಗೆ ಮೊಳಕೆಯನು ತರುತ, ಮೊಗ್ಗುಗಳನು ವಿಕಸಿಸುತ, ಮಾಗಿದಾ ಕುಸುಮಗಳನು ಫಲಭರಿತವಾಗಿಸುತ ನೀನಿಹೆ.

ಬಳಲಿಕೆಯಿಂದ, ನೈಗಳ್ಪತನದಿಂದ ಹಾಸಿಗೆಯಲೊರಗಿದೆನು ನಾನು; ಎನ್ನ ಕಾರ್ಯಗಳೆಲ್ಲ ಪೂರ್ಣವಾಗಿಹವೆಂದೆಣಿಸಿದೆನು ನಾನು. ಪ್ರಭಾತ ಕಾಲದಲೆಚ್ಚೆತ್ತು ಪುಷ್ಪ ವೈಚಿತ್ರ್ಯದಿಂದ ತುಂಬಿರುವಯೆನ್ನ ತೋಟವನು ನೋಡಿದೆನು ನಾನು.

೮೨

ಹೆ ಪ್ರಭು, ಅಪರಿಮಿತ ಕಾಲ ನಿನ್ನ ಕೈಯೊಳಗಿಹುದು. ನಿನ್ನ ಗಳಿಗೆಗಳನೆಣಿಸೆ ತಿಳಿಯದೆಮಗೆ

ಹಗಲಿರುಳುಗಳು ಜಾರುತಿಹವು; ಕುಸುಮದಂದದಿ ಅರಳುತಲಿ, ಬಾಡುತಲಿ, ವರುಷಗಳು ಕಳೆಯುತಿಹವು. ಕಾಯುವಾಪರಿ ನಿನಗೆ ತಿಳಿದಿಹದು.

ಅರಣ್ಯ ಕುಸುಮವೊಂದನು ಪರಿಪೂರ್ಣಗೊಳಿಸಿ ನಿನ್ನ ಶತಾಬ್ದಿಗಳೋಡುತಿಹವು.

ಕಳೆದುಕೊಳ್ಳುವ ಸಮಯವೇನಿಲ್ಲ; ಸಮಯದಾ ಅಭಾವದಿಂದ ನಮ್ಮ ಅದೃಷ್ಟ ವೃಕ್ಷವನು ಹತ್ತಬೇಕೀಗ   ಕಾಲಕ್ರಮಣವ ಗೈಯಲಾಗದು; ಅಷ್ಟು ದರಿದ್ರರಾಗಿಹೆವು ನಾವು.

ಪ್ರತಿಯೊರ್ವ ಜಗಳಗಂಟನಿಗೆ ಆತನಾ ಬಯಸಿದಾ ವಸ್ತುಗಳ ನಾ ಕೊಡುತಿರೆ, ಕಾಲವದು ಸಾಗುತಿದೆ; ನಿನಗರ್ಪಿಸಲೆಂದಗ್ರಪೀಠದಲಿರಿಸಿದ ಸರ್ವ ವಸ್ತುಗಳು ಕಾಣೆಯಾದುವು.

ದಿನವು ಕೊನೆಗೊಳ್ಳ ಗಳಿಗೆಯಲಿ ನಿನ್ನ ದ್ವಾರವದು ಮುಚ್ಚುವುದೆಂಬ ಭಯದಿಂದ ಅವಸರದಿ ಬಂದಿಹೆನು ನಾನ; ಆದರಿನ್ನೂ ಸಮಯವಿಹುದೆಂದು ಕಂಡಿಹೆನು ನಾನು.

೮೩

ಅಮ್ಮ, ಎನ್ನ ಶೋಕದಾ ಕಣ್ಣೀರಿಂದ ನಿನ್ನ ಕೊರಳನಲಂಕರಿಸೆ ಮುತ್ತಿನಾ ಹಾರವನು ಹೆಣೆಯುವೆನು ನಾನು.

ತಾರೆಗಳು ಬೆಳಕಿನಾ ಕಾಲ್ಬಳೆಸು ನಿನಗೆಂದು ಮಾಡಿಹವು; ಆದರೆನ್ನ ಸರ ಶೋಭಿಸಲಿಹುದು ನಿನ್ನೆದೆಯ ಮೇಲೆ.

ಐಶ್ವರ್ಯ ಯಶಗಳು ಬರುತಿಹವು ನಿನ್ನೊಳಗಿಂದ; ಅವುಗಳನು ಕೊಡುವ, ಕೊಡದಿರುವ ಇಚ್ಛೆ ನಿನ್ನದಾಗಿಹುದು. ಆದರೆ ಈ ಯೆನ್ನ ದುಃಖವೆನ್ನದೆಯಾಗಿಹುದು; ನಿನಗರ್ಪಿಸಲದನು ತರುವಾಗ ನಿನ್ನನುಗ್ರಹವ ಬಹುಮಾನ ರೂಪದಲಿ ಕೊಡುತಿಹೆ ನೀನೆನಗೆ.

೮೪

ಜಗತ್ತಿನಾದ್ಯಂತ ವಿರಹತಾಪ ಪಸರಿಸಿಹುದು; ಅನಂತದಾಗಸದಿ ಅಗಣಿತದಾಕಾರಗಳಿಗೆ ಜನುಮವನು ಕೊಡುತಿಹುದದು.

ಇರುಳಿನಾದ್ಯಂತ ತಾರೆಗಳು ಮೌನದಲಿ, ತಮ್ಮೊಳಗೆ ಈಕ್ಷಿಸುವ ಅಖಂಡ ವರ್ಷಾಕಾಲದಾ ಅಗಾಧ ಅಂಧಃಕಾರದಲಿ ಪತ್ರನಾದದ ರೂಪದಲಿ ಬರುತಿಹ ವಿರಹತಾಪವದಾಗಿಹುದು.

ಪ್ರೇಮದಲಿ, ಆಸೆಯಲಿ, ಬಾಳ್ವೆಯಾ ಸುಖದುಃಖದಲಿ ಬಲಿತ ಸಮೃದ್ಧವಾಗಿಹ ನೋವಾಗಿಹುದದು; ಈ ನೋವು ಕರಗುತಲಿ ಗೀತರೂಪದಿ ಯೆನ್ನ ಕವಿಹೃದಯದಿಂದ ಹರಿಯುತಿಹುದು.

೮೫

ಅಧಿಪತಿಯ ಶಿಬಿರದಿಂದಲಿ ಮೊದಲಾಗಿ ಹೊರಬರುವ ಶೂರರಾಬಲ ವೆಲ್ಲಿ ಅಡಗಿತ್ತು? ಕವಚ, ಶಸ್ತ್ರಗಳೆಲ್ಲಿದ್ದಿಹವು?

ಅಸಹಾಯಕರಾಗಿ, ದರಿದ್ರರಾಗಿ ತೋರಿದರವರು; ಅಧಿಪತಿಯ ಶಿಬಿರ ದಿಂದಲವರು ಹೊರಬರುವ ದಿನದಿ ಶೂರರ ಮೇಲೆ ಶರವರ್ಷ ಬಿದ್ದಿಹುದು.

ಅಧಿಪತಿಯ ಶಿಬಿರವನು ಹೊಗುವಾಗಲವರದೆಲ್ಲಿ ಅಡಗಿಸಿದ್ದರವರ ಬಲವನು?

ಖಡ್ಗವನು ತ್ಯಜಿಸಿದ್ದರವರು, ಬಿಲ್ಲುಬಾಣವನು ತೊರೆದಿದ್ದರವರು; ಅವರ ಹಣೆಯಲ್ಲಿತ್ತು ಶಾಂತಿ, ಅಧಿಪತಿಯ ಶಿಬಿರವನು ಹೊಗುವಾಗಲವರ ಕರ್ಮಫಲವನು ತ್ಯಜಿಸಿದ್ದರವರು.

೮೬

ನಿನ್ನ ಸೇವಕ ಮೃತ್ಯುವೆನ್ನ ಬಾಗಿಲಿಗೆ ಬಂದಿಹನು. ಅಪರಿಚಿತ ಜಲ ನಿಧಿಯ ದಾಟುತಲಿ ನಿನ್ನ ಸಂದೇಶವನು ತಂದಿಹನೆನ್ನ ಮನೆಗೆ.

ಇರುಳಾಗಿಹುದಂಧಃಕಾರಮಯವಾಗಿ; ಎನ್ನೆದೆಯೊಳಗೆ ಭಯವು ತುಂಬಿಹುದು. ಆದರೂ, ದೀಪವನು ಬೆಳಗಿಸುತ, ಬಾಗಿಲನು ತೆರೆದು

ವಿನಯದಿಂದಲಾತನಿಗೆ ಸ್ವಾಗತವ ಬಯಸುವೆನು ನಾನು ಎನ್ನ ಬಾಗಿಲೊಳು ನಿನ್ನ ಸಂದೇಶಕನು ನಿಂತಿಹನು.

ಕರಗಳನು ಜೋಡಿಸುತ, ಕಣ್ಣೀರ ತೊರೆಯಿಂದಲಾತನಾ ಪೂಜೆಯನು ಮಾಡುವೆನು ನಾನು.

ಆತನಾ ಕಾರ್ಯವನು ಮುಗಿಸುತಲಿ, ಎನ್ನ ಪ್ರಭಾತದಲಿ ಕರ್ರಗಿನ ನೆರಳನ್ನು ಬೀರುತಲಿ ಮರಳುವನವನು; ಎನ್ನ ಏಕಾಂತದಾ ಮನೆಯೊಳಗೆ ನಿನಗರ್ಪಿಸಲೆಂದು ಕೊನೆಯ ನೈವೇದ್ಯವಾಗಿಟ್ಟ ಸಪ್ಪೆಯಾಗಿಹ ಎನ್ನಾತ್ಮವುಳಿಯುವುದು.

೮೭

ಎನ್ನ ಕೊಠಡಿಯ ಮೂಲೆ ಮೂಲೆಯಲಿ ಮತಿಗೆಟ್ಟ ಬಯಕೆಯಿಂದಲರಸಿದೆನು ನಾನವಳನು; ಎನಗೆ ಸಿಕ್ಕಿಲ್ಲವವಳು.

ಚಿಕ್ಕದಿಹುದೆನ್ನ ಮನೆ; ಅದರ ಕಳೆದುಕೊಂಡಿಹ ವಸ್ತುವನು ಮರಳಿ ಪಡೆಯುವುದಸಾಧ್ಯವಾಗಿಹುದು

ಪ್ರಭು, ನಿನ್ನ ಭವನ ಅಪಾರವಾಗಿಹುದು; ಹುಡುಕಲೋಸುಗವವಳನು ನಿನ್ನ ಬಾಗಿಲಿಗೆ ಬಂದಿಹೆನು ನಾನು.

ನಿನ್ನ ಸಂಧ್ಯಾಂಬರದ ಸ್ವರ್ಣಾಂಬರದ ಕೆಳಗೆ ನಿಂತಿಹೆನು ನಾನು; ನಿನ್ನ ಮುಖ ಕಮಲದಾ ದರುಶನಕೆ ಉತ್ಸುಕತೆಯಿಂದಲೀಕ್ಷಿಸುತಿಹೆನು ನಾನು.

ವಸ್ತುಗಳ ದೃಶ್ಯವಾಗಲಶಕ್ಯವಾಗಿಹ ಅನಂತದಾತಲದಲ್ಲಿ ಬಂದಿಹೆನು ನಾನು; ಬಯಕೆಗಳು ಅಲ್ಲಿಲ್ಲ, ಸುಖವೆಂಬುದಲ್ಲಿಲ್ಲ, ಅಶ್ರುಪೂರ್ಣವಾಗಿಹ ನಯನದಾ ಮುಖವಿಲ್ಲವಲ್ಲಿ.

ಎನ್ನ ಶೂನ್ಯ ಜೀವನವ ಮುಳುಗಿಸಾ ಸಾಗರದಿ, ಅಗಾಧವಾಗಿಹ ಪೂರ್ಣತೆಯೊಳಗೆ ಧುಮುಕಿಸದನು. ವಿಶ್ವದಾ ಸಮಸ್ತದಲಿ ಕಣ್ಮರೆಯಾದಾ ಮಧುರ ಸ್ಪರ್ಶದಾ ಅನುಭವವು ಸಿಗಲೆನಗೊಂದುಸಲ.

೭೮

ಪಾಳುಬಿದ್ದಿಹ ದೇಗುಲದ ದೇವಿ! ಮುರಿದು ಬಿದ್ದಿಹ ವೀಣೆಯಾತಂತಿಗಳು ನಿನ್ನ ಗುಣಗಾನವನು ಹಾಡದಿವೆ. ನಿನ್ನ ಪೂಜೆಯಾ ಸಮಯವನು ಸಾರುತಿಹ ಘಂಟೆಗಳು ಸ್ತಬ್ಧವಾಗಿಹವು ಸಂಜೆಯಲಿ. ನಿನ್ನ ಸನಿಯದಾ ಗಾಳಿ ಮೌನದಿಂದಲಿ ಪ್ರಶಾಂತವಾಗಿಹುದು.

ಕಟ್ಟೆಯಿಲ್ಲದಾ ವಸಂತ ಮಾರುತನು ನಿನ್ನ ಏಕಾಂತ ನಿವಾಸದೊಳು ಬರುತಿಹನು. ಪೂಜೆಯಲಿ ನಿನಗರ್ಪಿಸದ ಕುಸುಮಗಳ ಸುದ್ದಿಯನು ತರುತಿಹನವನು.

ಬಯಕೆಗಳು ಪೂರ್ಣಗೊಳ್ಳದಾ ನಿನ್ನ ಮೊದಲಿನಾ ಪೂಜಕನು ಆಸೆಯಿಂದಲಲೆಯುತಿಹನು. ಸಂಜೆಯಾ ಬೆಳಕು ನೆರಳುಗಳು, ಧೂಳಿಯಾ ಅಂಧಃಕಾರದೊಳು ಸೇರುತಿರೆ, ಎದೆಯೊಳಗೆ ಹಸಿವೆಯನು ತುಂಬುತಲಿ ಪಾಳು ಬಿದ್ದಿಹ ದೇಗುಲಕೆ ಬರುತಿಹನವನು

ಪಾಳು ಬಿದ್ದಿಹ ದೇಗುಲದ ದೇವಿ, ಉತ್ಸವದ ದಿನಗಳನೇಕ ಮೌನದಿಂದಲಿ ನಿನ್ನೆಡೆಗೆ ಬರುತಿಹವು. ದೀಪವನು ಬೆಳಗಿಸದೆನೆ, ನಿನ್ನ ಪೂಜೆಯಾ ಇರುಳುಗಳು ಕಳೆಯುತಿಹವು.

ಮೋಸಗೊಳಿಸುವ ಕಲೆಯಲ್ಲಿ ನುರಿತವರು ಅನೇಕ ಪ್ರತಿಮೆಗಳನು ರಚಿಷುತಿಹರು. ಕಾಲದಾಗಮನದೊಳು ಮೂಲೆಯಲಿ ಬಿದ್ದಿರುವ ಪವಿತ್ರಸಾ ತೊರೆಯೊಳಗೆ ಅಡಗುತಿಹವಾ ಪ್ರತಿಮೆಗಳು.

ಅಮರವಾಗಿಹ ಅಲಕ್ಷದಲಿ ಪಾಳು ಬಿದ್ದಿಹ ದೇಗುಲದ ದೇವಿಯು ಪೂಜಿತಳಾಗಿ ಉಳಿಯುವಳು.

೭೯

ಗದ್ದಲದ, ತಾರಕದ ಶಬ್ದಗಳನು ನಾನುಚ್ಚರಿಸಬಾರದೆಂದು ಎನ್ನ ಪ್ರಭುವಿನಾ ಮನದೊಳಿಹುದು. ಇಂದಿನಿಂದಲೆ ಪಿಸುಗುಟ್ಟಿ ನಡೆಯುವೆನು ನಾನು. ಎನ್ನೆಡೆಯ ಮಾತುಗಳು ಹಾಡಿನಾ ಮರುಗುವಿಕೆಯಲಿ ಬರುವುವು.

ಅರಸನಾ ಸಂತೆಯಲಿ ಆವಸರದಿ ಮಾನವರು ಓಡುತಿಹರು. ಮಾರಾಳಿ, ಗಿರಾಕಿಗಳಿಹರಲ್ಲಿ, ಆದರೆ, ಕರ್ಮಬಾಹುಳ್ಯದಾ ದಿನದ ಮಧ್ಯದಲಿ, ಆಯುಕ್ತ ಕಾಲದಲಿ ಬಿಡುವು ಸಿಕ್ಕಿಹುದೆನಗೆ.

ಕುಸುಮಗಳ ವಿಕಸನದ ಕಾಲವಿದಲ್ಲ; ಆದರೂ, ಕುಸುಮಗಳಾಗಮಿಸಲೆನ್ನ ತೋಟದಲಿ; ಮಧ್ಯಾಹ್ನದಾ ಭೃಮರಗಳಾಲಸ್ಯಮಯ ಗಾಯನವನಾರಂಭಿಸಲಿ.

ಗಂಟೆಕಟ್ಟಲೆಯ ಸಮಯವನು ಒಳಿತು ಕೆಟ್ಟದರ ಜಗಳದಲಿ ಕಳೆದಿಹೆನು ನಾನು. ಆದರೆನ್ನ ಬರಿದು ದಿನಗಳ ಆಟದಾ ಸಾಥಿಯೆನ್ನ ಹೃದಯದಾಕರ್ಷಣದಿ ಸಂತಸವ ಪಡೆಯುತಿಹನು; ಸಂಬಂಧ ರಹಿತದಾ ಆದಾವ ತ್ವರಿತದಾ ನಿಷ್ಪ್ರಯೋಜಕ ಕರೆಯು ಬಂದಿಹುದೆಂದು ತಿಳಿಯದೆನಗೆ.

೯೦

ಮೃತ್ಯುವಾಗಮಿಸಿ ನಿನ್ನ ಬಾಗಿಲನು ಬಡೆಯುವಾ ದಿವಸದಲಿ ಆತನಿಗರ್ಪಿಸಲು ನಿನ್ನೊಡನೇನಿಹುದು?

ಎನ್ನ ಜೀವನದ ಪೂರ್ಣ ಘಟವನೆನ್ನ ಅತಿಥಿಯಾ ಸಮಕ್ಷಮದಿ ಇರಿಸುವೆನು ನಾನು—ಆತನನು ಬರಿಗೈಗಳಲಿ ಮರಳಿಸೆನು ನಾನು.

ಎನ್ನ ಕೊನೆಯ ಕಾಲದಲಿ, ಮೃತ್ಯುವಾಗಮಿಸೆನ್ನ ಬಾಗಿಲನು ಬಡೆಯುವಾ ಕಾಲದಲಿ, ತಣ್ಪಿನಾ ದಿವಸಗಳ, ಬೆಚ್ಚಗಿನ ಇರುಳುಗಳ ಸಂಪೂರ್ಣ ಮಧುರ ದ್ರಾಕ್ಷಾರಸವ, ತ್ವರಿತದಲಿ, ನಿಧಾನದಲಿ, ಗಳಿಸಿದಾಯೆನ್ನ ದುಡಿಮೆಯನಾತನಾ ಸಮಕ್ಷಮದಿ ಇರಿಸುವೆನು ನಾನು.

೯೧

ಹೆ ಮೃತ್ಯು, ಎನ್ನ ಜೀವನದ ಸಾರ್ಥಕತ್ವದ ಮೃತ್ಯು, ನೀನಿಲ್ಲಿ ಬಂದೆನ್ನ ಕಿವಿಯೊಳಗರುಹು!

ದಿನದಿನಕೆ ನಿನಗೆಂದು ಕಾಯುತಲಿದ್ದಿಹೆನು ನಾನು; ನಿನಗಾಗಿ ಜೀವನದ ಸುಖ ದುಃಖಗಳನನು ಭವಿಸಿಹೆನು ನಾನು.

ಗೌಪ್ಯದಾ ಅಗಾಧದಲ್ಲಿನ್ನ ಸರ್ವಸ್ವ, ಎನ್ನೊಡನಿಹ ಸರ್ವವಸ್ತುಗಳು ಎನ್ನ ಸರ್ವ ಬಯಕೆಗಳು, ಎನ್ನ ಸರ್ವ ಪ್ರೇಮವಿದು ನಿನ್ನೆಡೆಗೆ ಸದಾಕಾಲದಲಿ ಹರಿದಿಹುದು.

ಕುಸುಮಗಳು ಹೆಣೆದಿಹವು; ಮದುಮಗನ ಮಾಲೆ ಸಿದ್ಧವಾಗಿಹುದು. ಮದುವೆಯಾ ಮೇಲೆ ಮದುಮಗಳ ಪಿತನ ಮನೆಯನು ತೊರೆಯುವಳು; ಇರುಳಿನಾ ಏಕಾಂತದಲವಳ ಪ್ರಭುವಿಗೆ ಭೇಟಿಯನು ಕೊಡುವಳವಳು.

೯೨

ಎನ್ನ ಜಗದ ಮೇಲಣದೃಷ್ಟಿನಶಿಸುವಾದಿನ ಬರುತಿಹುದೆಂದು, ಎನ್ನ ಕಣ್ಗಳಲಿ ಕೊನೆಯ ಪರದೆಯನು ಹರಡಿ, ಎನ್ನ ಪ್ರಾಣವು ಮೌನದಿಂದಲಿ ಬಿಡುವ ಪಡೆಯುವುದೆಂದು ತಿಳಿದಿಹೆನು ನಾನು.

ಆದರೂ, ಮೊದಲಿನಾ ತೆರದಿ, ಇರುಳಿನಲಿ ತಾರೆಗಳು ಕಾಯುವುವು, ಸುಪ್ರಭಾತದಾ ಉದಯವಾಗುವುದು; ಸಾಗರದ ತರಂಗಗಳಂದದಿ ಗಂಟೆಗಳು ಸುಖ ದು:ಖಗಳ ಹೊರುತ ಬಿಸುಸುಯ್ಯುವುವು.

ಎನ್ನ ಜೀವನದ ಅಂತ್ಯವಿದನೆಣಿಸುತಿರೆ, ಸಮಯದಾ ಗಡಿಯು ಒಡೆಯುತಿಹುದು; ನಿನ್ನ ಅಲಕ್ಷಿತೈಶ್ವರ್ಯದಿ ತುಂಬಿದ ನಿನ್ನ ಜಗವನು ಮೃತ್ಯುವಿನ ಬೆಳಕಿನಲಿ ನೋಡುತಿಹೆನು ನಾನು ಅಧೋಸ್ಥಳವದರವಪರೂಪವಾಗಿಹುದು, ಅಪರೂಪವಿಹವದರ ಕ್ಷುದ್ರಜೀವಿಗಳು

ವ್ಯರ್ಥದಿಂದಲಿ ನಾನು ಬಯಸಿದಾ ವಸ್ತುಗಳು, ಎನಗೆ ದೊರಕಿದಾ ವಸ್ತುಗಳು ಕಳೆದು ಹೋಗಲಿ. ಸದಾಕಾಲದಲಿ ಕಡೆಗಣಿಸಿ ಬಿಸುಟಿದಾ ನೋಡದಿಹಾ ವಸ್ತುಗಳು ನಿಜವಾಗಿ ಸಿಗಲೆನಗೆ.

೯೩

ಬಿಡುವಿನಾ ಕಾಲ ಸಿಕ್ಕಿಹುದೆನಗೆ. ಬಂಧುಗಳೆ, ಕೊಡಿರೆನಗೆ ನಿರ್ಗಮನದಾ ಅನುಮತಿಯನು! ನಿಮಗೆಲ್ಲಾ ಪ್ರಣಾಮವನು ಮಾಡುತಲಿ ಹೋಗುವೆನು ನಾನು.

ಎನ್ನ ಬಾಗಿಲಿನ ಬೀಗದಾ ಕೈಗಳನು ಮರಳಿಕೊಡುತಿಹೆನು ನಾನೀಗ-ಎನ್ನ ಮನೆಯಮೇಲಣ ಅಧಿಕಾರವನು ಬಿಟ್ಟುಕೊಡುತಿಹೆನು ನಾನು. ನಿಮ್ಮಿಂದ ಕೊನೆಯ ಸಿಹಿಯಾದ ಮಾತನು ಮಾತ್ರ ಬಯಸಿಹೆನು ನಾನು.

ಬಹುಕಾಲದಿಂದಲಿ ನೆರೆಕರೆಯವರಾಗಿ ನಾವಿದ್ದೆವು; ಆದರೆ, ಎನ್ನ ಸ್ವೀಕಾರಗಳು ಕೊಡುಗೆಗಳನು ಮಿಕ್ಕಿಹವು. ಈಗ ಬಂದಿಹುದಾ ದಿವಸ; ಎನ್ನ ಕತ್ತಲೆಯ ಮೂಲೆಯನು ಬೆಳಗಿಸಿದ ದೀಪವಾರಿಹುದು. ಆದೇಶ ಬಂದಿಹುದು; ಎನ್ನ ಪಯಣಕೆ ಸಿದ್ಧನಾಗಿಹೆನು ನಾನು.

೯೪

ಈ ಯೆನ್ನ ನಿರ್ಗಮನದಾ ಕಾಲದಲಿ, ಮಿತ್ರರಿರಾ, ಒಳ್ಳೆಯದೆನೆ ಬಯಸಿರೆನಗೆ! ಆಗಸದಿ ಪ್ರಭಾತಕಾಲವು ತುಂಬಿ ತುಳುಕಿಹುದು; ಎನ್ನೆದುರಿನಾಪಥವು ಸುಂದರವಿಹುದು.

ಅಲ್ಲಿಗೊಯ್ಯಲದೇನಿಹುದೆಂದು ಕೇಳದಿರಿ. ಬರಿಗೈಯ ಬಯಕೆಯಾ ಹೃದಯದಾಪಯಣಿಗನಾಗಿ ಹೊರಡಿಹೆನು ನಾನು

ಎನ್ನ ಮದುವೆಯಾ ಮಾಲೆಯನು ಧರಿಸುವೆನು ನಾನು. ಪಯಣಿಗನ ಕೆಂಪುಕಂದಿನ ವುಡಿಗೆಯೆನಗಿಲ್ಲ; ಎನ್ನ ಪಥವಿದಪಾಯಮಯವಾಗಿಹುದು, ಆದರೂ ಭಯವೆಂಬುದಿಲ್ಲೆನಗೆ.

ಎನ್ನ ಪಯಣ ಕೊನೆಗೊಳ್ಳುತಿರೆ, ಉದಯಿಸುವುದು ಸಂಜೆಯಾ ತಾರೆ, ರಾಜಭವನದೊಳಗಿಂದ ಸಂಧ್ಯಾಕಿರಣದಾ ಗೀತೆಯಾ ಆರ್ತನಾದವು ಹೊರಡುವುದು.

೯೫

ಈ ಜೀವನದ ಮೊದಲ ಹೊಸ್ತಿಲನು ದಾಟುವಾ ಕಾಲದಲಿ ನಾನೆನ್ನ ಅಧೀನದಲ್ಲಿರಲಿಲ್ಲ.

ಮಧ್ಯರಾತ್ರಿಯಲಿ ಕಾನನದ ಮೊಗ್ಗೆ ವಿಕಸಿತವಾದ ಪರಿಯಲಿ, ಈ ವಿಶಾಲ ವೈಚಿತ್ರ್ಯದಲೆನ್ನನರಳಿಸಿದ ಶಕ್ತಿಯದಾಗಿಹುದು! ಪ್ರಭಾತದಾ

ಪ್ರಕಾಶದ ಮೇಲೆನ್ನ ದೃಷ್ಟಿಯನ್ನು ಹೊರಳಿಸಲು ಗಳಿಗೆಯೊಂದರಲಿ ಈ ಜಗದೊಳಗೆ ನಾನು ಪರಿಚಿತನಲ್ಲೆಂದು, ಅನಾಮಿಕವಾದ, ನಿರಾಕಾರದಾ ಗಣನಾತೀತ ವಸ್ತುವೆನ್ನ ಮಾತೆಯ ರೂಪದಲಿ ಬಂದು, ಅದರ ಕೈಯೊಳಗೆನ್ನ ನಿರಿಸಿಹುದೆಂದು ತೋರಿತೆನಗೆ.

ಇದರಂತೆ ಎನ್ನ ಚಿರಪರಿಚಿತದ ವ್ಯಕ್ತಿಯಾ ರೂಪದಲಿ ಅದುವೆ ಗಣನಾತೀತದಾವಸ್ತು ಮರಣದಲಿ ಬರಲಿಹುದು. ಜೀವನವಿದನಕ್ಕರೆಯಿಂದ ಕಾಣುವಾ ತೆರದಲ್ಲಿ ಮರಣವನಕ್ಕರೆಯಿಂದ ಕಾಣುವೆನು ನಾನೆಂದು ತಿಳಿದಿಹುದೆನಗೆ.

ಅವಳ ದಕ್ಷಿಣ ಸ್ತನದಿಂದ ಶಿಶುವ ಬೇರ್ಪಡಿಸೆ ರೋದಿಸುವುದಾ ಶಿಶುವು; ಆದರೆ, ಮುಂದಿನಾ ಗಳಿಗೆಯಲಿ ವಾಮಸ್ತನದಾ ಹಾಲು ದೊರಕಲು ಸಮಾಧಾನವನು ಪಡೆಯುವುದದು.

೯೬

ಇಲ್ಲಿಂದ ಹೊರಡುವಾ ಕಾಲದಲಿ ನಾನಿಲ್ಲಿ ಕಂಡ ವಸ್ತುಗಳನು ಸೌಂದರ್ಯದಲಿ ಹಿಂದೆ ಹಾಕುವ ವಸ್ತು ಬೇರೊಂದಿಲ್ಲವೆಂಬುದೆನ್ನ ಕೊನೆಯ ಸಂದೇಶವಾಗಿರಲಿ.

ಪ್ರಕಾಶದಾ ಸಾಗರದಿ ವಿಕಸಿಸುವ ಈ ಕಮಲದೊಳು ಗುಪ್ತವಾಗಿಹ ಮಧುವಿನಾರುಚಿಯನನುಭವಿಸಿಹೆನು ನಾನೆಂದು ಅನುಗ್ರಹೀತನಾಗಿಹೆನು ನಾನು — ಇದುವೆ ಯೆನ್ನ ಕೊನೆಯ ಸಂದೇಶವಾಗಿರಲಿ.

ಅಸಂಖ್ಯ ಆಕಾರದಿಂ ತುಂಬಿರುವೀ ಆಟದಾ ಭವನದಲೆನ್ನಾಟವಿದ್ದಿಹುದು; ನಿರಾಕಾರದಾ ವ್ಯಕ್ತಿಯ ಮೇಲೆ ಬಿದ್ದಿಹುದೆನ್ನ ದೃಷ್ಟಿಯಿಲ್ಲಿ.

ಸ್ಪರ್ಶಾತೀತವಾಗಿಹ ವ್ಯಕ್ತಿಯಾ ಸ್ಪರ್ಶದಿಂದಲೆನ್ನ ಪೂರ್ಣಶರೀರ, ಸರ್ವೇಂದ್ರಿಯಗಳು ಪುಲಕಿತವಾಗಿಹವು; ಅಂತ್ಯವಿಲ್ಲಿ ಬರುವುದಾದೊಡೆ ಈಗಲೆ ಬರಲದು- ಇದುವೆಯೆನ್ನ ಕೊನೆಯ ಸಂದೇಶವಾಗಿರಲಿ.

೯೭

ನಿನ್ನೊಡನೆ ನಾನಾಡುತಿರೆ, ನೀನಾರೆಂದು ಕೇಳಿಲ್ಲ ನಾನು, ಸಂಕೋಚಭಯಗಳೆನಗಿರಲಿಲ್ಲ, ಎನ್ನ ಜೀವನವು ಕ್ರಾಂತಿಯುತವಾಗಿತ್ತು.

ಮಮ ಮಿತ್ರನಾತೆರದಲ್ಲಿ ಅರುಣೋದಯದ ಕಾಲದಲಿ ಜಾಗ್ರತಗೊಳಿಸುವೆ ನೀನೆನ್ನನು; ನಿನ್ನ ಹಿಂದಿನಿಂದಲಿ ವನಗಳಾ ಗುಂಪಿನಲಿ ಓಡಿಸುವೆ ನೀನು.

ನೀನಂದು ಹಾಡಿದಾ ಗೀತಗಳನರಿಯೆ ಯತ್ನಿಸಿಲ್ಲ ನಾನು. ಎನ್ನ ಕಂಠವಿದು ನಾದವನು ಮಾತ್ರ ಸ್ವೀಕರಿಸಿದುದು. ಅದರ ಆರೋಹ ಅವರೋಹಗಳಲೆನ್ನ ಹೃದಯ ನರ್ತಿಸಿದುದು.

ಆಟದಾ ಸಮಯವೀಗ ಕೊನೆಗೊಂಡಾಗ, ತ್ವರಿತದಿಂದಲದಾವ ಆವೇಶದಾದೃಷ್ಟಿಸಿಕ್ಕಿಹುದೆನಗೆ? ನಿನ್ನ ಪದಗಳನು ದೃಷ್ಟಿಸುತ ಜಗವಿದು ತನ್ನ ಮೌನತೆಯ ತಾರೆಗಳೊಡಗೂಡಿ ಭಯಭಕ್ತಿಯಿಂದಲಿ ನಿಂತಿಹುದು.

೯೮

ಎನ್ನ ಅಪಜಯದ ಪದಕದಿಂದಲಿ, ಹಾರಗಳಿಂದಲಿ ನಿನ್ನನಲಂಕರಿಸುವೆನು ನಾನು. ಸೋತುಹೋಗದೆನೆ ಉಳಿವ ಸಾಮರ್ಥ್ಯವೆನ್ನೊಳಗಿಲ್ಲ.

ಎನ್ನ ಗರ್ವದಾ ನಾಶವಾಗಲಿಕ್ಕಿಹುದೆಂದು, ಎನ್ನ ಜೀವನದ ಸಂಕಲೆಗಳ ಪರಿಮಿತವೇದನೆಯಿಂದೊಡೆಯಲಿಕ್ಕಿಹವೆಯೆಂದು, ಟೊಳ್ಳಾದ ಆಲಗಿನಂದದಿ ಶೂನ್ಯವಾಗಿಹಯೆನ್ನ ಹೃದಯರೋದಿಸಲಿಹುದೆಂದು, ದುಃಖದಿಂದಲಿ ಕಲ್ಲುಗಳು ಕರಗಲಿವೆಯೆಂದು ನಿಶ್ಚಿತವಾಗಿ ತಿಳಿದಿಹುದೆನಗೆ.

ನೂರೆಸಳುಗಳ ಕಮಲವಿದು ಸದಾಕಾಲದಲರಳದೆನೆ ಇರದೆಂದು, ಇದರ ಮಧುವಿನಾ ಗುಪ್ತವಾಗಿಹ ಸ್ಥಳವು ಬಿರಿದಾಗುವುದೆಂದು ನಿಶ್ಚಿತವಾಗಿ ತಿಳಿದಿಹುದೆನಗೆ.

ನೀಲ ಗಗನದೊಳಗಿಂದ ಕಣ್ಣೊಂದೆನ್ನನ್ನೀಕ್ಷಿಸಲಿಹುದು; ಮೌನದಿಂದಲಾದೇಶವನು ಕಳಿಸಲಿಹುದು. ಎನಗೆಂದದಾವುದೂ ಉಳಿಯದಿ

ದ್ದೊಡೆ, ಘೋರ ಮೃತ್ಯುವನು ನಿನ್ನ ಪಾದದಾ ಬಳಿಯಲ್ಲಿ ಸ್ವೀಕರಿಸಲಿಕ್ಕಿಹುದು ನಾನು.

೯೯

ಎನ್ನ ವಾಹನದ ಕಣಿಯನ್ನು ಬಿಟ್ಟುಕೊಡುತಿರೆ, ನೀನದನು ಹಿಡಿಯುವಾ ಕಾಲ ಬರುತಿಹುದೆಂದು ತಿಳಿದಿಹುದೆನಗೆ. ಮಾಡಲಿರುವಾ ಕಾರ್ಯಗಳೆಲ್ಲ ನಿಮಿಷ ಮಾತ್ರದಲಿ ನಡೆಯುವುವು. ವ್ಯರ್ಥವಾಗಿಹುದೀ ಸಂಗ್ರಾಮು.

ಎಲೆಯೆನ್ನ ಹೃದಯವೆ, ಕೈಗಳನು ಹಿಂತೆಗೆದು, ಮೌನದಿಂದ ಅಪಜಯವ ಗೌರವಿಸು; ಸಂಪೂರ್ಣ ಶಾಂತತೆಯಿಂದ ನೀನಿದ್ದೆಡೆಯಲ್ಲಿ ನಿನಗೆ ಸ್ಥಾನ ಸಿಕ್ಕಿದುದು ನಿನ್ನದೃಷ್ಟವೆಂದೆಣಿಸು.

ಮಾರುತನ ಮಂದಶ್ವಾಸದಲೆನ್ನ ದೀಪಗಳೆಲ್ಲ ಆರಿಹೋಗುತಿಹವು; ಅವುಗಳನು ಹೊತ್ತಿಸುವ ಕಾಲದಲೆಲ್ಲವನು ಮರೆಯುತಿಹೆನು ನಾನಾಗಾಗ.

ಆದರೆ, ಬುದ್ಧಿಯನು ಬಳಸುವೆನು ನಾನೀಗ; ನೆಲದಲ್ಲಿ ಚಾಪೆಯನು ಹರಡಿ ಕತ್ತಲಲಿ ಕಾಯುವೆನು ನಾನು; ಎಲೆಯೆನ್ನ ಪ್ರಭುವೆ, ನಿನಗಿಷ್ಟ ಬಂದಾಗ ಮೌನದಿಂದಲಾಗಮಿಸು, ಈ ಚಾಪೆಯಲಿ ಕುಳಿತಿರು.

೧೦೦

ನಿರಾಕಾರದಾ ಪರಿಪೂರ್ಣರತ್ನವನು ಪಡೆಯುವಾ ಬಯಕೆಯಲಿ ಸಾಕಾರ ಸಾಗರದ ಗಾಧದೊಳು ಮುಳುಗಿಹೆನು ನಾನು.

ಸುಳಿಗಾಳಿಗಳಿಂದ ಜರ್ಝರಿತ ವಾದೀದೋಣಿಯೊಳು ಕುಳಿತು ಬಂದರಿಂದ ಬಂದರಿಗೆ ನಡೆಸುವಾ ಪಯಣವಿನ್ನಿಲ್ಲ. ತರಂಗತಲದ ಲೋಲಾಡುವ ಆಟದಾಕಾಲ ಕಳೆದಿಹುದು.

ಮರಣಹೊಂದುತಲಮರತ್ವವನು ಪಡೆಯಲುತ್ಸುಕನಾಗಿಹೆನು ನಾನು.

ಸ್ವರವಿಲ್ಲದಿಹ ತಂತಿಗಳ ಸಂಗೀತವ ವಿರ್ಭವಿಸುವೆಡೆ, ಅಗಾಧಸಾಗರದ ಬಳಿಯಲಿಹ ಸಭಾಭವನದಲೆನ್ನ ಜೀವನದ ವೀಣೆಯನು ಹಿಡಿಯುವೆನು ನಾನು.

ಸದಾಕಾಲದಲಿ ವೀಣೆಯಾ ಸರಿಗೆಗಳನು ಸರಿಪಡಿಸುವೆನು ನಾನು. ಅದರ ಕೊನೆಯ ರೋದನವು ಅಂತ್ಯಗೊಂಡಾಗ, ಮೌನವೀಣೆಯನು ಮೌನ ಪುರುಷನ ಕಾಲಬಳಿಯಲಿರಿಸುವೆನು ನಾನು.

೧೦೧

ಸದಾಕಾಲದಲೆನ್ನ ಜೀವನದಿಯನ್ನ ಗೀತಗಳಿಂದ ನಿನ್ನನರಸಿಹೆನು ನಾನು. ಪ್ರತಿಯೊಂದು ಬಾಗಿಲಿಗೆ ಕಳಿಸಿಹವೆನ್ನನಾ ಗೀತಗಳು; ಅವುಗಳಿಂದ ಲೆನ್ನ ಜಗವನು ಶೋಧಿಸಿಹೆನು ನಾನು; ಸ್ಪರ್ಶಿಸಿಹೆನು ನಾನದನು; ಅದರಿಂದ ಲೆನ್ನ ಸ್ವರೂಪವನು ತಿಳಿದಿಹೆನು ನಾನು.

ಇಂದಿನಾವರೆಗೆ ನಾನು ಕಲಿತಿಹ ಪಾಠಗಳನವು ಕಲಿಸಿಹವೆನಗೆ, ಗುಪ್ತಪಥಗಳನವು ತೋರಿಸಿಹವೆನಗೆ, ಎನ್ನ ಹೃದಯದಿಗಂತದಲನೇಕತಾರೆ ಗಳನವು ತಂದಿಹವನೇಕಸಲ

ಸುಖದುಃಖಗಳ ದೇಶದಾ ವೈಚಿತ್ರ್ಯದಲಿ ದಿವಸದಾದ್ಯಂತ ತಿರುಗಿಸಿಹ ವೆನಗಾ ಗೀತಗಳು; ಕೊನೆಯಲ್ಲಿ ಪೂರ್ಣದಾ ಅಂತ್ಯದಲಿ, ಸಂಧ್ಯಾಕಾಲ ದಲದಾವ ರಾಜಭವನದಾ ದ್ವಾರದಲಿ ತಂದಿಹವಾಗೀತಗಳೆನ್ನನು?

೧೦೨

ನಿನ್ನನ್ನು ತಿಳಿದಿಹೆನು ನಾನೆಂದು ಜಗದೊಡನೆ ಕೊಚ್ಚಿಹೆನು ನಾನು. ಎನ್ನ ಕೃತಿಗಳೆಲ್ಲದರಲಿ ನಿನ್ನ ಪ್ರತಿರೂಪವನು ಕಾಣುತಿಹರವರು. ಅವರಿಲ್ಲಿ ಬಂದು, "ಇವನಾರೆ"ಂದು ಕೇಳುತಿಹರವರು. ಅದಕುತ್ತರವ ಕೊಡಲರಿ ಯೆನು ನಾನು. "ನಿಜವಾಗಿ, ಹೇಳಲರಿಯೆನು ನಾನೆ"ಂದು ಹೇಳಿಹೆನು ನಾನು. ಅಪವಾದವನು ಹೊರಿಸುತಲೆನ್ನಮೇಲೆ ತಿರಸ್ಕರಿಸಿ ಹೋಗುತಿಹ ರವರು; ಮುಂದಹಾಸದಲಿ ಕುಳಿತಿಹೆ ನೀನಲ್ಲಿ.

ಎನ್ನ ಶಾಶ್ವತದ ಗೀತಗಳಲಿ ನಿನ್ನ ಕತೆಗಳನು ತುಂಬಿಹೆನು ನಾನು. ರಹಸ್ಯಗಳೆನ್ನ ಹೃದಯವನು ಬಿಚ್ಚಿ ಹೊರಬರುತಿಹವು. ಅವರಿಲ್ಲಿ ಬಂದು, "ನಿನ್ನ ಸಂಪೂರ್ಣ ಅರ್ಥವನು ಹೇಳಿ"ಂದು ಕೇಳುವರು. ಅದಕುತ್ತ

ರವ ಕೊಡಲರಿಯೆನು ನಾನು. "ಆಹ್! ಅದರರ್ಥವನದಾರು ತಿಳಿದಿಹರು"! ಎಂದು ಹೇಳಿದೆನು ನಾನು. ಮುಗುಳು ನಗೆಯೊಡನೆ ತಿರಸ್ಕರಿಸುತಲೆನ್ನನು ಹೋಗುತಿಹರವರು; ಮಂದಹಾಸದಲಿ ಕುಳಿತಿಹೆ ನೀನಲ್ಲಿ.

೧೦೩

ಎಲೆಯೆನ್ನ ದೇವ, ಎನ್ನಿಂದ್ರಿಯಗಳೆಲ್ಲ ವಿಸ್ತಾರಗೊಳ್ಳುತಲಿ, ನಿನ್ನ ಚರಣ ಕಮಲದಾ ಬಳಿಯೊಳಿಹ ಜಗವನೆನ್ನೊಂದು ಪ್ರಣಾಮದಲಿ ಸ್ಪರ್ಶಿಸಲಿ.

ಬಳಸದಿಹನೀರಿನಾ ಭಾರವನು ಹೊತ್ತು, ಆಗಸದಿ ತೂಗಿರುವ ಅಖಂಡ ವರ್ಷಾಕಾಲದ ಮೇಘದಂದದಿ ನಿನ್ನ ಬಾಗಿಲಲಿ ಎನ್ನೊಂದು ಪ್ರಣಾಮದಲೆನ್ನ ಮನವು ಬಾಗಿಹೋಗಲಿ.

ಎನ್ನ ಸರ್ವಗೀತಗಳು ತಮ್ಮ ವಿವಿಧ ಪ್ರವೃತ್ತಿಗಳನೊಂದಾಗಿ ಮಾಡುತಲೊಂದು ಪ್ರವಾಹವನು ನಿರ್ಮಿಸಲಿ; ಎನ್ನೊಂದು ಪ್ರಣಾಮದಲದು ಮೌನ ಸಾಗರದಿ ಹರಿಯುತಲಿರಲಿ.

ಅಹೋ ರಾತ್ರಿಯಲಿ ಪರ್ವತ ಪಂಜರಕೆ ಮರಳುವಾ ಗೃಹಪ್ರಿಯ ಬಕ ಸಮೂಹದಂದದಿ, ಎನ್ನ ಸಂಪೂರ್ಣ ಜೀವನವು ಎನ್ನೊಂದು ಪ್ರಣಾಮದಲಿ ಅಮರವಾಗಿಹ ತನ್ನ ಗೃಹಾಭಿಗಮನದಾ ಪಯಣವನು ಕೈಕೊಂಡಿರಲಿ.

ಸಂಪೂರ್ಣಂ

ಠಾಗೋರರಿಗೆ ಅವರ ಆಪ್ತ ಸಖ, ಬಂಧು ಬಾಂಧವರ
ಮರಣ ವಾರ್ತೆಯನ್ನು ತಿಳಿಸಿದಾಗ ಪ್ರತಿಯೊಂದು ಸಲವೂ
ಅವರು ಆಕ್ಷೇಪಣೆಯ ಒಂದೇ ಒಂದು ಶಬ್ದವನ್ನೂ ಆಡದೆ ತಮ್ಮೊಳಗೆ
ಅಂತರ್ಮುಖರಾಗಿ ಕೊನೆಗೆ ಬಾಹ್ಯಜಗತ್ತಿಗೆ ಬಂದು

ತಲ್ಲಿ

ಲ್ಲಿ;

..)

B-10 Karnatak Building, Mogal Lane, Bombay 16